Editor: NITYANANDASWAMI Publisher: U. BASAVARAJA RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ದುಡಿಯುವ ಜನರ ಪ್ರಾಣಮಿತ್ರ

ಸಂಪುಟ–17 ಸಂಚಿಕೆ–33 ಆಗಸ್ಟ್ 14–20, 2023 ಪುಟ 16 ರೂ. 10/–
Volume-17 Issue-33 August 14-20, 2023 Pages:16 Price: 10/-



ಸ್ವಾತಂತ್ರ್ಯದ ಹೊಸ್ತಿಲಲ್ಲೆ ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡುವ ದುಷ್ಟ ಸಂಚು

ಆದಿವಾಸಿಗಳ ಸುಸ್ಥಿರ ಅಭಿವೃದ್ಧಿ ಸಾಧ್ಯವೇ?


ಎಲ್ಲರ ಮನೆ ಬಾಗಿಲು ತಟ್ಟುತ್ತಿರುವ 'ಸೌಜನ್ಯ'

'ನ್ಯೂಸ್ ಕ್ಲಿಕ್' ವಿರುದ್ಧ ಗುರಿ ಇಟ್ಟ ಅಭಿಯಾನ

ಸ್ವಾತಂತ್ರ್ಯ ಸಂಗ್ರಾಮ: ಇತಿಹಾಸದ ಪುಟಗಳಿಂದ

‘ನಾನು ಬ್ರಿಟೀಷರಿಂದ ಸ್ವಲ್ಪವೂ ಬೇರೆಯಾಗುವುದಕ್ಕೆ ಇಷ್ಟಪಡುವುದಿಲ್ಲ’ ಸರ್ದಾರ್ ವಲ್ಲಭಬಾಯ್ ಪಟೇಲ್

‘ಬರ್ಕ್ ವೈಟ್ ಅವರು ಸರ್ದಾರ್ ವಲ್ಲಭಬಾಯ್ ಪಟೇಲ್ ಅವರ ಜೊತೆಗಿನ ಸಂದರ್ಶನದ ಭಾಗ ಇಲ್ಲಿದೆ. ಇದು ಸರ್ದಾರ್ ವಲ್ಲಭಭಾಯ್ ಪಟೇಲ್ ಅವರು ಯಾರ ಪರ ಇದ್ದರು ಎಂಬುದನ್ನು ತೋರಿಸುತ್ತದೆ. ಅವರು ಸಮಾಜವಾದಿಗಳ ಮತ್ತು ಕಮ್ಯೂನಿಸ್ಟರ ವಿರೋಧಿಯಾಗಿದ್ದರು. ಹಿಂದುತ್ವವಾದಿ ಆಗಿದ್ದರು. ದೊಡ್ಡ ಭೂಮಾಲೀಕರ ಪರವಾಗಿದ್ದರು. ಭೂಸುಧಾರಣೆ ಜಾರಿಗೆ ಅಡ್ಡಿಯಾಗಿ ಭೂರಹಿತರಿಗೆ ಭೂಮಿ ಸಿಗದಂತೆ ಮಾಡಿದರು. ರಾಜರುಗಳ ಆಸ್ತಿ ಸರ್ಕಾರದ ವಶವಾಗದಂತೆ ನೋಡಿಕೊಂಡರು. ಹಾಗೂ ರಾಜ ವಂಶಸ್ಥರಿಗೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿಯೂ ಅಧಿಕಾರ ಕೊಟ್ಟರು. ‘ನಾನು ಬ್ರಿಟೀಷರಿಂದ ಸ್ವಲ್ಪವೂ ಬೇರೆಯಾಗುವುದಕ್ಕೆ ಇಷ್ಟಪಡುವುದಿಲ್ಲ’ ಎಂದರು. ‘ಬರ್ಕ್ ವೈಟ್ ಕಂಡ ಭಾರತ’ ಪುಸ್ತಕದಿಂದ. ಕನ್ನಡಕ್ಕೆ ಅನುವಾದ ಡಾ.ಕೆ.ಆರ್. ಸಂಧ್ಯಾರೆಡ್ಡಿ.



ನಾನು ಸಾಕಷ್ಟು ಖರ್ಜೂರಗಳನ್ನು ತಿಂದಾಗ ಮೇಲೆ ಮಾರ್ಮಲೆಡ್ ಹಚ್ಚಿದ ಪೋಸ್ಟ್ ಗಳು, ಸೇಬು, ಕಿತ್ತಳೆಗಳು, ಸಣ್ಣಗೆ ಕೊಚ್ಚಿದ ಪಿಸ್ತಾ ಬೀಜಗಳನ್ನು ಹಾಕಿ ಮಾಡಿದ ಪುಟ್ಟ ಪುಟ್ಟ ಕೇಕ್ ಗಳೂ ನನ್ನ ಮುಂದೆ ಬಂದವು. ಮೊಟ್ಟೆಯ ಸ್ಪರ್ಶವೂ ಇಲ್ಲದ ಸಂಪೂರ್ಣ ಸಸ್ಯಾಹಾರ ಉಪಹಾರ ನನ್ನ ಮುಂದಿತ್ತು. ಪಟೇಲರ ಹಿಂದೂಯಿಸಂ ಬಗ್ಗೆ ನನಗೆ ಯಾವಾಗಲೂ ಮರೆತೇ ಹೋಗುತ್ತಿತ್ತು. ಭಾರತದ ಜಿಮ್ ಫಾರ್ಲೆ ಎಂದು ಕರೆಯಲ್ಪಡುತ್ತಿದ್ದ ಅವರು ಯಾವಾಗಲೂ ಒಬ್ಬ ರಾಜಕಾರಣಿಯಾಗಿಯೇ ನೆನಪಾಗುತ್ತಿದ್ದರು. ಪಟೇಲರು ಆಹಾರ ಮತ್ತು ಉಡುಗೆಯ ವಿಷಯದಲ್ಲಿ ನೆಹರೂಗಿಂತ ಹೆಚ್ಚು ಹಿಂದೂ ಆಗಿದ್ದರು. ಆದರೂ ಅವರು ವ್ಯಾವಹಾರಿಕ ರಾಜಕಾರಣಿ ಹಾಗೂ ಅತ್ಯುತ್ತಮ ಸಂಘಟಕರಾಗಿದ್ದರು. ನೆಹರೂ ತಮ್ಮ ಭಾವಾವೇಶದ ಮಾತುಗಾರಿಕೆ ಹಾಗೂ ಉದಾರ ವಿಚಾರಗಳಿಂದ ಜನರ ಮನಸ್ಸನ್ನು ಸೆರೆಹಿಡಿದರೆ, ಪಟೇಲರು ಸಂಪುಟದಲ್ಲಿ ಹಾಗೂ ಪ್ರಾಂತೀಯ ಶಾಸನ ಸಭೆಗಳಲ್ಲಿ ತಮ್ಮಂತಹುದೇ ವಿಚಾರಗಳನ್ನು ಹೊಂದಿದ ಜನರನ್ನು ಸೇರಿಸಿಕೊಂಡು ಖಾಸಗಿ ಎಂದೇ ಹೇಳಬಹುದಾದ ರಾಜಕೀಯ ಪಕ್ಷವನ್ನು ತುಂಬಾ ವ್ಯವಸ್ಥಿತವಾಗಿ ಕಟ್ಟಿಕೊಂಡಿದ್ದರು. ಈಗ ಈ ಪ್ರಕ್ರಿಯೆಯನ್ನು ರಾಜಸಂಸ್ಥಾನಗಳಿಗೂ ವಿಸ್ತರಿಸತೊಡಗಿದ್ದರು. ಹೀಗಾಗಿಯೇ ಜನತೆಯ ಅಭಿಪ್ರಾಯ ವಿರುದ್ಧ ದಿಕ್ಕಿನಲ್ಲಿ ರೂಪುಗೊಳ್ಳುತ್ತಿದ್ದರೂ ಅವರು ಜನತೆಯ ಹೆಸರಿನ ಸೋಗಿನಲ್ಲಿ ಹಳೆಯ ಫ್ಯೂಡಲ್ ವ್ಯವಸ್ಥೆಯ ಚೌಕಟ್ಟನ್ನು ಬಹುತೇಕ ಹಾಗೇ ಉಳಿಯುವಂತೆ ಮಾಡಲು ಸಾಧ್ಯವಾಗಿರಬೇಕು.

‘ನಾನು ಮತ್ತು ನೆಹರೂ ಬ್ರಿಟನ್ ಜೊತೆ ಸ್ನೇಹಪರವಾಗೇ ಇದ್ದೇವೆ’

ನಾನು ಅವರ ಜೊತೆಗಿನ ಸಂದರ್ಶನವನ್ನು ’ಭಾರತ ಮತ್ತು ಗ್ರೇಟ್ ಬ್ರಿಟನ್ ನಡುವಿನ ಸಂಬಂಧ ಈಗ ಹೇಗಿದೆ’ ಎಂಬ ಪ್ರಶ್ನೆಯಿಂದ ಆರಂಭಿಸಿದೆ. ’ನಾನು ಬ್ರಿಟೀಷರಿಂದ ಸ್ವಲ್ಪವೂ ಬೇರೆಯಾಗುವುದಕ್ಕೆ ಇಷ್ಟಪಡುವುದಿಲ್ಲ’ ಎಂದು ಸರ್ದಾರ್ ಹೇಳಿದರು. (ಸ್ವಾತಂತ್ರ್ಯಕ್ಕೆ ಮೊದಲು ಯಾವುದಾದರೂ ನಾಯಕ ಈ ರೀತಿ Dominion ಸ್ಥಾನದಲ್ಲಿ ಉಳಿಯುವ ಮಾತನಾಡಿದ್ದರೆ ರಾಜಕೀಯವಾಗಿ ಆತನ ಇತಿಶ್ರೀ ಆಗಿಬಿಡುತ್ತಿತ್ತು ಎಂದು ನಾನು ನೆನಪಿಸಿಕೊಂಡೆ) ನಾವು ಇಷ್ಟೆಲ್ಲಾ ಹೋರಾಟ ಮಾಡಿದರೂ ಇಂದು ಬ್ರಿಟನ್ ಜೊತೆ ನಮ್ಮ ಸಂಬಂಧ ಸೌಹಾರ್ದಯುತವಾಗೇ ಇದೆ. ಈ ಹೋರಾಟ ಅಹಿಂಸೆ ಆಧರಿಸಿತ್ತಾದ ಕಾರಣ ಯಾವ ಕಹಿ ಭಾವನೆಯೂ ಉಳಿದಿಲ್ಲ. ನೆಹರೂ 12 ವರ್ಷ ಸೆರೆಮನೆಯಲ್ಲಿದ್ದರು. ಇದು ಹೆಚ್ಚೂ ಕಡಿಮೆ ನಾನು ಸೆರೆಮನೆಯಲ್ಲಿದ್ದಷ್ಟು ಅವಧಿಗೆ ಸಮ. ಆದರೂ ನಾನು ಮತ್ತು ನೆಹರೂ ಇಬ್ಬರೂ ಬ್ರಿಟನ್ ಜೊತೆ ಸ್ನೇಹಪರವಾಗೇ ಇದ್ದೇವೆ’ ಎಂದರು.

ಅಮೆರಿಕದ ಜೊತೆ ಹೇಗೆ? ಭಾರತವು ಅಮೆರಿಕದಿಂದ ಏನು ಬಯಸುತ್ತದೆ ಎಂದು ನಾನು ಕೇಳಿದೆ

ಅಮೆರಿಕ ಇಂಜಿನಿಯರಿಂಗ್ ತಜ್ಞರನ್ನು ಹಾಗೂ ಬಂಡವಾಳ ಸಾಲುಗಳನ್ನು ಒದಗಿಸುವ ಮೂಲಕ ಸಹಾಯ ಮಾಡಬಹುದು. ನಾವು ಬಹಳಷ್ಟು ಹಣವನ್ನು ಒಟ್ಟುಗೂಡಿಸಬೇಕಾಗಿದೆ. ಇದಕ್ಕಾಗಿ ಅಮೆರಿಕದ ನೆರವು ಕೇಳದೆ ಬೇರೆ ದಾರಿಯೇ ಇಲ್ಲ ಎಂದರು. ಅವರು ‘ಬೇರೆ ದಾರಿಯೇ ಇಲ್ಲ’ ಎಂಬ ಪದ ಬಳಸಿದ್ದು ನನಗೆ ಅಚ್ಚರಿ ತರಲಿಲ್ಲ. ವಸಾಹತುಶಾಹಿಯ ದೀರ್ಘ ಅನುಭವವನ್ನು ಹೊಂದಿದ ಭಾರತ ರಾಜಕೀಯವಾಗಿ ಯಾವುದೇ ದೇಶ ಮೇಲುಗೈ ಪಡೆಯುವುದರ ಬಗ್ಗೆ ಎಷ್ಟು ಹೆದರುತ್ತದೆ ಎಂಬುದು ನನಗೆ ಚೆನ್ನಾಗಿ ತಿಳಿದಿತ್ತು. ಕೈಗಾರಿಕೀಕರಣಕ್ಕಾಗಿ ಭಾರತಕ್ಕೆ ವಿದೇಶಿ ಬಂಡವಾಳ ಬಹಳ ಅಗತ್ಯವಾಗಿತ್ತು. ಆದರೆ ಈ ಬಂಡವಾಳವನ್ನು ಹಿಂಬಾಲಿಸಿ ಬರುವ ವಿದೇಶಿ ಮೇಲುಗೈ ಆಗುವಿಕೆ ಬಗ್ಗೆ ಅಷ್ಟೇ ಎಚ್ಚರಿಕೆಯಿಂದ ಇರಬೇಕಾಗಿತ್ತು. ಪಟೇಲರು ಇದರ ಸಾರಾಂಶವನ್ನು ‘ನಿಯಂತ್ರಣವು ಬಹುತೇಕ ಭಾರತದ ಕೈಯಲ್ಲೇ ಇರುವುದಾದರೆ ಹೊರಗಿನ ನೆರವಿಗೆ ಸಾಕಷ್ಟು ಅವಕಾಶಗಳಿವೆ’ ಎಂಬ ಮಾತುಗಳಲ್ಲಿ ವ್ಯಕ್ತಪಡಿಸಿದರು.

ಭಾರತವು ಸಮಾಜವಾದಿ ತತ್ವದ ಕಡೆಗೆ ತಿರುಗಬಹುದೆಂಬ ಚಿಂತೆ

ಹೊಸದಾಗಿ ಸ್ವಾತಂತ್ರ್ಯ ಪಡೆದ ಭಾರತವು ಸಮಾಜವಾದಿ ತತ್ವದ ಕಡೆಗೆ ತಿರುಗಬಹುದು ಎಂದು ಕೆಲವು ಭಾರತೀಯ ಬಂಡವಾಳಗಾರರಿಗೆ ಚಿಂತೆಯಾಗಿದೆ ಎಂಬುದನ್ನು ನಾನು ಕೇಳಿದ್ದೆ. ಕೈಗಾರಿಕೆಗಳನ್ನು ಯೋಜಿಸುವ ಹಾಗೂ ಲಾಭಗಳನ್ನು ಮಿತಗೊಳಿಸಬೇಕಾದ ಪ್ರಾಮುಖ್ಯತೆಯ ಬಗ್ಗೆ ನೆಹರೂ ಆಗಾಗ ಹೇಳುತ್ತಲೇ ಇದ್ದರು. ಆದರೆ ನಾನು ಗಮನಿಸಿದಂತೆ ಈ ಬಗ್ಗೆ ಸರ್ಕಾರ ತೀವ್ರ ಕ್ರಮಗಳನ್ನೇನೂ ಕೈಗೊಳ್ಳುವುದಿಲ್ಲ ಎಂದು ಕೆಲವು ವ್ಯಾಪಾರದಾರರಿಗೆ ವಿಶ್ವಾಸವಿದ್ದಂತಿತ್ತು. ರಾಷ್ಟ್ರೀಕರಣವು ಕೇವಲ ಒಂದು ಘೋಷಣೆ ಎಂದು ಬಿರ್ಲಾ ಹೇಳಿದ ಮಾತು ನನಗೆ ನೆನಪಾಯಿತು. ಮತ್ತು ಪಟೇಲರೂ ಸಹಾ ರಾಷ್ಟ್ರೀಕರಣವು ಅನೇಕ ವರ್ಷಗಳಿಂದ ಕಾಂಗ್ರೆಸ್ಸಿನ ನಿರ್ಣಯವಾಗಿದೆ ಎಂದು ಹೇಳುತ್ತಿದ್ದರೂ ತಕ್ಷಣದಲ್ಲಿ ಭಾರತವು ಮಿಶ್ರ ಆರ್ಥಿಕ ನೀತಿಯನ್ನೇ ಅಳವಡಿಸಿಕೊಂಡು ಬರುತ್ತದೆ ಎಂದು ಸೂಚಿಸಿದ್ದರು.



"ಈಗಿರುವ ಬಹುತೇಕ ಕೈಗಾರಿಕೆಗಳನ್ನು (ಅದರಲ್ಲಿ ಜವಳಿ ಕೈಗಾರಿಕೆಯೂ ಒಂದು) ಖಾಸಗಿ ಉದ್ಯಮವಾಗಿಯೇ ಉಳಿಸಿಕೊಂಡು ಬರಲಾಗುವುದು. ಆದರೆ ಬ್ಯಾಂಕುಗಳು, ವಿಮೆ, ಹಡಗು ಕೈಗಾರಿಕೆ ಹಾಗೂ ಕಲ್ಲಿದ್ದಲ ಗಣಿಗಳು ರಾಷ್ಟ್ರೀಕರಣ ಆಗುವ ಸಾಧ್ಯತೆ ಇದೆ" ಎಂದರು. ಶಕ್ತಿಯು ಯೋಜಿತ ಆಧಾರದ ಮೇಲೆ ನಿರ್ಮಾಣವಾಗಬೇಕು ಎಂದು ಪಟೇಲ್ ನಂಬಿದ್ದರು. ಅತಿ ಮುಖ್ಯವಾಗಿ ಬೇಕಾಗಿರುವುದು ಉಕ್ಕು. ಟಾಟಾ ವರ್ಕ್ಸ್ ಸಾಕಷ್ಟು ಬೃಹತ್ ಉದ್ಯಮವಾಗಿದ್ದರೂ ಭಾರತದ ಕೇವಲ ಕಾಲು ಭಾಗದಷ್ಟು ಅಗತ್ಯತೆಯನ್ನು ಮಾತ್ರ ಅವರು ಪೂರೈಸಬಲ್ಲರು. ಆದ್ದರಿಂದ ಸರ್ಕಾರವು ಅನೇಕ ಪ್ರಾಂತ್ಯಗಳಲ್ಲಿ ಭಾರೀ ಉಕ್ಕು ಸ್ಥಾವರಗಳನ್ನು ಸ್ಥಾಪಿಸಬೇಕಾಗಿದೆ ಎಂದು ಅವರು ವಿವರಿಸಿದರು. ಭಾರತ ತ್ವರಿತವಾಗಿ ಕೈಗಾರಿಕೀಕರಣ ಗೊಳ್ಳುವುದು ಅವಶ್ಯ ಎಂದು ಅವರು ಒತ್ತಿ ಹೇಳಿದರು. ಕೈಗಾರಿಕೀಕರಣ ದೇಶದ ಅತಿಮುಖ್ಯ ಅಗತ್ಯತೆ ಎಂದು ಪಟೇಲರಿಗೆ ಮನವರಿಕೆಯಾಗಿದ್ದರ ಬಗ್ಗೆ ಯಾವುದೇ ಸಂದೇಹವಿಲ್ಲ. ಬಿಡಿಕೆಲಸಗಾರನ ಸ್ಥಿತಿಗತಿಗಿಂತ ಕೈಗಾರಿಕೆಯ ಚಕ್ರಗಳು ತಿರುಗುತ್ತಿರುವಂತೆ ನೋಡಿಕೊಳ್ಳುವ ಬಗ್ಗೆ ಹೆಚ್ಚು ಗಮನ ಕೊಡಬೇಕು ಎಂಬ ಇಂಗಿತ ಅವರ ಮಾತುಗಳಲ್ಲಿ ವ್ಯಕ್ತವಾಗುತ್ತಿತ್ತು.

ಮುಷ್ಕರಗಳನ್ನು ನಿಷೇಧಿಸುವ ಮಸೂದೆ

‘ಕೈಗಾರಿಕಾ ಅಶಾಂತಿಯತ್ತ ಕರೆದೊಯ್ಯುವ ನಾಯಕರ ಮಾತುಗಳನ್ನು ಕೇಳುವುದಕ್ಕಿಂತ ಶಿಸ್ತಾಗಿ ನಡೆದುಕೊಂಡರೆ ಅವರು ಒಳ್ಳೆಯ ಫಲ ಪಡೆಯಬಹುದು’ ಎಂದು ಸರ್ದಾರ್ ಹೇಳಿದರು. ಈ ಮಾತಿಗೆ ಏನೇನು ಅರ್ಥಛಾಯೆಗಳಿವೆ ಎಂಬುದು ಭಾರತವನ್ನು ಬಿಟ್ಟು ಹೋದ ಬಳಿಕ ನನಗೆ ಮನವರಿಕೆಯಾಯಿತು. 1949ರ ಫೆಬ್ರವರಿಯಲ್ಲಿ ಪಟೇಲರು ಮಸೂದೆ ಒಂದನ್ನು ಜಾರಿ ಮಾಡಿದರು. ಅದರ ಪ್ರಕಾರ, ವ್ಯಾಪಕವಾದ ಅಗತ್ಯ ಸೇವಾ ಕ್ಷೇತ್ರಗಳಲ್ಲಿ ಯಾವುದೇ ಮುಷ್ಕರ ನಡೆಸುವುದು ಕಾನೂನು ಬಾಹಿರವಾಗುತ್ತಿತ್ತು. ಮುಷ್ಕರದಲ್ಲಿ ಭಾಗವಹಿಸಿದವರಿಗೆ ದಂಡ ವಿಧಿಸುವ, ಬಂಧನಕ್ಕೆ ಒಳಪಡಿಸುವ ಅವಕಾಶವೂ ಆ ಮಸೂದೆಯಲ್ಲಿ ಇತ್ತು. ಈ ಕ್ರಮದ ಬಗ್ಗೆ ಚಿಕ್ಕದಾಗಿದ್ದರೂ ಶಕ್ತಿಯುತವಾಗಿದ್ದ ಕಮ್ಯೂನಿಸ್ಟ್ ಯೂನಿಯನ್ ಗಳು, ಇದಕ್ಕಿಂತಲೂ ದೊಡ್ಡದಾಗಿದ್ದರೂ ಅಷ್ಟೇನೂ ನಿರ್ಣಾಯಕವಲ್ಲದ ಸೋಷಿಯಲಿಸ್ಟರು ಹಾಗೂ ಸರ್ಕಾರದಿಂದಲೇ ಪ್ರಾಯೋಜಿತವಾದ INTUCಗಳೂ ಸೇರಿದಂತೆ ವಿವಿಧ ರೂಪದ ಎಲ್ಲ ಸಂಘಟಿತ ಕಾರ್ಮಿಕ ವಲಯಗಳಿಂದ ವಿರೋಧ ವ್ಯಕ್ತವಾಯಿತು. ಅನಂತರ ಪಟೇಲರು ಹಾಗೂ ಗೃಹಸಚಿವಾಲಯವು ಸಿದ್ದಪಡಿಸಿದ ಭಾಷಣವನ್ನು ನೆಹರೂ ಮಾಡುವ ಮೂಲಕ ಈ ಮಸೂದೆಯನ್ನು ಹಿಂತೆಗೆದುಕೊಳ್ಳಲಾಯಿತು. ಆದರೂ ಭಾರತದ ಕಾರ್ಮಿಕ ವರ್ಗದಲ್ಲಿ ಇದರ ಭೀತಿ ಸ್ಪಷ್ಟವಾಗಿ ಉಳಿದಿರುವಂತೆ ಮಾಡಲಾಗಿತ್ತು. ‘ಮುಷ್ಕರ ಮಾಡುವುದರಿಂದ ಯಾರಿಗೂ ಲಾಭವಿಲ್ಲ. ಇದರಿಂದ ಉತ್ಪಾದನೆ ಕುಂಠಿತವಾಗುತ್ತದೆ ಅಷ್ಟೇ’ ಎಂಬ ದೂರು ಪಟೇಲರ ಅನೇಕ ಭಾಷಣಗಳಲ್ಲಿ ವ್ಯಕ್ತವಾಗುತ್ತಿತ್ತು. ಕಾರ್ಮಿಕರು ತಾಳ್ಮೆಯಿಂದ ಇದ್ದು ಸರ್ಕಾರದ ಮೇಲೆ ವಿಶ್ವಾಸ ಇರಿಸಬೇಕು. ಕ್ರಮೇಣ ಅವರ ಬೇಡಿಕೆಗಳ ಬಗ್ಗೆ ಗಮನಹರಿಸಲಾಗುವುದು ಎಂದು ತಮ್ಮ ಭಾಷಣಗಳಲ್ಲಿ ಧ್ವನಿಸುತ್ತಿದ್ದರು.

ಕಮ್ಯೂನಿಸಂ ಹರಡಿಬಿಡಬಹುದು ಎಂಬ ಭಯ

ರಾಜಸಂಸ್ಥಾನಗಳೊಂದಿಗೆ ಮಾಡಿಕೊಂಡ ಒಪ್ಪಂದಗಳ ಹಿನ್ನೆಲೆಯಲ್ಲಿ ಇದೇ ತರ್ಕವೇ ಇತ್ತು ಎಂದು ನನಗೆ ತೋರುತ್ತದೆ. ರಾಷ್ಟ್ರವನ್ನು ಬಲಪಡಿಸಬೇಕು ಎಂಬುದು ಸರ್ದಾರರ ಮೊದಲ ನಿಲುವು. ಪ್ರಜಾಪ್ರಭುತ್ವಕ್ಕಾಗಿ ಹಾತೊರೆಯುತ್ತಿದ್ದ ಸಂಸ್ಥಾನದ ಜನಗಳ ಅಭೀಕ್ಷೆಗಿಂತ ಹೆಚ್ಚಾಗಿ ಸಂಸ್ಥಾನಗಳ ರಾಜರನ್ನು ಬಹುತ್ವರಿತವಾಗಿ ಹಾಗೂ ಶಾಂತಿಯುತವಾಗಿ ಭಾರತದೊಂದಿಗೆ ಸೇರಿಕೊಳ್ಳುವಂತೆ ಮಾಡಲು ಪಟೇಲರು ಆಧ್ಯತೆ ನೀಡಿದರು. ಏಷಿಯಾದಲ್ಲಿ ಕಮ್ಯೂನಿಸಂ ಹರಡಿಬಿಡಬಹುದು ಎಂಬುದೇ ಪಾಶ್ಚಿಮಾತ್ಯ ನಾಯಕರುಗಳ ದೊಡ್ಡ ಚಿಂತೆಯಾಗಿತ್ತು.

ಪುಟ 04 ಕ್ಕೆ

19 49ರ ಫೆಬ್ರವರಿಯಲ್ಲಿ ಪಟೇಲರು ಮಸೂದೆ ಒಂದನ್ನು ಜಾರಿ ಮಾಡಿದರು. ಅದರ ಪ್ರಕಾರ, ವ್ಯಾಪಕವಾದ ಅಗತ್ಯ ಸೇವಾ ಕ್ಷೇತ್ರಗಳಲ್ಲಿ ಯಾವುದೇ ಮುಷ್ಕರ ನಡೆಸುವುದು ಕಾನೂನು ಬಾಹಿರವಾಗುತ್ತಿತ್ತು. ಮುಷ್ಕರದಲ್ಲಿ ಭಾಗವಹಿಸಿದವರಿಗೆ ದಂಡ ವಿಧಿಸುವ, ಬಂಧನಕ್ಕೆ ಒಳಪಡಿಸುವ ಅವಕಾಶವೂ ಆ ಮಸೂದೆಯಲ್ಲಿ ಇತ್ತು. ಈ ಕ್ರಮದ ಬಗ್ಗೆ ಚಿಕ್ಕದಾಗಿದ್ದರೂ ಶಕ್ತಿಯುತವಾಗಿದ್ದ ಕಮ್ಯೂನಿಸ್ಟ್ ಯೂನಿಯನ್ ಗಳು, ಇದಕ್ಕಿಂತಲೂ ದೊಡ್ಡದಾಗಿದ್ದರೂ ಅಷ್ಟೇನೂ ನಿರ್ಣಾಯಕವಲ್ಲದ ಸೋಷಿಯಲಿಸ್ಟರು ಹಾಗೂ ಸರ್ಕಾರದಿಂದಲೇ ಪ್ರಾಯೋಜಿತವಾದ INTUCಗಳೂ ಸೇರಿದಂತೆ ವಿವಿಧ ರೂಪದ ಎಲ್ಲ ಸಂಘಟಿತ ಕಾರ್ಮಿಕ ವಲಯಗಳಿಂದ ವಿರೋಧ ವ್ಯಕ್ತವಾಯಿತು. ಅನಂತರ ಪಟೇಲರು ಹಾಗೂ ಗೃಹಸಚಿವಾಲಯವು ಸಿದ್ದಪಡಿಸಿದ ಭಾಷಣವನ್ನು ನೆಹರೂ ಮಾಡುವ ಮೂಲಕ ಈ ಮಸೂದೆಯನ್ನು ಹಿಂತೆಗೆದುಕೊಳ್ಳಲಾಯಿತು.

ತೆಲಂಗಾಣ ಜಾಗೃತಿಯ ಹಿನ್ನೆಲೆಯಲ್ಲಿ ನಡೆದ ಕ್ಷೋಭೆಗಳು ಹಾಗೂ ಹೈದರಾಬಾದ್ ನಲ್ಲಿ ಉಳುಮೆ ಭೂಮಿಯನ್ನು ರೈತರು ವಶಪಡಿಸಿಕೊಂಡಂಥ ಘಟನೆಗಳು ಕಮ್ಯೂನಿಸ್ಟ್ ಧ್ವನಿಯು ಯಾವಾಗ ಬೇಕಾದರೂ ದಂಗೆ ಏಳುವ ಮನಸ್ಥಿತಿಯಲ್ಲಿರುವ ರೈತಾಪಿ ಜನರನ್ನು ತಲುಪುತ್ತಿದೆ ಹಾಗೂ ಗ್ರಾಮೀಣ ಭಾರತದಲ್ಲಿ ಕಾಂಗ್ರೆಸ್ ಪಕ್ಷದ ಆಡಳಿತಕ್ಕೆ ಭೀತಿಯೊಡ್ಡುತ್ತಿದೆ ಎಂಬುದರ ಸ್ಪಷ್ಟ ಸೂಚನೆಗಳಾಗಿದ್ದವು.

ಸಂಪಾದಕೀಯ

ಸ್ವಾತಂತ್ರ ಸಂರಕ್ಷಣೆಯ ಸಂಕಲ್ಪ

ಭಾರತ ಸಂಭ್ರಮದ 77 ನೆಯ ಸ್ವಾತಂತ್ರ್ಯೋತ್ಸವವನ್ನು ಆಚರಿಸುತ್ತಿದೆ. ನಮ್ಮ ಎಲ್ಲ ಓದುಗರಿಗೆ, ನಾಡಿನ ಜನತೆಗೆ 'ದುಡಿಯುವ ಜನರ ಪ್ರಾಣ ಮಿತ್ರ'ನ ಹಾರ್ದಿಕ ಶುಭಾಶಯಗಳು.

ಅಪಾರ ತ್ಯಾಗ, ಬಲಿದಾನಗಳಿಂದ ಗಳಿಸಿದ ಸ್ವಾತಂತ್ರ್ಯವನ್ನು ಸಂರಕ್ಷಿಸಿಕೊಂಡು ಶೋಷಣೆ ರಹಿತ, ನೈಜ ಸಮಾನತೆಯ ಸಮಾಜವನ್ನು ಕಟ್ಟುವ ಸಂಕಲ್ಪವನ್ನು ಮಾಡಬೇಕಿದೆ.

ವಸಾಹತುಶಾಹಿಗಳಿಂದ ವಿಮೋಚನೆ ಹೊಂದಿದ ಭಾರತ ಈ ಅವಧಿಯಲ್ಲಿ ಅಪಾರ ಸಾಧನೆಗಳನ್ನು ಮಾಡಿದೆ. ಈ ಸಾಧನೆಗಳ ಫಲ ಎಲ್ಲಾ ಜನರಿಗೆ, ಶ್ರಮಿಕರಿಗೆ ಸಿಕ್ಕಿದೆಯೇ ಎನ್ನುವ ಪ್ರಶ್ನೆ ಸದಾ ಕಾಡುತ್ತದೆ. ಜಗತ್ತಿನಲ್ಲಿಯೇ ಅತ್ಯಂತ ಭಾರೀ ಸಿರಿವಂತರ ಪಟ್ಟಿಯಲ್ಲಿ ಭಾರತದ ಕೆಲ ಶ್ರೀಮಂತರಿದ್ದರೂ ಸಂಪತ್ತಿನ ಹಂಚಿಕೆಯಲ್ಲಿ ಅಜಗಜಾಂತರ ವ್ಯತ್ಯಾಸಗಳಿರುವುದು ಯಾರೂ ಮರೆಮಾಚಲಾಗದ ಸಂಗತಿ. ಎಂಟು ದಶಕಗಳ ನಡಿಗೆಯಲ್ಲಿ ಉಳ್ಳವರು ಮತ್ತು ಇಲ್ಲದವರ ನಡುವಿನ ಅಂತರ ಅಗಾಧವಾಗಿದೆ. ಜಗತ್ತಿನಲ್ಲಿ ಜನಸಂಖ್ಯೆಯಲ್ಲಿ ಮೊದಲ ಸ್ಥಾನಕ್ಕೇರಿದ ಭಾರತ ತನ್ನಲ್ಲಿ ಅಪಾರ ನೈಸರ್ಗಿಕ, ಮಾನವ ಸಂಪನ್ಮೂಲಗಳಿದ್ದರೂ ಅದನ್ನು ಸಮರ್ಥವಾಗಿ ಬಳಸಿ ಪ್ರಗತಿ ಸಾಧಿಸಲು ಸಾಧ್ಯವಾಗದೇ ಇರುವಲ್ಲಿ ಆಳುವವರು ಅನುಸರಿಸುತ್ತಿರುವ ನೀತಿಗಳ ಫಲ ಎನ್ನುವುದು ನಿರ್ವಿವಾದ. ಭಾರತವನ್ನು 'ವಿಶ್ವಗುರು'ವಾಗಿಸುವ ಭಾರೀ ಕನಸು ಬಿತ್ತುವವರಿಗೆ ದೇಶದ ಮುಂದಿರುವ ಬಡತನ, ದಾರಿದ್ರ್ಯ, ಅನಕ್ಷರತೆ, ನಿರುದ್ಯೋಗ, ಜಾತೀಯತೆ, ಅಸಮಾನತೆಗಳಂತಹ ಸಮಸ್ಯೆಗಳು ಪ್ರಶ್ನೆಗಳಾಗುತ್ತಿಲ್ಲ. ಕವಲು ದಾರಿಯಲ್ಲಿರುವ ಭಾರತದ ಮುಂದೆ ಇರುವ ಬಹು ದೊಡ್ಡ ಪ್ರಶ್ನೆ ಎಂದರೆ ಆಧುನಿಕ ಭಾರತವನ್ನು ರೂಪಿಸುವಲ್ಲಿ, ಅದನ್ನು

ವ್ಯಾಖ್ಯಾನಿಸುವಲ್ಲಿ ಇರುವ ದೃಷ್ಟಿಕೋನ, ನಿಲುವು ಮತ್ತು ನಡೆಗಳು ಯಾವುದು ಎನ್ನುವುದು. ಭಾರತದ ಮುನ್ನಡೆಗೆ ಕಾರಣವಾಗಿರುವ, ಭದ್ರ ಬುನಾದಿಯನ್ನು ಕಟ್ಟಿರುವ ಪ್ರಜಾಸತ್ತಾತ್ಮಕ, ಮತನಿರಪೇಕ್ಷತೆ, ಸ್ವಾವಲಂಬಿ, ಸಾರ್ವಭೌಮ ಗಣರಾಜ್ಯದ ವ್ಯವಸ್ಥೆಗೆ ವ್ಯತಿರಿಕ್ತವಾಗಿ ಅವಕ್ಕೆ ತದ್ವಿರುದ್ಧವಾಗಿರುವ ಫ್ಯಾಶಿಸ್ಟ್ ಸ್ವರೂಪದ ಪ್ರತಿಗಾಮಿ ಮೌಲ್ಯಗಳನ್ನು ಜಾರಿಗೆ ತರಲು ತರಾತುರಿಯಲ್ಲಿ ಪ್ರಯತ್ನಿಸಲಾಗುತ್ತಿದೆ. ಈ ಎರಡು ದೃಷ್ಟಿಕೋನಗಳು ಮತ್ತು ಅವನ್ನಾಧರಿಸಿದ ಸೈದ್ಧಾಂತಿಕ, ರಾಜಕೀಯ ನಡೆಗಳ ನಡುವೆ ನಿಂತರ ಸಂಘರ್ಷವಿದೆ. ಈ ಸಂಘರ್ಷ ಇಂದು ನೆನ್ನೆಯದೇನಲ್ಲ. ನಮ್ಮ ಇತಿಹಾಸದಲ್ಲಿ ವಿಶೇಷವಾಗಿ, ಭಾರತದ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭ ಮತ್ತು ವಿಮೋಚನೆಗೊಂಡ ಹೊಸತರಲ್ಲಿ ಭವಿಷ್ಯತ್ತಿನ ಭಾರತದ ಹಾದಿಗೆ ಆಧಾರ ಯಾವುದಿರಬೇಕು ಎನ್ನುವಲ್ಲಿ ಇಂಥ ಹೊಸ ಸವಾಲಿನ ಪ್ರಶ್ನೆಗಳು ಎದುರಾಗಿದ್ದವು ಎನ್ನುವುದನ್ನು ಸಹ ನಾವು ನೆನಪಿಸಿಕೊಳ್ಳಬೇಕು. ಪ್ರಸಕ್ತ ಸವಾಲುಗಳ ಬೇರುಗಳು ಅಲ್ಲಿವೆ. ವರ್ತಮಾನವು ಭೂತಕಾಲದ ಬಳುವಳಿ ಆಗಿದೆ.

ಭಾರತದ ಸಂವಿಧಾನವನ್ನು ರೂಪಿಸುವ ಸನ್ನಿವೇಶದಲ್ಲಿಯೇ ಇಂತಹ ವೈರುಧ್ಯಾತ್ಮಕ ಸಂಘರ್ಷಗಳು ಮತ್ತೆ ಮುನ್ನೆಲೆಗೆ ಬಂದಿದ್ದವು. ಭಾರತವನ್ನು ಪ್ರಜಾಸತ್ತಾತ್ಮಕ, ಮತನಿರಪೇಕ್ಷತೆಯ ರಾಷ್ಟ್ರವನ್ನಾಗಿಸಬೇಕು ಎನ್ನುವುದು ಒಂದು.

ಆಧುನಿಕತೆಯೊಂದಿಗೆ ಮುನ್ನಡೆದಾಗ ಮಾತ್ರವೇ ಜಾಗತಿಕವಾಗಿ ಭಾರತ ಬೆಸೆಯಲು, ಬೆಳೆಯಲು ಸಾಧ್ಯ ಎನ್ನುವ ದೃಷ್ಟಿಕೋನವದು. ಈ ದೃಷ್ಟಿ ಅಂಗೀಕರಿಸುತ್ತಲೇ ಅದನ್ನು ನಿಜವಾಗಿಸುವಲ್ಲಿ ನೂತನ ಪ್ರಭುತ್ವವು ಶ್ರಮಜೀವಿ ವರ್ಗಗಳ ನೇತೃತ್ವದಲ್ಲಿ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಸಮಾನತೆಯ ಆಧಾರದಲ್ಲಿ ದೇಶ ಕಟ್ಟಬೇಕು ಎನ್ನುವ ವಿಚಾರಧಾರೆ ಎರಡನೆಯದು. ಇವುಗಳಿಗೆ ತೀರಾ ವ್ಯತಿರಿಕ್ತವಾಗಿ ಸನಾತನೀಯತೆ, ಮತಧರ್ಮದ ಆಧಾರದಲ್ಲಿ ಮತೀಯ ರಾಷ್ಟ್ರ ಕಟ್ಟಬೇಕು, ಮನುಸ್ಮೃತಿ ನಮ್ಮ ದೇಶದ ಸಂವಿಧಾನದ ಅಡಿಪಾಯವೇ ಆಗಿರಬೇಕು ಎನ್ನುವ ವಿಚಾರಧಾರೆ ಮೂರನೆಯದ್ದು. ಮೊದಲನೆಯದನ್ನು ಕಾಂಗ್ರೆಸ್ ಪಕ್ಷ ಪ್ರತಿಪಾದಿಸಿದರೆ, ಎರಡನೆಯದನ್ನು ಶ್ರಮಜೀವಿ ವರ್ಗದ ಪಕ್ಷ– ಕಮ್ಯೂನಿಸ್ಟ್ ಆಂದೋಲನ, ಮೂರನೆಯ ದೃಷ್ಟಿಕೋನವನ್ನು ಆರ್.ಎಸ್.ಎಸ್. ಮತ್ತು ಮುಸ್ಲಿಂ ಲೀಗ್ ಮತಿಯವಾದಿ ಸಂಸ್ಥೆಗಳು ಪ್ರತಿನಿಧಿಸಿದ್ದವು. ನವ ಭಾರತದ ರೂವಾರಿಗಳು ಮತೀಯತೆಯ ಆಧಾರದ ಭಾರತದ ನಿರ್ಮಾಣವನ್ನು ತಿರಸ್ಕರಿಸಿದ್ದರು. ವಸಾಹತು ಸುಲಿಗೆಗಾರರ, ಮತೀಯವಾದಿಗಳ ಧಾಳಿಗಳನ್ನು ಹಿಮ್ಮೆಟ್ಟಿಸಿದ್ದರು, ದುಷ್ಟ ಸಂಚುಗಳನ್ನು ದೇಶಪ್ರೇಮಿ ಜನತೆ ಸೋಲಿಸಿದ್ದರು.

ಭಾರತ ಹೇಗಿರಬೇಕು, ಹೇಗಿರಬಾರದು ಎನ್ನುವುದನ್ನು ಸಂವಿಧಾನ ರಚನಾ ಸಭೆಯಲ್ಲಿ ನಡೆದ ಆ ಚರ್ಚೆಗಳೇ ಸ್ಪಷ್ಟಪಡಿಸುತ್ತವೆ. ಭಾರತ ಮುನ್ನಡೆಗೆ ಆಯ್ಕೆ ಮಾಡಿಕೊಂಡ ದಾರಿ ಎಂದರೆ ಪ್ರಜಾಸತ್ತಾತ್ಮಕ, ಮತನಿರಪೇಕ್ಷ ಗಣರಾಜ್ಯ ವಾಗುವುದು. ಅಂದು ಭಾರತ ಎಂದರೆ 1,618 ಭಾಷೆಗಳು, 6400 ಜಾತಿಗಳುಳ್ಳ, 6 ಪ್ರಧಾನ ಮತಧರ್ಮಗಳು, 6 ಜನಾಂಗೀಯ ಪಂಗಡಗಳ ಮತ್ತು 660 ಪಾಳೇಗಾರಿ ರಾಜ್ಯಾಡಳಿತದ ಪ್ರಾಂತ್ಯಗಳ ಒಂದು ದೇಶವಾಗಿತ್ತು. ಇಂತಹ ವೈವಿಧ್ಯತೆಯುಳ್ಳ ಜನತೆಯನ್ನು ಒಂದು 'ರಾಷ್ಟ್ರ ಪ್ರಭುತ್ವ'ದ ಅಡಿಯಲ್ಲಿ ಅಣಿ ನೆರೆಸುವುದು, ಒಂದು ಮತಧರ್ಮದ ರಾಷ್ಟ್ರವಾಗಿ, ಮತೀಯ ನೆಲೆಯಲ್ಲಿ ಅಸಾಧ್ಯವಾದುದೇ ಆಗಿತ್ತು. ಮತ್ತು ಅದು ವಿಘಟನೆಯ ಕ್ರಮವಾಗಿತ್ತು. ಅದು ಐಕ್ಯತೆಯ ಆಧಾರದಲ್ಲಿ ಎಲ್ಲರನ್ನೂ ಒಗ್ಗೂಡಿಸಿ ಬಲಗೊಂಡ ಭಾರತದ ಬೆಳವಣಿಗೆಗೆ ಮಾರಕವಾಗಿತ್ತು. ಹೀಗಾಗಿ ಮತಧರ್ಮದ, ಮನುಸ್ಮೃತಿ ಆಧಾರಿತ ದೇಶದ ಕಲ್ಪನೆಯನ್ನು ತಿರಸ್ಕರಿಸಲಾಯಿತು. ಈ ಕಾರಣದಿಂದಲೇ ಭಾರತ ಇಷ್ಟೊಂದು ವಿಸ್ತೃತವಾಗಿ ವ್ಯಾಪಕವಾಗಿ ಬೆಳೆಯಲು ಸಾಧ್ಯವಾಗಿದೆ ಎನ್ನುವುದನ್ನು ಗುರುತಿಸಬೇಕು.

ಆದರೆ ಇಂತಹ ವ್ಯವಸ್ಥೆಯ ಎಲ್ಲಾ ಫಲಗಳನ್ನು ಪಡೆದು ಬೆಳೆದ ಆರ್ಥಿಕ ಶಕ್ತಿಗಳು ಇಂದು ಮತ್ತೆ ಎಲ್ಲವನ್ನೂ, ಇಡೀ ಸಾರ್ವಜನಿಕ ಸಂಪತ್ತನ್ನು, ಲಭ್ಯ ಮಾರುಕಟ್ಟೆಯನ್ನು ಏಕಸ್ವಾಮ್ಯ ಗೊಳಿಸುವ ಹುನ್ನಾರದಲ್ಲಿ ರಾಜಕೀಯ ಸಿದ್ಧಾಂತವಾದ 'ಹಿಂದುತ್ವ' ದ ಮತಾಂದತೆಯನ್ನು, ಕೋಮುವಾದವನ್ನು ನೆಚ್ಚಿಕೊಂಡಿವೆ. ಒಂದು ಮತ ಧರ್ಮದ ನೆಲೆಯಲ್ಲಿ ಭಾರತದಂತಹ ದೇಶವನ್ನು ವ್ಯಾಖ್ಯಾನಿಸುವ ಕ್ರಮವೇ ಅವೈಜ್ಞಾನಿಕ, ಅಸಂಬದ್ಧ. ಸಂಘ ಪರಿವಾರ ಪ್ರತಿಪಾದಿಸುವ 'ಅಖಂಡ ಭಾರತ' ಎನ್ನುವ ಅದರ ಕಲ್ಪನೆಯು ಕೂಡ ಕಾರ್ಪೊರೇಟ್ ಕಂಪನಿಗಳ ಮಾರುಕಟ್ಟೆ ವಿಸ್ತರಣೆಯ ಅತ್ಯಾಕ್ರಮಣಕಾರಿಯಾದ 'ವಿಸ್ತರಣವಾದಿ' ಆಕಾಂಕ್ಷೆಯನ್ನು ಹೊಂದಿದೆ. ಅಂದರೆ ಇಂದು ಪ್ರತಿಪಾದಿಸಲಾಗುವ ಧಾರ್ಮಿಕತೆ, ಪುಟ 04 ಕ್ಕೆ

ಹನ್ನೊಂದು ವರ್ಷಗಳ ಹಿಂದೆ ಧರ್ಮಸ್ಥಳದ ಮಣ್ಣಸಂಕದಲ್ಲಿ ಶವವಾಗಿ ಪತ್ತೆಯಾದ ಸೌಜನ್ಯಾ ಪ್ರಕರಣ ಇಡೀ ರಾಜ್ಯದ ಗಮನ ಸೆಳೆದಿತ್ತು. ಎಂತಾ ಬಲಿಷ್ಠ ಮನಸ್ಥಿತಿಯ ವ್ಯಕ್ತಿಯೇ ಆಗಿದ್ದರೂ ಆ ಮೃತ ದೇಹವನ್ನು ನೋಡಿದಾಕ್ಷಣ ಮೈ ನಡುಕ ಬರುವ ಸ್ಥಿತಿಯಲ್ಲಿ ಬಿದ್ದಿತ್ತು. ಸೌಜನ್ಯ ಮೃತ ಶರೀರ. ಸಾಮಾನ್ಯ ವ್ಯಕ್ತಿಗಳು ಎಸಗುವ ಕೃತ್ಯವಿದಾಗಿರದೆ ಕ್ರಿಮಿನಲ್ ಕೃತ್ಯಗಳಲ್ಲಿ ಪಳಗಿರುವ ಗುಂಪೊಂದು ಎಸಗಿರುವ ಕೃತ್ಯ ಇದಾಗಿದೆ ಎಂದು ಆ ಮೃತ ಶರೀರವನ್ನು ನೋಡಿದ ಅನೇಕರು ಆಗ ಹೇಳಿದ್ದಿದೆ. ಇಂತ ಘೋರ ಅಪರಾಧ ಎಸಗಿದ ನೀಚರನ್ನು ಹಿಡಿದು ಕಾನೂನಾತ್ಮಕವಾದ ಗರಿಷ್ಟ ಶಿಕ್ಷೆಗೆ ಒಳಪಡಿಸಬೇಕೆಂದು ಸ್ಥಳೀಯರು, ವಿವಿಧ ಸಂಘ–ಸಂಸ್ಥೆಗಳು, ಜನ ಸಮೂಹಗಳ ಸಂಘಟನೆಗಳು ಸರ್ಕಾರದ ಮೇಲೆ ನಿರಂತರ ಒತ್ತಡ ಹೇರಿದವು. ಇದರ ಫಲವಾಗಿ ಸೌಜನ್ಯ ಪ್ರಕರಣ ಕ್ರಮವಾಗಿ ಸಿಒಡಿಗೆ, ಸಿಐಡಿಗೆ, ಸಿಬಿಐ ತನಿಖೆಗೆ ಒಳಪಟ್ಟಿತ್ತು. ನಿಜ ಅಪರಾಧಿಗಳು ತಪ್ಪಿಸಿಕೊಳ್ಳುವಂತೆ ಭಾರೀ ಷಡ್ಯಂತ್ರವೇ ನಡೆದಿತ್ತು. ಅಮಾಯಕರೊಬ್ಬರ ಮೇಲೆ ಕೇಸ್ ದಾಖಲಿಸಿ ಅಪರಾಧಿಗಳನ್ನು ರಕ್ಷಿಸುವ, ತನಿಖೆಯ ಹಾದಿಯನ್ನೇ ತಪ್ಪಿಸುವ ಕುತಂತ್ರಗಳ ವಿರುದ್ಧ ನ್ಯಾಯಕ್ಕಾಗಿ ಹೋರಾಟಗಾರರು ಧ್ವನಿ ಎತ್ತಿದ್ದರು. ಹನ್ನೊಂದು ವರ್ಷಗಳ ಈ ಕಾನೂನು ಹೋರಾಟದಲ್ಲಿ ಕೊನೆಯ ಫಲಿತಾಂಶವಾಗಿ ಸಂತೋಷರಾವ್ ನಿರಪರಾಧಿಯೆಂದು ಅವರನ್ನು ಸಿ.ಬಿ.ಐ.ಕೋರ್ಟ್ ಬಿಡುಗಡೆಗೊಳಿಸಿದ ಸಣ್ಣ ಸಮಾಧಾನದ ಹೊರತು ನ್ಯಾಯ ನಿರೀಕ್ಷೆಯಲ್ಲಿದ್ದ ಎಲ್ಲರಿಗು ಸಿಕ್ಕಿದ್ದು ಆಘಾತಕಾರಿಯಾದ ಗುದ್ದು.

ಸಿಬಿಐ ನ್ಯಾಯಾಲಯ ದೀರ್ಘ ತನಿಖೆಯ ನಂತರ ತೀರ್ಪು ನೀಡಿತಾದರೂ ಅಪರಾಧಿಗಳನ್ನು ಹಿಡಿಯಲಾಗದೆ ಕೈ ಚೆಲ್ಲಿತು. ಈ ತೀರ್ಪು ರಾಜ್ಯದ ಪ್ರಜ್ಞಾವಂತ ಸಮುದಾಯವನ್ನು ಬಡಿದೆಬ್ಬಿಸಿತು.

ಎಲ್ಲರ ಮನೆಯ ಬಾಗಿಲ ತಟ್ಟುತ್ತಿರುವ 'ಸೌಜನ್ಯ'

ಪರಿಣಾಮವಾಗಿ ರಾಜ್ಯದ ಎಲ್ಲ ಮೂಲೆಗಳಿಂದಲೂ ಸೌಜನ್ಯ ಪ್ರಕರಣಕ್ಕೆ ನ್ಯಾಯ ಬೇಕೆ ಬೇಕೆಂಬ ಕೂಗೆದ್ದಿತು. ಜಿಲ್ಲಾ ಕೇಂದ್ರಗಳಲ್ಲಿ, ತಾಲ್ಲೂಕು ಕೇಂದ್ರಗಳಲ್ಲಿ ಪ್ರತಿಭಟನೆಯ ಸ್ವರೂಪ ಪಡೆದ ಈ ಕೂಗು ದಕ್ಷಿಣ ಕನ್ನಡ ಜಿಲ್ಲೆಯ ಜನರನ್ನೂ ಅಪಾರ ಸಂಖ್ಯೆಯಲ್ಲಿ ಬೀದಿಗಿಳಿಸುವಲ್ಲಿ ಯಶಸ್ವಿಯಾಗುತ್ತಿರುವುದನ್ನು ನಾವೆಲ್ಲರು ವಿವಿಧ ಮಾಧ್ಯಮಗಳ ಮೂಲಕ ಕಾಣಬಹುದಾಗಿದೆ.

ಮರಳಿ ನ್ಯಾಯಕ್ಕಾಗಿ ಆಗ್ರಹಿಸುವ ಸೌಜನ್ಯ ಪೋಸ್ಟರ್ಗಳು, ಪತ್ರಿಕಾ ಹೇಳಿಕೆಗಳು, ಯೂಟ್ಯೂಬ್ ಮೂಲಕ ವಿಡಿಯೋ ಪ್ರಚಾರಗಳು, ಇನ್ಸ್ಟಾಗ್ರಾಮ್, ಟ್ವಿಟ್ಟರ್, ವಾಟ್ಸಾಪ್, ಫೇಸ್ ಬುಕ್ ಮುಂತಾದ ಸಾಮಾಜಿಕ ಜಾಲ ತಾಣಗಳ ಪ್ರಚಾರಗಳು ಪಟ್ಟಭದ್ರರ ನಿದ್ದೆಗೆಡಿಸಿವೆ. ಸ್ಥಾಪಿತ ಹಿತಾಸಕ್ತಿಯ ಪಾಳೆಯಗಾರಿ ಶಕ್ತಿಗಳಂತೂ ಈ ಪ್ರಚಾರವನ್ನೆ ತಡೆಯುವ ಸಾಹಸಕ್ಕೆ ಮುಂದಾಗಿ ಹಲವು ರೀತಿಯ ಪ್ರಯತ್ನಗಳನ್ನು ನಡೆಸಿವೆ. ಶ್ರೀಮಂಜುನಾಥ, ಧರ್ಮಸ್ಥಳ, ಉಜಿರೆ ಹಾಗೂ ಸುತ್ತಮುತ್ತಲ ಪ್ರದೇಶಗಳ ಹೆಸರುಗಳನ್ನು ಉಲ್ಲೇಖಿಸುವ ಮೂಲಕ ಸೌಜನ್ಯ ಪ್ರಕರಣವನ್ನು ಪ್ರಸ್ತಾಪಿಸುವಂತಿಲ್ಲ ಎನ್ನುವ ಲೀಗಲ್ ನೋಟೀಸ್ ಒಂದನ್ನು ಸಹ ಹಲವು ವ್ಯಕ್ತಿಗಳಿಗೆ, ಹಲವು ಯೂ ಟ್ಯೂಬ್ ಚಾನಲ್ಲುಗಳಿಗೆ ಕಳಿಸಿದ್ದಲ್ಲದೆ ಬಹಳಷ್ಟು ಜನರನ್ನುತಲುಪುವ ಮೂಲಕ ಸಂಚಲನ ಮೂಡಿಸಿದ್ದ ಕೆಲವಾರು ಆಡಿಯೊ–ವಿಡಿಯೋಗಳನ್ನೂ ಅಳಿಸಿ ಹಾಕಿಸಿದ್ದಾರೆ.

ಆದರೀನಂತೆ, ರೊಚ್ಚಿಗೆದ್ದವರಂತೆ ಕರ್ನಾಟಕದ ಜನತೆ ಸೌಜನ್ಯ ಕುಟುಂಬಕ್ಕೆ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕೆಂದು ರಣಕಹಳೆ ಮೊಳಗಿಸಿದ್ದಾರೆ. ಜುಲೈ 28 ರಂದು 60ಕ್ಕೂ ಹೆಚ್ಚು ಸಂಘಟನೆಗಳ ನೂರಾರು ಜನರು ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಸಮಾವೇಶಗೊಂಡು ಎಸ್.ಐ.ಟಿ ತನಿಖೆಗಾಗಿ ಆಗ್ರಹಿಸಿರುತ್ತಾರೆ ಮತ್ತು ಮುಖ್ಯಮಂತ್ರಿಗಳನ್ನು ಭೇಟಿಯಾಗಿ ಇದೇ ಆಗ್ರಹವನ್ನೂ ಸರ್ಕಾರದ ಮುಂದಿಟ್ಟಿದ್ದಾರೆ. ಇದಾದ ನಂತರ ದಕ್ಷಿಣ ಕನ್ನಡ ಜಿಲ್ಲೆಯ ಹಲವಾರು ಕೇಂದ್ರಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜಮಾಯಿಸುವ ಮೂಲಕ ಸೌಜನ್ಯಗೆ ನ್ಯಾಯ ಕೇಳುವ ಘೋಷಣೆಗಳ ಜೊತೆಗೆ ಸ್ಥಳೀಯ ಪಾಳೇಗಾರಿ ಧಾರ್ಮಿಕ ಸಂಸ್ಥಾನದ ಎದೆಯಲ್ಲಿ ನಡುಕ ಸೃಷ್ಟಿಸಿರುತ್ತಾರೆ. ದಶಕಗಳ ಕಾಲ ನ್ಯಾಯ–ನೀತಿ, ಕರ್ತವ್ಯ–ಕಾನೂನುಗಳನ್ನು ಸಾಕಿದ ನಾಯಿಯಂತೆ ಕಾಲಡಿಯಲ್ಲಿರಿಸಿಕೊಂಡು ವ್ಯವಹರಿಸುತ್ತಿದ್ದ ಸ್ವಯಂಘೋಷಿತ ಧಾರ್ಮಿಕ ಗುತ್ತಿಗೆದಾರರನ್ನು ಕೊರಳ ಪಟ್ಟಿ ಹಿಡಿದು ನ್ಯಾಯ ಕೇಳುವ ಹಂತಕ್ಕೆ ಜನತೆಯ ಮುಡುಗಟ್ಟಿದ್ದ ಆಕ್ರೋಶ ಭುಗಿಲೆದ್ದಿದೆ.

ಆಗಸ್ಟ 28 ಕ್ಕೆ ಬೆಳ್ತಂಗಡಿ ಚಲೋ

ಇದೇ ಆಗಸ್ಟ 28ಕ್ಕೆ 'ಚಲೋ ಬೆಳ್ತಂಗಡಿ' ಚಳುವಳಿಯೊಂದು ರೂಪುಗೊಂಡಿದ್ದು "ಪ್ರಗತಿಪರ ಸಂಘಟನೆಗಳ ವೇದಿಕೆ" ಈ ಕರೆಯನ್ನು ಕೊಟ್ಟಿದೆ.

–ಎನ್. ಪ್ರಭಾ



ಹರೀಶ ನಾಯ್ಕ ನಿಧನ: ಶ್ರದ್ಧಾಂಜಲಿ



ಸಿಪಿಐ(ಎಂ) ಹಳಿಯಾಳ ತಾಲೂಕು ಕಾರ್ಯದರ್ಶಿ, ಸಿಐಟಿಯುನ ರಾಜ್ಯ ಉಪಾಧ್ಯಕ್ಷರು, ಉತ್ತರ ಕನ್ನಡದ ಜಿಲ್ಲೆಯ ದಾಂಡೇಲಿ ನಗರಸಭಾ ಮಾಜಿ ಅಧ್ಯಕ್ಷರು ಆದ ಹರೀಶ ನಾಯ್ಕರು ಜೋಯಿಡಾದ ರಾಮನಗರದಲ್ಲಿರುವ ಅವರ ಮನೆಯಲ್ಲಿ ಆಗಸ್ಟ್ 7, 2023 ರಂದು ನಿಧನರಾದರು. ಅವರಿಗೆ 71 ವರ್ಷ ವಯಸ್ಸಾಗಿತ್ತು. ಅವರು ಇತ್ತೀಚಿನ ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು.

ಮೂಲತಃ ಕಾರವಾರದವರಾದ ಅವರು ಸ್ನಾತಕೋತ್ತರ ಪದವಿ ಪಡೆದು, ದಾಂಡೇಲಿ ಪೇಪರ್ ಮಿಲ್ ನಲ್ಲಿ ಕಾರ್ಮಿಕರಾಗಿ, ಕಾರ್ಮಿಕ ನಾಯಕರಾಗಿ ಸೇವೆ ಸಲ್ಲಿಸಿದರು. ಮಾತ್ರವಲ್ಲ ದಾಂಡೇಲಿ ನಗರ ಸಭೆಗೆ ಸಿಪಿಐ(ಎಂ) ಪಕ್ಷದ ಪರವಾಗಿ ಆಯ್ಕೆಯಾಗಿ ಉಪಾಧ್ಯಕ್ಷರಾಗಿ, ಹಂಗಾಮಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಸಿಐಟಿಯು ಉತ್ತರ ಕನ್ನಡ ಜಿಲ್ಲಾ ಸಮಿತಿ ಮೊದಲ ಸಮ್ಮೇಳನದಲ್ಲಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ನಂತರ ಎರಡು ಬಾರಿ ಹೀಗೆ ಮೂರು ಅವಧಿಗೆ ಅಧ್ಯಕ್ಷರಾಗಿದ್ದರು. ಜೀವಿತದ ಕೊನೆಯಲ್ಲಿ ಕರ್ನಾಟಕ ರಾಜ್ಯ ಮುನ್ಸಿಪಲ್ ನೌಕರರ ಸಂಘದ ರಾಜ್ಯ ಅಧ್ಯಕ್ಷರಾಗಿ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಶನ್ ರಾಜ್ಯ ಉಪಾಧ್ಯಕ್ಷರಾಗಿ ನಿರ್ವಹಿಸುತ್ತಿದ್ದರು.

ಪ್ರಾರಂಭದಲ್ಲಿ ಹಂಚು ಕಾರ್ಮಿಕರ ಸಂಘ, ಪಂಚಾಯತ್ ಕಾರ್ಮಿಕರು, ಕಾರವಾರದಲ್ಲಿ ಗ್ರಾಸಿಂ ಗುತ್ತಿಗೆ ಕಾರ್ಮಿಕರ ಸಂಘ, ಕದ್ರಾ, ಅಂಬಿಕಾ ನಗರ, ಗಣೇಶ್ ಗುಡಿ ವಿದ್ಯುತ್ ಗುತ್ತಿಗೆ ಕಾರ್ಮಿಕರ ಸಂಘ, ಕೈಗಾ ಅಣು ವಿದ್ಯುತ್ ಸ್ಥಾವರ ಗುತ್ತಿಗೆ ಕಾರ್ಮಿಕರ ಸಂಘ, ವನ್ಯಜೀವಿ ಗುತ್ತಿಗೆ ಕಾರ್ಮಿಕರ ಸಂಘ, ಕಟ್ಟಡ ಕಾರ್ಮಿಕರು ಮತ್ತು ಗ್ರಾಮೀಣ ಕೆಲಸಗಾರರ ಸಂಘ ಹೀಗೆ ಅನೇಕ ವಿಭಾಗದ ಕಾರ್ಮಿಕರನ್ನು ಸಂಘಟಿಸುವಲ್ಲಿ ನಾಯಕತ್ವ ನೀಡುವಲ್ಲಿ ಇವರ ಪಾತ್ರ ಸ್ಮರಣೀಯ. ಅಂಗನವಾಡಿ ನೌಕರರು, ಅಕ್ಷರದಾಸೋಹ, ಆಶಾ ನೌಕರರ ಹೋರಾಟಗಳಿಗೆ ಮಾರ್ಗದರ್ಶನ ಮಾಡಿದ್ದರು. ಉತ್ತರ ಕನ್ನಡ ಜಿಲ್ಲೆಯಲ್ಲಿ ಹಾಗೂ ರಾಜ್ಯಾದ್ಯಂತ ಕಾರ್ಮಿಕ ಚಳುವಳಿ ಕಟ್ಟುವಲ್ಲಿ ಹರೀಶ ನಾಯ್ಕ ಅವರ ಪಾತ್ರ ಮಹತ್ವದ್ದಾಗಿದೆ. ಹಳಿಯಾಳ ರೈತ ಹೋರಾಟದಲ್ಲಿ, ಮಾವಳಂಗಿ ಭೂಮಿ ಹೋರಾಟದಲ್ಲಿ ಅವರು ನಿರ್ಣಾಯಕ ಪಾತ್ರ ವಹಿಸಿದ್ದರು. ತಮ್ಮ ವೈಯಕ್ತಿಕ ಜೀವನದಲ್ಲಿ ಕೂಡ ಪ್ರಗತಿಪರ ವಿಚಾರ ಅಳವಡಿಸಿಕೊಂಡಿದ್ದರು. ಅವರು ಅಂತರ್ಜಾತಿ ವಿವಾಹವಾಗಿದ್ದರು.

ಹಿಂದೆ ರಂಗಭೂಮಿಯಲ್ಲಿ ಕೂಡ ಪಾತ್ರ ಮಾಡಿದ್ದನ್ನು ಹಂಚಿಕೊಂಡಿದ್ದರು. ಹೋರಾಟದ ಹಾಡು ಹೇಳುವುದು ಅವರಿಗೆ ಇಷ್ಟವಾದುದು.

ಸ್ವತಃ ಲೇಖಕರು, ಕವಿಗಳು ಆಗಿದ್ದ ಅವರು, ವೈಚಾರಿಕ ಲೇಖನಗಳನ್ನು, ಕತೆ, ಕಾದಂಬರಿ, ನಾಟಕ, ಕವನ ರಚನೆ ಮಾಡಿದ್ದು 'ಸರ್ವರಿ ಸಂಚರಣ' ಕಾದಂಬರಿ ಪ್ರಕಟವಾಗಿದೆ. ಆವಿಷ್ಕಾರ ಕಾದಂಬರಿ ಅಚ್ಚಿನಲ್ಲಿದೆ. ಅವರು ಕಾರ್ಮಿಕ ಕಾನೂನುಗಳನ್ನು ಹಾಗೂ ಮಾರ್ಕ್ಸವಾದಿ ಸೈದ್ಧಾಂತಿಕ ವಿಚಾರಗಳ ಅರಿತವರಾಗಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ದಾಂಡೇಲಿ ಘಟಕದ ನಿಕಟ ಪೂರ್ವ ಅಧ್ಯಕ್ಷರಾಗಿದ್ದರು.

ಹರೀಶ ನಾಯ್ಕ ಅವರ ನಿಧನ ರಾಜ್ಯದ ಕಾರ್ಮಿಕ ವರ್ಗದ ಚಳವಳಿಗೆ ತುಂಬಲಾರದ ನಷ್ಟವನ್ನುಂಟು ಮಾಡಿದೆ ಎಂದು ನಮನಗಳನ್ನು ಸಲ್ಲಿಸಿರುವ ಸಿಐಟಿಯು ರಾಜ್ಯ ಸಮಿತಿ ಹಾಗೂ ಸಿಪಿಐ(ಎಂ) ಉತ್ತರ ಕನ್ನಡ ಜಿಲ್ಲಾ ಸಮಿತಿಗಳೂ ತೀವ್ರ ಶೋಷಣೆಗೊಳಗಾಗಿದ್ದ ಕಾರ್ಮಿಕ ವರ್ಗಗಳಿಗೆ ನ್ಯಾಯ ಒದಗಿಸಲು ತಮ್ಮ ಜೀವಿತದ ಕೊನೆಯ ದಿನಗಳವರೆಗೂ ಶ್ರಮಿಸಿದ್ದ ಅವರ ಆದರ್ಶಮಯ ಕೆಲಸಗಳನ್ನು ಮುಂದುವರೆಸಲು ನಿರ್ಧರಿಸಿದೆ ಎಂದು ಹೇಳಿವೆ. ●



ಸ್ವಾತಂತ್ರ ಸಂರಕ್ಷಣೆಯ ಸಂಕಲ್ಪ.....

ಪುಟ 3 ರಿಂದ

ಸಾಂಸ್ಕೃತಿಕ ಏಕತೆಯ ಹೆಸರಿನಲ್ಲಿ ಮಾರುಕಟ್ಟೆ ಮತ್ತು ವಿಸ್ತರಣಾವಾದಿ ಉದ್ದೇಶಕ್ಕೆ ಅನುಗುಣವಾಗಿ ಹೊಸೆದ ಸಿದ್ಧಾಂತದ ನೆಲೆಯಲ್ಲಿ ನೆರೆ ಹೊರೆಯ ದೇಶಗಳೊಂದಿಗೆ ಯುದ್ಧಕೋರತನವನ್ನು ಅದು ಪ್ರಚೋದಿಸುತ್ತದೆ. 2025 ನೇ ಇಸ್ವಿಯಲ್ಲಿ ಮತನಿರಪೇಕ್ಷತೆಯ, ಪ್ರಜಾಸತ್ತಾತ್ಮಕ ಭಾರತವನ್ನು ಫ್ಯಾಸಿಸ್ಟ್ ಮನೋಭಾವದ 'ಹಿಂದುತ್ವ' ಸಿದ್ಧಾಂತದ ಮತೀಯ ರಾಷ್ಟ್ರವಾಗಿ ಘೋಷಿಸಬೇಕೆಂಬ ಆತುರವಿದೆ. ಹೀಗಾಗಿ ಆ ದಿಕ್ಕಿನಲ್ಲಿ ದೇಶದ ಎಲ್ಲೆಡೆಗಳಲ್ಲಿ ಅನ್ಯ ಮತದ್ವೇಷವನ್ನು, ಪ್ರಜಾಪ್ರಭುತ್ವದ ನೆಲೆಗಳನ್ನು ನಾಶಗೊಳಿಸುತ್ತಾ ಮುನ್ನಡೆಯಲು ಬಯಸುತ್ತಿದೆ. ಇದಕ್ಕೆ ನೆಚ್ಚಿಕೊಂಡ ಮಾರ್ಗ ವಿಧಾನ ಯೋಜಿತ ಕೋಮು ದಂಗೆಗಳು, ಜನತೆಯನ್ನು ಆಳವಾಗಿ ವಿಭಜಿಸುವ, ದ್ವೇಷದ ಕಿಚ್ಚು ಹೊತ್ತಿಸುವ ಕ್ರಮಗಳು. ಇದಕ್ಕೆ ಸಾಮ್ರಾಜ್ಯಶಾಹಿಯ ಕುಮ್ಮಕ್ಕಿದೆ. ಜನತೆಯನ್ನು ರಕ್ಷಿಸಬೇಕಾದ, ಸಾಂವಿಧಾನಿಕ ಮೌಲ್ಯಗಳು ಮತ್ತು ಆಡಳಿತವನ್ನು ಜಾರಿಗೊಳಿಸಬೇಕಾದ ಪ್ರಭುತ್ವವೇ ವಿಭಜನೆ ಮತ್ತು ವಿನಾಶದ ಶಕ್ತಿಗಳಿಗೆ ಪರೋಕ್ಷ ಒತ್ತಾಸೆಯಾಗುವುದು ಬಹುದೊಡ್ಡ ದುರಂತ. ಮಣಿಪುರದ ಇತ್ತೀಚಿನ ದುರ್ಘಟನೆಗಳೇ ಒಂದು ಜ್ವಲಂತ ಸಾಕ್ಷಿ.

ಹೀಗಾಗಿ ಇದು ಅತ್ಯಂತ ಕಠಿಣವಾದ ಸವಾಲಿನ ಸಂದರ್ಭ. ಇದನ್ನು ಎದುರಿಸದೇ ಬಾರತದ ಜನತೆಗೆ ಅನ್ಯ ಮಾರ್ಗವಿಲ್ಲ. ಈ ಕರಾಳ ಶಕ್ತಿಗಳನ್ನು ಎಲ್ಲಾ ರಂಗಗಳಲ್ಲಿ ಎದುರಿಸಬೇಕು. ವಿಶೇಷವಾಗಿ, ಕಾರ್ಪೊರೇಟ್ ಮತ್ತು ಕೋಮುವಾದಿ ಕೂಟವನ್ನು ಮುಂಬರುವ 2024 ರ ಚುನಾವಣೆಯಲ್ಲಿ ಸೋಲಿಸಬೇಕಿದೆ. ಭಾರತವನ್ನು ರಕ್ಷಿಸುವ ಆದ್ಯ ಸಂಕಲ್ಪವಿದು. ●

ನಾನು ಬ್ರಿಟೀಷರಿಂದ ಸ್ವಲ್ಪವೂ ಬೇರೆಯಾಗುವುದಕ್ಕೆ...

ಪುಟ 2 ರಿಂದ

ಈ ಹಿನ್ನೆಲೆಯಲ್ಲಿ ಸಮಾಜವಾದಿಗಳನ್ನಾಗಲೀ, ಕಮ್ಯೂನಿಸ್ಟ್ ರನ್ನಾಗಲೀ ಬಲಪಡಿಸದೆ ಫ್ಯೂಡಲ್ ದೊರೆಗಳೊಂದಿಗೆ ಭೂಮಿಯ ವಿಷಯವನ್ನು ಮತ್ತು ಕೈಗಾರಿಕೋದ್ಯಮಿಗಳೊಂದಿಗೆ ಸಾಮೂಹಿಕ ಚೌಕಾಸಿಯ ವಿಷಯವನ್ನು ಸರ್ಕಾರ ಪರಿಹರಿಸಿಕೊಳ್ಳಲು ಹೇಗೆ ಸಾಧ್ಯ ಎಂಬ ಪ್ರಶ್ನೆ ಇಲ್ಲಿ ಅಪ್ರಸ್ತುತವಾಗಲಾರದು. ಸಮಾಜವಾದಿ ಹಾಗೂ ಕಮ್ಯೂನಿಸ್ಟ್ ಗುಂಪುಗಳು ಇನ್ನೂ ತೀರಾ ಶೈಶವಾವಸ್ಥೆಯಲ್ಲಿದ್ದರೆ. ಮತ್ತು ಅಷ್ಟು ಪ್ರಬಲವಾಗಿಲ್ಲ ಎಂಬುದು ನಿಜವಾದರೂ ಬೆಳೆಯುತ್ತಿರುವ ಕಾರ್ಮಿಕ ಸಂಘಟನೆಗಳಲ್ಲಿ ಹಾಗೂ ರಾಜಸಂಸ್ಥಾನಗಳಲ್ಲಿ ನಡೆಯುತ್ತಿದ್ದ ಬೆಳವಣಿಗೆಗಳಲ್ಲಿ ಅವರ ಕೈವಾಡ ಬಲವಾಗಿಯೇ ಇತ್ತು. ತೆಲಂಗಾಣ ಜಾಗೃತಿಯ ಹಿನ್ನೆಲೆಯಲ್ಲಿ ನಡೆದ ಕ್ಷೋಭೆಗಳು ಹಾಗೂ ಹೈದರಾಬಾದ್ ನಲ್ಲಿ ಉಳುಮೆ ಭೂಮಿಯನ್ನು ರೈತರು ವಶಪಡಿಸಿಕೊಂಡಂಥ ಘಟನೆಗಳು ಕಮ್ಯೂನಿಸ್ಟ್ ಧ್ವನಿಯ ಯಾವಾಗ ಬೇಕಾದರೂ ದಂಗೆ ಏಳುವ ಮನಸ್ಥಿತಿಯಲ್ಲಿರುವ ರೈತಾಪಿ ಜನರನ್ನು ತಲುಪುತ್ತಿದೆ ಹಾಗೂ ಗ್ರಾಮೀಣ ಭಾರತದಲ್ಲಿ ಕಾಂಗ್ರೆಸ್ ಪಕ್ಷದ ಆಡಳಿತಕ್ಕೆ ಭೀತಿಯೊಡ್ಡುತ್ತಿದೆ ಎಂಬುದರ ಸ್ಪಷ್ಟ ಸೂಚನೆಗಳಾಗಿದ್ದವು.

ಕಮ್ಯೂನಿಸ್ಟ್ ಪಕ್ಷವನ್ನು ಕಾನೂನು ಬಾಹಿರ ಎಂದು ಘೋಷಿಸಲಾಗಿತ್ತು

ಭಾರತದ ಇತರ ಅನೇಕ ರಾಜ್ಯಗಳು ಮತ್ತು ಪ್ರಾಂತ್ಯಗಳಲ್ಲಂತೆ ಬಂಗಾಳ ಹಾಗೂ ಹೈದರಾಬಾದ್ ನಲ್ಲಿ ಕಮ್ಯೂನಿಸ್ಟ್ ಪಕ್ಷವನ್ನು ಕಾನೂನು ಬಾಹಿರ ಎಂದು ಘೋಷಿಸಲಾಗಿತ್ತು. ಆದರೆ ಭಾರತದ ಬಹುತೇಕ ಭಾಗಗಳಲ್ಲಿ ಕಮ್ಯೂನಿಸ್ಟ್ ಪಕ್ಷದ ಅನೇಕ ಸದಸ್ಯರನ್ನು ಬಂಧಿಸಿದ್ದರು ಮತ್ತು ಇನ್ನೂ ಅನೇಕರು ಭೂಗತರಾಗಿದ್ದರು. ಅದು ಯಾಂತ್ರಿಕವಾಗಿ ಇನ್ನೂ ಕಾನೂನು ಬದ್ಧವಾಗಿಯೇ ಇತ್ತು. ಆಗಾಗ ಪೊಲೀಸರು ಕಮ್ಯೂನಿಸ್ಟ್ ವೃತ್ತ ಪತ್ರಿಕೆಗಳ ಪತ್ರಿಕಾಲಯಗಳನ್ನೇ ಧ್ವಂಸಗೊಳಿಸುತ್ತಿದ್ದರು. ಮತ್ತು ವರದಿಗಾರರು ಹಾಗೂ ಸಂಪಾದಕರನ್ನು ನಿರ್ಧಿಷ್ಟ ಆರೋಪವಿಲ್ಲದೆಯೇ "ಸಾರ್ವಜನಿಕ ಹಿತರಕ್ಷಣೆ ದೃಷ್ಟಿಯಿಂದ" ಎಂಬ ನೆಪದಲ್ಲಿ ಬಂಧಿಸಿ ಸೆರೆಮನೆಯಲ್ಲಿಡುವ ಘಟನೆಗಳು ನಡೆಯುತ್ತಿದ್ದವು. ಆದರೂ ಬಾಂಬೆ ಹಾಗೂ ಇನ್ನೂ ಕೆಲವು ನಗರಗಳಲ್ಲಿ ಕಮ್ಯೂನಿಸ್ಟ್ ವೃತ್ತ ಪತ್ರಿಕೆಗಳು ಪ್ರಕಟವಾಗುತ್ತಲೇ ಇವೆ.

ಬ್ರಿಟಿಷರಿಂದ ಪದೇ ಪದೇ ಬಂಧನಕ್ಕೊಳಗಾಗಿ ಸೆರೆಮನೆಗೆ ತಳ್ಳಲ್ಪಡುತ್ತಿದ್ದ ಕಾಂಗ್ರೆಸ್ಸಿಗರ ಕೈಗೆ ಬ್ರಿಟಿಷರು ಅಧಿಕಾರ ಸೂತ್ರಗಳನ್ನು ಕೊಟ್ಟು ಹೋದರು ಎಂಬುದನ್ನು ಸ್ವತಃ ಕಮ್ಯೂನಿಸ್ಟ್ ವಿರೋಧಿಗಳಾಗಿದ್ದ ಕೆಲವು ಭಾರತೀಯರು ನೆನಪಿಸಿಕೊಳ್ಳುತ್ತಾ ಈಗ ಅದೇ ಕ್ರಮ ಪುನರಾವರ್ತನೆ ಆಗುತ್ತಿದೆಯೇ ಎಂಬ ಅಚ್ಚರಿ ವ್ಯಕ್ತಪಡಿಸುತ್ತಿದ್ದರು. ಈ ರಾಜಕೀಯ ಬಂಧನಗಳು ಕಮ್ಯೂನಿಸ್ಟ್ ಪಕ್ಷಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಇಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಅಲ್ಲದಿದ್ದರೂ ಸೋಷಿಯಲಿಸ್ಟರನ್ನೂ ಸಹ ಇದೇ ರೀತಿ ಸೆರೆಮನೆಗೆ ತಳ್ಳುತ್ತಿದ್ದರು. ಭಾರತ ಎದುರಿಸುತ್ತಿರುವ ಸಮಸ್ಯೆಗಳಿಗೆ ಸರ್ಕಾರದ ಟೀಕೆ ಮಾಡಿದವರನ್ನು ಬಂಧಿಸಿದರೆ ಪರಿಹಾರವಾಗುವುದಿಲ್ಲ ಎಂಬ ಅಭಿಪ್ರಾಯ ಸಾಮಾನ್ಯ ಜನರಿಂದ ಕೇಳಿಬರುತ್ತಿತ್ತು. ಸರ್ಕಾರದ ನಾಯಕರಲ್ಲಿ ಮುಕ್ತ ಚರ್ಚೆ ಹಾಗೂ ಭಿನ್ನಾಭಿಪ್ರಾಯಗಳನ್ನು ತಾಳಿಕೊಳ್ಳದೆ ಅಸಹನೆ ಬೆಳೆಯುತ್ತಿರುವುದು ಜನರಲ್ಲಿ ಕಳವಳವನ್ನು ಉಂಟುಮಾಡಿತ್ತು.

ಕಮ್ಯೂನಿಸ್ಟರು ಧಾರ್ಮಿಕ ಹಾಗೂ ಜಾತಿಯ ಗಡಿಗಳನ್ನು ದಾಟಿ ಬಂದವರು

ಕಮ್ಯೂನಿಸ್ಟರು ತಕ್ಷಣವೇ ಅಧಿಕಾರಕ್ಕೆ ಬರುವಂಥ ಯಾವ ಸಾಧ್ಯತೆಯೂ ಕಂಡು ಬರುತ್ತಿಲ್ಲ. ಅವರದು ತೀರಾ ಚಿಕ್ಕ ಗುಂಪು. ಆದರೂ ಅದೊಂದು ಸುವ್ಯವಸ್ಥಿತವಾದ ಹಾಗೂ ಶಿಸ್ತಿನ ಪಕ್ಷ. ಇದರ ಸದಸ್ಯತ್ವ ಸಂಖ್ಯೆ ಸುಮಾರು 80,000. ಭಾರತದ ನಾಲ್ಕು ನೂರು ಮಿಲಿಯನ್ ಜನಸಂಖ್ಯೆಗೆ ಹೋಲಿಸಿದಾಗ ಇದು ಸಾಗರದಲ್ಲಿ ಒಂದು ಹನಿ ಇದ್ದಂತೆ. ಇದರ ಸದಸ್ಯರೆಲ್ಲರೂ 20ರಿಂದ 40 ವರ್ಷ ಒಳಗಿನ ತರುಣರು. ಇವರಲ್ಲಿ ಹೆಚ್ಚಿನವರು ಮಧ್ಯಮವರ್ಗದ ಕುಟುಂಬಗಳಿಗೆ ಸೇರಿದ ವಿದ್ಯಾವಂತರು. ಬಹಳಷ್ಟು ಮಂದಿ ಬ್ರಾಹ್ಮಣರು ಅಂದರೆ ಭಾರತದ ಉಚ್ಚ ಪುರೋಹಿತ ವರ್ಗಕ್ಕೆ ಸೇರಿದವರು. ಇವರು ಎಲ್ಲಾ ಭದ್ರತೆಯನ್ನೂ ತೊರೆದು ರೈತರನ್ನೂ ಕಾರ್ಮಿಕರನ್ನೂ ಸಂಘಟಿಸುವುದಕ್ಕಾಗಿ ಕಣಕ್ಕೆ ಇಳಿದವರು. ಬೇರೆ ಯಾವುದೇ ರಾಜಕೀಯ ಪಕ್ಷಗಳವರಿಗಿಂತ ಧಾರ್ಮಿಕ ಹಾಗೂ ಜಾತಿಯ ಗಡಿಗಳನ್ನು ದಾಟಿ ಬಂದವರು. ಮುಸ್ಲಿಂ, ಹಿಂದೂ, ಸಿಖ್ ಎಂಬ ಭೇದ ಭಾವ ಎಣಿಸದೆ ಎಲ್ಲರನ್ನೂ ಒಂದೇ ಸಮನಾಗಿ ಪರಿಗಣಿಸಿದವರು. ಸ್ವತಃ ಜನರೊಂದಿಗೆ ಬೆರೆತು ಓಡಾಡಿ ಗಳಿಸಿದ ಅನುಭವವೇ ಇವರ ಶಕ್ತಿ ಸಾಮರ್ಥ್ಯಗಳ ಗುಟ್ಟು. ಆದರೆ ಕಮ್ಯೂನಿಸ್ಟರನ್ನು ಇಂದಿನ ಭಾರತದ ಪ್ರಮುಖ ಶಕ್ತಿಯಾಗಿ ಗುರುತಿಸಲು ಸಾಧ್ಯವಿಲ್ಲ.

ಹೀಗೆ ಅಲ್ಪ ಸಂಖ್ಯೆಯಲ್ಲಿರುವ ಮತ್ತು ನಾನಾ ವಿಧದ ಕಿರುಕುಳಗಳನ್ನು ಅನುಭವಿಸುತ್ತಿರುವ ಕಮ್ಯೂನಿಸ್ಟ್ ಪಕ್ಷ ಗಮನಾರ್ಹ ಸಾಧನೆಗಳನ್ನು ಮಾಡಲು ಸಾಧ್ಯವೇ ಎಂಬುದು ಅದರ ಸದಸ್ಯರನ್ನು ಮಾತ್ರ ಅವಲಂಬಿಸಿರದೆ ಎರಡು ಪ್ರಮುಖ ಪಕ್ಷಗಳನ್ನು ಮುಖ್ಯವಾಗಿ ಕಾಂಗ್ರೆಸ್ಸನ್ನು ಆಧರಿಸಿದೆ. ಚೀನಾದಲ್ಲಿ ಸುಧಾರಣೆಗಳನ್ನು ತರುವುದಾಗಿ ಆಶ್ವಾಸನೆ ನೀಡಿ ಕೋಮಿಂಗ್ ಟಾಂಗ್ ಪಕ್ಷ ಅಧಿಕಾರಕ್ಕೆ ಬಂತು. ಅನಂತರ ರೈತರನ್ನು ದೂರಮಾಡಿತು. ಆಗ ಕಮ್ಯೂನಿಸ್ಟರು ಅವರನ್ನು ಗೆದ್ದುಕೊಂಡರು. ಭೂಮಿಯನ್ನು ವಶಪಡಿಸಿಕೊಂಡು ರೈತರಿಗೆ ಅದರ ಮರುಹಂಚಿಕೆ ಮಾಡಿದರು. ಅದೇ ರೀತಿ ರೈತಾಪಿ ಜನರ ಸುಧಾರಣೆಗಳೇ ಭಾರತದ ರಾಜಕೀಯ ಭವಿಷ್ಯದ ಕೀಲಿಕೈ. ರೈತರಿಗೆ ಇರುವುದು ಒಂದೇ ಒಂದು ಸಮಸ್ಯೆ. ಯಾವ ನಾಯಕರು ಅವರ ಭೂ ಸಮಸ್ಯೆಗೆ ಪರಿಹಾರ ಕೊಡುತ್ತಾರೋ ಅಂಥವರನ್ನು ರೈತರು ಹಿಂಬಾಲಿಸುತ್ತಾರೆ.

ಸಾಂಪ್ರದಾಯಿಕ ವ್ಯವಸ್ಥೆಯನ್ನು ಉಳಿಸಿಕೊಂಡು ಬರುವುದರ ಪರವಾಗಿ ನೆಹರೂ ತಾಳಿದ ನಿಲುವು ಮತ್ತು ಸ್ವತಃ ತಾವೇ ಅಷ್ಟೂ ವರ್ಷಗಳಿಂದ ಪ್ರತಿಪಾದಿಸಿಕೊಂಡು ಬಂದ ಕೈಗಾರಿಕೆ ಹಾಗೂ ಕೃಷಿಯ ಸಾಮಾಜೀಕರಣದ ಯೋಜನೆಗಳನ್ನು ಕೈಬಿಡಲು ಒಪ್ಪಿಕೊಂಡಿದ್ದು ಸಮಾಜವಾದಿಗಳನ್ನು ಹತಾಶಗೊಳಿಸಿತ್ತು.... ●

2023 ಆಗಸ್ಟ್ 20-27 ಜನಶಕ್ತಿ ಚಂದಾ ಅಭಿಯಾನ

ವಿಶ್ವ ಆದಿವಾಸಿ ದಿನಾಚರಣೆ
ಆದಿವಾಸಿಗಳ ಸುಸ್ಥಿರ ಅಭಿವೃದ್ಧಿ ಸಾಧ್ಯವೇ?

ಶ್ರೀಧರ ನಾಡ

ಆಗಸ್ಟ್ 9 ರಂದು 'ವಿಶ್ವ ಮೂಲ ನಿವಾಸಿಗಳ ದಿನ'. ಅಂದು ಪ್ರಪಂಚದ ಎಲ್ಲಾ ದೇಶಗಳಲ್ಲಿ ಇದನ್ನು ಆಚರಿಸಲಾಗುತ್ತದೆ. ಅಂದು ಜಗತ್ತಿನಲ್ಲಿ ಮುಖ್ಯವಾಗಿ ಆಯಾ ದೇಶಗಳಲ್ಲಿ ನಾಗರೀಕತೆಯ ಬೆಳವಣಿಗೆಗೆ, ಪರಂಪರೆ, ಪರಿಸರ ರಕ್ಷಣೆಗೆ ಆದಿವಾಸಿ–ಬುಡಕಟ್ಟು ಜನಸಮುದಾಯಗಳು ನೀಡಿರುವ ಕೊಡುಗೆಗಳನ್ನು ಸ್ಮರಿಸಿಕೊಳ್ಳಲಾಗುತ್ತದೆ. ಮಾತ್ರವಲ್ಲ, ಪ್ರಮುಖವಾಗಿ ಈ ಸಮುದಾಯದ ಹಕ್ಕುಗಳನ್ನು ರಕ್ಷಿಸುವುದು, ಅವುಗಳನ್ನು ಜಾರಿಗೆ ತರುವುದಕ್ಕೆ ಸಂಬಂಧಿಸಿ ಅವಲೋಕನೆ ಮತ್ತು ಪ್ರತಿಪಾದನೆಗಳು ನಡೆಯುತ್ತವೆ. ಈ ದಿನಾಚರಣೆಯ ಮೂಲಕ ವಿಶ್ವ ಸಂಸ್ಥೆಯು ಆದಿವಾಸಿ–ಬುಡಕಟ್ಟು ಜನಸಮುದಾಯಗಳ ನಡುವೆ ಅಂತರಾಷ್ಟ್ರೀಯ ಸಂಬಂಧಗಳನ್ನು ಗಟ್ಟಿಗೊಳಿಸಲು, ಈ ಸಮುದಾಯಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವುದು, ಮಾನವ ಹಕ್ಕುಗಳ ರಕ್ಷಣೆ, ಪರಿಸರ ರಕ್ಷಣೆ, ಅಭಿವೃದ್ಧಿ, ಎಲ್ಲರಿಗೂ ಶಿಕ್ಷಣ, ಆರೋಗ್ಯ ಒದಗಿಸಬೇಕೆಂದು ಎಲ್ಲಾ ದೇಶಗಳಿಗೂ ಕರೆ ನೀಡಿದೆ.

1994 ಡಿಸೆಂಬರ್ 10 ರಂದು ವಿಶ್ವ ಸಂಸ್ಥೆಯ (ಯು.ಎನ್.ಓ) ಸಾಮಾನ್ಯ ಸಭೆಯು ಆಗಸ್ಟ್ 9 ರಂದು ಜಗತ್ತಿನಾದ್ಯಂತ 'ಆದಿವಾಸಿ–ಬುಡಕಟ್ಟು ಜನರ ದಿನ'ವನ್ನಾಗಿ ಆಚರಿಸಲು ಘೋಷಿಸಿತು. (ನಿರ್ಣಯ ಸಂಖ್ಯೆ:48/163). ಹಿಂದೆ 1982 ರಲ್ಲಿ ಈ ದಿನದಂದು ಬುಡಕಟ್ಟು ಜನಸಮುದಾಯಗಳ ಕುರಿತ ವಿಶ್ವ ಸಂಸ್ಥೆಯ 'ಕಾರ್ಯನಿರತ ತಂಡ' ಮೊದಲ ಬಾರಿ ಸಭೆ ನಡೆಸಿದ ದಿನವನ್ನೇ ಇದಕ್ಕಾಗಿ ಆಯ್ಕೆ ಮಾಡಲಾಗಿತ್ತು. 1994 ರಲ್ಲಿನ ಈ ನಿರ್ಣಯದ ಬಳಿಕ, ಡಿಸೆಂಬರ್ 23 ರಂದು ನಡೆದ ಸಭೆಯು ಆ ದಿನದ ಹಿನ್ನೆಲೆಯಲ್ಲಿ 1995 ರಿಂದ 2004 ರವರೆಗೆ 'ಅಂತರಾಷ್ಟ್ರೀಯ ದಶಕ'ವನ್ನಾಗಿ ಆಚರಿಸಬೇಕೆಂಬ ನಿರ್ಧಾರವನ್ನು ಕೈಗೊಂಡಿತು. (ಯು.ಎನ್.ಓ. ನಿರ್ಣಯ ಸಂಖ್ಯೆ: 49/214) ಮತ್ತೆ 2005 ರಿಂದ 2015 ವರೆಗೆ ಎರಡನೆಯ ದಶಕವನ್ನು 'ಕ್ರಿಯಾಶೀಲತೆ ಮತ್ತು ಘನತೆಗಾಗಿ' ಆಚರಿಸಲು 2004 ರಲ್ಲಿ ಕರೆ ನೀಡಲಾಯಿತು. ಹಾಗೆಯೇ ವಿಶ್ವ ಸಂಸ್ಥೆಯ ಜನರಲ್ ಅಸೆಂಬ್ಲಿಯು ಸುಸ್ಥಿರ ಅಭಿವೃದ್ಧಿಗಾಗಿ 2030 ಕಾರ್ಯಸೂಚಿ" ಎಂಬ ಶೀರ್ಷಿಕೆಯನ್ನು 25 ಸೆಪ್ಟೆಂಬರ್ 2015 ರಂದು ಅಂಗೀಕರಿಸಿತು. (A/RES/70/1) ಆ ಮೂಲಕ "ನಮ್ಮ ಪ್ರಪಂಚವನ್ನು ಪರಿವರ್ತಿಸುವುದು. ಈ ಕಾರ್ಯಸೂಚಿಯು 1 ಜನವರಿ 2016 ರಂದು ಜಾರಿಗೆ ಬಂದಿತು ಮತ್ತು ಮುಂದಿನ 15 ವರ್ಷಗಳವರೆಗೆ ಇರುತ್ತದೆ. ಇದು ವಿಶಾಲವಾದ ಮತ್ತು ಸಾರ್ವತ್ರಿಕ ನೀತಿಯ ಕಾರ್ಯಸೂಚಿಯಾಗಿದ್ದು, 17 ಸುಸ್ಥಿರ ಅಭಿವೃದ್ಧಿ ಗುರಿಗಳು ಮತ್ತು 169 ಸಂಬಂಧಿತ ಗುರಿಗಳನ್ನು ಸಮಗ್ರ ಮತ್ತು ಅವಿಭಾಜ್ಯ ಎಂದು ವಿವರಿಸಲಾಗಿದೆ. ಸುಸ್ಥಿರ ಅಭಿವೃದ್ಧಿಯ ಕಾರ್ಯಸೂಚಿಯು ಯಾರನ್ನೂ ಹಿಂದೆ ಬಿಡುವುದಿಲ್ಲ ಮತ್ತು ಮೊದಲು ಅತ್ಯಂತ ಹಿಂದುಳಿದವರನ್ನು ತಲುಪುತ್ತದೆ ಎಂದು ಭರವಸೆ ನೀಡುತ್ತದೆ. 2030 ರ ಒಳಗಾಗಿ ವಿಶ್ವದ ಆದಿವಾಸಿ ಬುಡಕಟ್ಟು ಜನರ ಸುಸ್ಥಿರ ಅಭಿವೃದ್ಧಿಗೆ ಶ್ರಮಿಸುವುದು ಮತ್ತು ಯುವಜನತೆ ಸಮುದಾಯದ ಅಭಿವೃದ್ಧಿಗಾಗಿ ಕೈ ಜೊಡಿಸಲು ಪ್ರತಿಜ್ಞೆ ಮಾಡುವ ಮೂಲಕ ಪ್ರಕ್ರಿಯೆಯಲ್ಲಿ ತೊಡಗಲು ವಿಶ್ವ ಸಂಸ್ಥೆ ಕರೆ ನೀಡಿದೆ.

ಮಾನವನ ನಾಗರಿಕತೆಯ ಮೂಲ ಅಡಿಪಾಯವಾಗಿರುವ ಆದಿವಾಸಿಗಳನ್ನು ಮತ್ತು ಆದಿವಾಸಿತನವನ್ನು ಗುರುತಿಸಿ ಗೌರವಿಸಿದ ಕಾರಣಕ್ಕೆ ಇವೆಲ್ಲಾ ಸ್ವಾಗತಾರ್ಹವಾಗಿವೆ. ಇಂದಿನ ಸಮಾಜ ಬಹುತೇಕವಾಗಿ ಬುಡಕಟ್ಟು ಮೂಲಗಳಿಂದಲೇ ಬೆಳೆದು ಬಂದಿದೆ ಎಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಆದರೆ ನಾಗರೀಕತೆ ಬೆಳೆಯುತ್ತಾ ಹೋದಂತೆ ಹಲವಾರು ಸಮುದಾಯಗಳು ಅಭಿವೃದ್ಧಿ, ಬಹುಮುಖ ಬೆಳವಣಿಗೆಗಳಿಂದ ವಂಚಿತವಾಗಿ ಎಲ್ಲಾ ನಾಗರೀಕ ಸಾಧನೆ ಮತ್ತು ಸೌಲಭ್ಯಗಳ ಫಲವಿಲ್ಲದೇ ನರಳುತ್ತಾ ಬದುಕುತ್ತಿವೆ. ನಾಗರೀಕ ಸಮಾಜದ ಬೆಳವಣಿಗೆಗೆ ವಿವಿಧ ರೀತಿಯಲ್ಲಿ ಶ್ರಮಿಸುತ್ತಾ ಅಪಾರವಾದ ಕೊಡುಗೆಗಳನ್ನು ಕೊಟ್ಟಿರುವ ಆದಿವಾಸಿ–ಬುಡಕಟ್ಟು ಸಮುದಾಯಗಳನ್ನು ಮೂಲೆಗೊತ್ತಿರುವ ಸ್ಥಿತಿಗಳ ವಿರುದ್ಧ ದನಿಯೆತ್ತಿ ನಡೆಸಿದ ಹೋರಾಟದ ಪರಿಣಾಮವಾಗಿ ವಿಶ್ವ ಸಂಸ್ಥೆಯು ಈ ದಿನವನ್ನು ಆಚರಿಸಲು ನಿರ್ಧರಿಸಿತು. ಈ ಮೂಲಕ ಎಲ್ಲಾ ರೀತಿಯಿಂದಲೂ ತುಳಿತಕ್ಕೊಳಗಾಗಿರುವ ಆದಿವಾಸಿ–ಬುಡಕಟ್ಟು ಸಮುದಾಯಗಳಲ್ಲಿ ಜಾಗೃತಿಯನ್ನುಂಟು ಮಾಡಲು, ಪಾರಂಪರಿಕ ಹಕ್ಕುಗಳ ರಕ್ಷಣೆ, ವಿಶಿಷ್ಠ ಜೀವನ ಕ್ರಮ, ಜ್ಞಾನ ಪರಂಪರೆ, ಸಮಾಜಕ್ಕೆ ಅವರ ಕೊಡುಗೆಗಳನ್ನು ಗುರುತಿಸಿ ಗೌರವಿಸಲು ಪ್ರಯತ್ನಿಸಲಾಗುತ್ತಿದೆ.

ಅರಣ್ಯ ಸಂರಕ್ಷಣೆ ಕಾಯ್ದೆ 2023 ತಿದ್ದುಪಡಿ ಕಾನೂನು

ಇಂದು ಅಭಿವೃದ್ಧಿಯ ಹೆಸರಿನಲ್ಲಿ ಅನೇಕ ಯೋಜನೆಗಳು ಆದಿವಾಸಿಗಳ ಮೂಲ ನೆಲೆಗೆ ಮುಳ್ಳಾಗಿವೆ. ಜಾಗತಿಕ ಒಡಂಬಡಿಕೆಗಳು ಮತ್ತು ಜಾಗತಿಕ ವಾಣಿಜ್ಯೋದ್ಯಮದ ಹಿನ್ನೆಲೆಯಲ್ಲಿ ಅನೇಕ ತಿದ್ದುಪಡಿಗಳನ್ನು ಸಂವಿಧಾನಾತ್ಮಕ ಹಕ್ಕುಗಳಿಗೆ ಮತ್ತು ಕಾನೂನುಗಳಿಗೆ ತರಲಾಗುತ್ತಿದೆ. ಖನಿಜ ಮತ್ತು ಗಣಿಗಾರಿಕೆ ಕಾಯ್ದೆಗೆ ತಿದ್ದುಪಡಿ ತಂದು ಸರಕಾರ ಆದಿವಾಸಿಗಳ ಪ್ರದೇಶಗಳಲ್ಲಿ ಮನಬಂದಂತೆ ಹಸ್ತಕ್ಷೇಪ ಮಾಡುತ್ತಿದೆ ವಿವೇಚನೆಯಿಲ್ಲದೆ ನಡೆಸುವ ಅರಣ್ಯ ಸಂಪನ್ಮೂಲಗಳ ಲೂಟಿ ಇಡೀ ದೇಶವನ್ನೇ ಒಂದು ಹಂತದಲ್ಲಿ ಬರಡು ಮಾಡಬಲ್ಲದು. ಆದಿವಾಸಿಗಳ ಸ್ಥಳೀಯ ಆಡಳಿತದ ಒಪ್ಪಿಗೆ ಇಲ್ಲದೆ ಯಾವುದೇ ಕಾರ್ಯಗಳನ್ನು ಕೈಗೊಳ್ಳುವಂತಿಲ್ಲ. ಆದರೆ ದೇಶದ ಅಭಿವೃದ್ಧಿಯ ಹೆಸರಿನಲ್ಲಿ ಆದಿವಾಸಿಗಳನ್ನು ಅವರ ನೆಲೆಗಳಿಂದ ಎತ್ತಂಗಡಿ ಮಾಡಿ ಅವರ ಪ್ರದೇಶಗಳನ್ನು ಬೃಹತ್ ಕೈಗಾರಿಕಾ ಕಂಪೆನಿಗಳಿಗೆ ನೀಡಲಾಗುತ್ತಿದೆ. ಆದಿವಾಸಿ ಪ್ರದೇಶಗಳಲ್ಲಿ ಇರುವ ಎಲ್ಲಾ ನಿರ್ಬಂಧಗಳನ್ನು ಹಂತಹಂತವಾಗಿ ತೆರವುಗೊಳಿಸಲಾಗುತ್ತಿದೆ.

ಆದಿವಾಸಿ ಶೆಡ್ಯೂಲ್ ಪ್ರದೇಶಗಳಲ್ಲಿ ಸಂಗ್ರಹವಾಗುವ ಉತ್ಪನ್ನ, ಸಂಪನ್ಮೂಲಗಳನ್ನು ಆದಿವಾಸಿಗಳ ಅಭಿವೃದ್ಧಿಗೆ ಮೀಸಲಿಡಬೇಕು ಎನ್ನುವ ನಿಯಮಗಳಿಗೆ ತಿದ್ದುಪಡಿ ತಂದು ಆದಿವಾಸಿಯೇತರ ಉದ್ದೇಶಕ್ಕೆ ಬಳಸಿಕೊಳ್ಳಲು ಅನುಮತಿ ನೀಡಲಾಗಿದೆ. "ಪೇಸಾ' ಕಾಯ್ದೆ ಪ್ರಕಾರ ಆದಿವಾಸಿ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯ ನಡೆಸುವ ಮೊದಲು ಪರಿಸರ ಮತ್ತು ಆದಿವಾಸಿಗಳ ಮೇಲೆ ಆಗುವ ಪರಿಣಾಮಗಳ ಕುರಿತು ಅಧ್ಯಯನ ನಡೆಸಬೇಕು. ಸ್ಥಳೀಯ ಆಡಳಿತ ಮತ್ತು ಆದಿವಾಸಿಗಳ ಒಪ್ಪಿಗೆ ಪಡೆಯಬೇಕು. ಆದರೆ ಈಗಿನ ನಮ್ಮ ಕೇಂದ್ರ ಸರ್ಕಾರ ಈ ಕಾನೂನುಗಳನ್ನು ಬುಡಮೇಲು ಮಾಡಿದೆ. ಸರಕಾರ ಕಾರ್ಪೋರೇಟ್ ಪರವಾಗಿ ಎಲ್ಲಾ ಅನುಕೂಲ ಮಾಡಿಕೊಡುವ ಭರದಲ್ಲಿ ಆದಿವಾಸಿಗಳಿಗೆ ಸಂವಿಧಾನದ ಪರಿಚ್ಛೇದ 5 ಮತ್ತು 6 ರಲ್ಲಿ ನೀಡಿರುವ ಹಕ್ಕುಗಳನ್ನು ಕಸಿದುಕೊಂಡಿದೆ. ಅದು ಈ ಭಾರಿ ಸಂಸತ್ತಿನಲ್ಲಿ ಅಂಗಿಕಾರವಾದ ಅರಣ್ಯ ಸಂರಕ್ಷಣೆ ಕಾಯ್ದೆ 2023 ತಿದ್ದುಪಡಿ ಕಾನೂನು ಇನಷ್ಟು ವೇಗವಾಗಿ ಪರಿಸರ ಮತ್ತು ಆದಿವಾಸಿಗಳ ವಿನಾಶಕ್ಕೆ ದಾರಿಮಾಡಿಕೊಡಲಿದೆ. ಆದಿವಾಸಿಗಳಿಗೆ ಆಗಿರುವ ಚಾರಿತ್ರಿಕ ಅನ್ಯಾಯವನ್ನು ಸರಿಪಡಿಸಲು ಎಂದೇ ತಂದಿರುವ 2006 ರ ಅರಣ್ಯ ಹಕ್ಕುಗಳ ಕಾಯ್ದೆಯನ್ನು ರದ್ದುಗೊಳಿಸುವ ಪ್ರಯತ್ನಗಳು ಆರಂಭಗೊಂಡಿದೆ. ಇಂತಹ ಆದಿವಾಸಿ ವಿರೋದಿ ನೀತಿಗಳು ಇತ್ತೀಚಿನ ವರ್ಷಗಳಲ್ಲಿ ಹೆಚ್ಚುತ್ತಲೇ ನಡೆದಿವೆ. ಹೀಗಿರುವಾಗ ಸರಕಾರಗಳು ಆದಿವಾಸಿ–ಬುಡಕಟ್ಟು ಜನರಿಗೆ ಏನೇನೋ ಮಾಡಿದ್ದೇವೆಂದು ಹೇಳಿಕೊಳ್ಳುವುದರಲ್ಲಿ ಏನು ಅರ್ಥವಿದೆಯೇ?



ಅಳಿವಿನಂಚಿನತ್ತ ಸಾಗಿವೆ

ಭಾರತದ ನಾಗರಿಕ ಸಮಾಜದಲ್ಲಿ ಒಂದು ಹಂತದಲ್ಲಿ ಮುಂದಕ್ಕೆ ಹೋಗಿರುವ ಸಮುದಾಯಗಳು ತಮ್ಮನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಲು ಮತ್ತು ಇನ್ನೂ ಕೆಲವು ಸಮುದಾಯಗಳು ಇನ್ನುಳಿದ ಮೂಲ ಆದಿವಾಸಿಗಳ ಗಣನೆಗೆ ತೆಗೆದುಕೊಳ್ಳದೆ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ರಾಜಕೀಯ ಸ್ವಾಯತ್ತತೆ ನೀಡಲು ಪಟ್ಟು ಹಿಡಿದು ಚಳವಳಿ ಮಾಡುತ್ತಿರುವುದು ಅತ್ಯಂತ ಕಳವಳದ ಸಂಗತಿಯಾಗಿದೆ. ಕರ್ನಾಟಕದಲ್ಲಿ ಈಗಾಗಲೇ ಸರಕಾರ ಗುರುತಿಸಿದ 50 ಪರಿಶಿಷ್ಟ ಪಂಗಡದ ಸಮುದಾಯಗಳಲ್ಲಿ 26 ಸಮುದಾಯಗಳು ಗಣನೀಯವಾಗಿ ತಮ್ಮ ಸಂಖ್ಯೆ ಕಡಿಮೆಯಾಗಿ ಅಳಿವಿನಂಚಿಗೆ ಸಾಗಿವೆ.

ನಿಜವಾಗಿ ಆದಿವಾಸಿ ಬುಡಕಟ್ಟು ಸಮುದಾಯಗಳಾಗಿರುವ ಕಣುಬಿ, ಹಾಲಕ್ಕಿ, ಕರೆಒಕ್ಕಲಿಗ, ಉಡುಪಿ ಜಿಲ್ಲೆಯ ಹಸಲ ಸಮುದಾಯಗಳನ್ನು ಇದುವರೆಗೆ ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸದೆ ಮೀನಾಮೇಷ ಎಣಿಸಲಾಗುತ್ತಿದೆ. ಇಂತಹ ಸಮುದಾಯಗಳ ಸುಸ್ಥಿರ ಅಭಿವೃದ್ಧಿ ಸಾಧಿಸವ ಗುರಿ, ಅದಕ್ಕೆ ಬೇಕಾದ ಕಾರ್ಯಯೋಜನೆಗಳನ್ನು ಸರಕಾರ ರೂಪಿಸಿಲ್ಲ. ಸಮುದಾಯದ ಹಿತಾಸಕ್ತಿಗಿಂತ ಜನವಿರೋಧಿ ನೀತಿಗಳ ಮೂಲಕ ದೇಶದ ಅಭಿವೃದ್ಧಿ ಹೆಸರಿನಲ್ಲಿ ಆದಿವಾಸಿಗಳ ಬದುಕುವ ಹಕ್ಕನ್ನು ಕಸಿಯಲಾಗುತ್ತಿದೆ. ಮುಖ್ಯವಾಗಿ ಎಲ್ಲಾ ಆದಿವಾಸಿ–ಬುಡಕಟ್ಟು ಜನಾಂಗಗಳು ನಾವೆಲ್ಲಾ ಒಂದೇ ಎಂಬ ಒಗ್ಗಟ್ಟು ತೋರಬೇಕಿದೆ. ಅಲ್ಲದೇ ಎಲ್ಲಾ ಇತರೆ ನಾಗರೀಕ ಸಮುದಾಯಗಳೊಂದಿಗೆ ಐಕ್ಯತೆಯನ್ನು ಬೆಸೆಯಬೇಕಿದೆ. ಈ ಆಚರಣೆಯನ್ನು 'ಮನುಷ್ಯರ ನಡುವೆ, ಸಮಾಜದ ಇತರೆ ಸಮುದಾಯಗಳ ನಡುವಿನ ಅಂತರವನ್ನು ತೊಲಗಿಸಿ, ಸಮಾನತೆಯ ಬಾಂಧವ್ಯದ ಸೇತುವೆ ನಿರ್ಮಿಸಲು' ಗಮನ ಕೇಂದ್ರೀಕರಿಸಬೇಕೆಂದು ವಿಶ್ವ ಸಂಸ್ಥೆಯ ಸಭೆಯಲ್ಲಿ ನಿರ್ಧರಿಸಲಾಗಿದೆ.

ಜೀವನ ಸ್ಥಿತಿ ಸುಧಾರಿಸಲಿಲ್ಲ

ಇಂತಹ ದಿನಾಚರಣೆಗಳನ್ನು ಸರಕಾರಗಳು ಕಳೆದ 28 ವರುಷಗಳಿಂದಲೂ ಮಾಡಿಕೊಂಡೇ ಬಂದಿವೆ. ಕೆಲವು ಯೋಜನೆಗಳನ್ನು ಪ್ರಕಟಿಸಲಾಗುತ್ತಿದೆ. ಆದರೆ ನಿಜಕ್ಕೂ ಆದಿವಾಸಿ–ಬುಡಕಟ್ಟು ಸಮುದಾಯಗಳ ಜೀವನ ಸ್ಥಿತಿ ಸುಧಾರಿಸಿತೇ? ಖಂಡಿತ ಇಲ್ಲ ಎಂಬುದೇ ಇದಕ್ಕೆ ಉತ್ತರ. ಈಗಲೂ ಕಾಡು ಮೇಡುಗಳಲ್ಲಿ ದುರ್ಗಮ ಜೀವನ ನಡೆಸುತ್ತಾ, ಸ್ವಂತ ಭೂಮಿ ಇಲ್ಲ, ಮನೆಯಿಲ್ಲ, ಶಿಕ್ಷಣ, ಆರೋಗ್ಯವಿಲ್ಲ. ಹೊಟ್ಟೆ ತುಂಬಾ ಆಹಾರವಿಲ್ಲ. ರೇಷನ್ ಕಾರ್ಡ್, ಮತದಾರರ ಗುರುತಿನ ಚೀಟಿಯೂ ಬಹಳಷ್ಟು ಜನರಿಗಿಲ್ಲ. ಬದುಕಲು ಇತರರ ಜಮೀನು–ಪ್ಲಾಂಟೇಷನ್ಗಳಲ್ಲಿ ಜೀತದಾಳುಗಳಂತೆ ಕೆಲಸ ಮಾಡುತ್ತಿದ್ದಾರೆ. ಕಾರ್ಖಾನೆಗಳಲ್ಲಿ, ಕಟ್ಟಡ ಮುಂತಾದ ಕಾಮಗಾರಿಗಳಲ್ಲಿ ಮೈಮುರಿದು ದುಡಿಯುತ್ತಿದ್ದಾರೆ. ಅನೇಕ ಕಡೆಗಳಲ್ಲಿ ಉದ್ಯೋಗದ ಅವಕಾಶಗಳೇ ಇಲ್ಲ. ಹಲವಾರು ಅಭಿವೃದ್ಧಿ ಯೋಜನೆಗಳ ಹೆಸರಿನಲ್ಲಿ ಅವರು

ಪುಟ 7 ಕ್ಕೆ

2001 ಮತ್ತು 2011 ರ ಜನಗಣತಿ ಪ್ರಕಾರ ಕ್ರಮವಾಗಿ ಪ್ರತಿ ಸಮುದಾಯದ ಜನಸಂಖ್ಯೆ ಗಮನಿಸಿದರೆ,

ಚೊದ್ರಾ ಸಮುದಾಯ ಜನಸಂಖ್ಯೆ 359 ರಿಂದ 117 ಕ್ಕೆ ಇಳಿಕೆಯಾದರೆ,

ದಬ್ಲಾ	384	– 264
ಗೌಡರು	12,507	– 8617
ಇರುಳರ್	819	– 703
ಕಾಡುಕುರುಬು	17,112	– 11,953
ಕಾತೋಡಿ	477	– 274
ಕೊರಗ	16,071	– 14794
ಕೊಟ್ಟಾ	211	– 121
ಕೊಯಾ	1640	– 365
ಕುಡಿಯಾ	2733	– 2169
ಕುರುಮನ್ಸ್	798	– 347
ಮಾಲಸರ್	103	– 82
ಮಲೆಯರು	1360	– 440
ಪಲ್ಲಿಯನ್	536	– 226
ಪಣಿಯನ್	724	– 495
ಪಟೇಲಿಯಾ	193	– 57
ವಿಟೋಲಿಯಾ	154	– 23

ಇನ್ನೂ 2011 ರ ಜನಗಣತಿ ಪ್ರಕಾರ ಅತೀ ಕಡಿಮೆ ಜನಸಂಖ್ಯೆ ಹೊಂದಿರುವ ಸಣ್ಣ ಆದಿವಾಸಿಗಳನ್ನು ಗುರುತಿಸುವುದ್ದಾದರೆ.

ಅಡಿಯಾನ್	– 758
ಬಾರದಾ	– 266
ಬಾವಚಾ	– 960
ಚಂಚು	– 954
ಗಮೀಟ್	– 516
ಕಮ್ಮಾರಾ	– 949
ಕಣಿಯನ್	– 413
ಕಟ್ಟುನಾಯಕನ್	– 168
ಮಾಹಾ ಮಲಸರ್	– 36
ಮಲೆಯಿಕಂಡಿ	– 116
ರಾತವ	– 45
ಸೋಲಗಾ	– 147

ಏಕರೂಪ ನಾಗರಿಕ ಸಂಹಿತೆ ಒಂದು ತಂತ್ರ–ಪಿಣರಾಯಿ ವಿಜಯನ್

ಕೇರಳ ವಿಧಾನಸಭೆ: ಯುಸಿಸಿ ವಿರುದ್ಧ ನಿರ್ಣಯ ಅಂಗೀಕಾರ
ಕೇರಳ ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಭಾಷಣ

ಸಂಘಪರಿವಾರದ ಚರ್ಚೆಯ ಹಿಂದಿರುವ ಅಜೆಂಡಾ, ಸಂವಿಧಾನದ ಮಾರ್ಗದರ್ಶಿ ಸೂತ್ರಗಳಲ್ಲಿ ಹೇಳಿರುವಂತೆ ಏಕರೂಪ ಸಾಮಾನ್ಯ ನಾಗರಿಕ ಕಾನೂನನ್ನು ಹೊಂದಬೇಕೆ, ಬೇಡವೇ ಎಂಬುದಲ್ಲ. ಸಂಘಪರಿವಾರದ ಮನಸ್ಸಿನಲ್ಲಿರುವ ಏಕರೂಪ ನಾಗರಿಕ ಸಂಹಿತೆ ಮನುಸ್ಮೃತಿಯನ್ನು ಆಧರಿಸಿದೆಯೇ ಹೊರತು, ಸಂವಿಧಾನದಲ್ಲಿ ಪ್ರತಿಪಾದಿಸಲ್ಪಟ್ಟ ಸಾಮಾನ್ಯ ನಾಗರಿಕ ಕಾನೂನಲ್ಲ. ಸಂಘಪರಿವಾರ ಬಹಳ ಹಿಂದೆಯೇ ಇದನ್ನು ಸ್ಪಷ್ಟಪಡಿಸಿದೆ.

ಕೇರಳ ವಿಧಾನಸಭೆಯು ಆಗಸ್ಟ್ 8 ರಂದು ಏಕರೂಪ ನಾಗರಿಕ ಸಂಹಿತೆ ವಿರುದ್ಧ ನಿರ್ಣಯವನ್ನು ಅಂಗೀಕರಿಸಿತು. ಇದಕ್ಕೂ ಮುನ್ನ ನಿರ್ಣಯವನ್ನು ಪ್ರಸ್ತಾಪಿಸಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಭಾಷಣ ಮಾಡುತ್ತ ಸಂಘಪರಿವಾರದ ತಂತ್ರವನ್ನು ಬಿಚ್ಚಿಟ್ಟಿದ್ದಾರೆ.

ಸಂವಿಧಾನವನ್ನು ಒಪ್ಪದವರು

ಅಂದು, ಸಾಂವಿಧಾನಿಕ ಚರ್ಚೆಯ ಸಂದರ್ಭದಲ್ಲಿ ಸಂಘಪರಿವಾರ ತನ್ನ ದಿನಪತ್ರಿಕೆಯ ಮುಖಪುಟದಲ್ಲಿ ತನ್ನ ರಾಜಕೀಯ ನಿಲುವನ್ನು ಸ್ಪಷ್ಟಪಡಿಸಿದೆ. ಅದರಲ್ಲಿರುವ ಒಂದು ವಿಷಯ ಹೇಳಲೇ ಬೇಕಾಗಿದೆ. "ಸರ್ಕಾರ ರಚನೆಗೆ ಮಾದರಿಗಳನ್ನು ಹುಡುಕಿಕೊಂಡು ವಿದೇಶಕ್ಕೆ ಹೋಗುವ ಅಗತ್ಯವಿಲ್ಲ; ಈ ವಿಷಯದಲ್ಲಿ ನಮ್ಮದೇ ಆದ ಮಾರ್ಗದರ್ಶಿ ನಮ್ಮ ಮುಂದಿದೆ ಮತ್ತು ಅದು ಮನುಸ್ಮೃತಿಯಾಗಿದೆ." ಇದುವೇ ಅದರ ವಿಷಯವಾಗಿತ್ತು. ನಂತರ 1950 ರಲ್ಲಿ ಸಂವಿಧಾನ ರಚನೆಯಾದಾಗ, ಆ ಸಂವಿಧಾನ ತಮಗೆ ಅದು ಒಪ್ಪಿತವಲ್ಲ ಎಂದು ಹೇಳಲು ಅವರು ಎರಡು ಬಾರಿ ಯೋಚಿಸುವ ಅಗತ್ಯವಿರಲಿಲ್ಲ. ಸಂವಿಧಾನವನ್ನು ಅಕ್ಷರಶಃ ಮತ್ತು ಭಾವನಾತ್ಮಕವಾಗಿ ತಿರಸ್ಕರಿಸುವವರು ಸಂವಿಧಾನದಲ್ಲಿ ಏನನ್ನೋ ಜಾರಿಗೆ ತರಲು ಪ್ರಯತ್ನಿಸುತ್ತಿದ್ದಾರೆ ಎಂಬ ಭಾವನೆ ಯಾರಿಗೂ ಇರಬಾರದು. ಅವರಿಗೆ ಸಂವಿಧಾನವೆಂದರೆ ಮನುಸ್ಮೃತಿ. ಅವರು ಭಾರತೀಯ ಸಾಮಾಜಿಕ ರಚನೆಯನ್ನು ಅದರ ನಿಯಮಗಳ ಮೇಲೆ ಮರುನಿರ್ಮಾಣ ಮಾಡಲು ಬಯಸುತ್ತಾರೆ. ಈ ದೇಶದ ಸಂವಿಧಾನವನ್ನು ಸಂಘ ಪರಿವಾರ ಒಪ್ಪುವುದಿಲ್ಲ. ಮತ್ತೆ ಹೇಗೆ ಅದನ್ನು ಶಿಫಾರಸು ಮಾಡಲಾದ ತತ್ವಗಳಲ್ಲಿ ಹೇಳಿರುವಂತೆ ಅವರು ಸಾಮಾನ್ಯ ನಾಗರಿಕ ಕಾನೂನನ್ನು ಒಪ್ಪಿಕೊಳ್ಳುತ್ತಾರೆ? ಸಂಘಪರಿವಾರ ಯಾವಾಗಲೂ ಸಂವಿಧಾನಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಲೇ ಬಂದಿದೆ. ಇದು ಅವರಲ್ಲಿರುವ ಸಂವಿಧಾನ ವಿರೋಧಿ ನಡೆಗಳು ಮತ್ತು ಅದರ ಮೇಲಿನ ದಾಳಿಯ ಕಾರ್ಯಸೂಚಿಯ ಭಾಗವಾಗಿದೆ. ಅದರ ಹೊರತಾಗಿ, ಸಂವಿಧಾನದ ಮಾರ್ಗದರ್ಶಿ ಸೂತ್ರಗಳಲ್ಲಿ ಹೇಳಿರುವಂತೆ, ಸಂವಿಧಾನವನ್ನು ಅನುಷ್ಠಾನಗೊಳಿಸಲು, ಬಲಪಡಿಸಲು ಯಾವುದೂ ಇಲ್ಲ. ಶರಿಯಾ, ಮುಸ್ಲಿಂ ವೈಯಕ್ತಿಕ ಕಾನೂನು ಅಥವಾ ರಾಜ್ಯ ಕಾನೂನು ಅವರ ಚರ್ಚೆಯ ಕೇಂದ್ರಬಿಂದುವಲ್ಲ. ಬದಲಾಗಿ, ಒಂದು ಹಿಂದೂ ಚಾತುರ್ವರ್ಣದ ಜಾತಿ ಆಧಾರಿತ ಶಾಸನದ ಮೂಲಕ ಇತರ ಧರ್ಮಗಳನ್ನು ತುಳಿಯುವುದು ಇದರ ಉದ್ದೇಶವಾಗಿದೆ.

ಆರೆಸ್ಸೆಸ್ ಶತಮಾನೋತ್ಸವದ ಮಹತ್ವಾಕಾಂಕ್ಷೆ

2025 ರಲ್ಲಿ ಆರೆಸ್ಸೆಸ್‌ನ ಶತಮಾನೋತ್ಸವ ಕಾರ್ಯಕ್ರಮವಿದೆ. ಅಷ್ಟರೊಳಗೆ ಮಾಡಬೇಕಾದ ಮೂರು ವಿಷಯಗಳನ್ನು ಅವರು ಈಗಾಗಲೇ ಘೋಷಿಸಿದ್ದಾರೆ. ಹಿಂದೂಗಳು ಮತ್ತು ಮುಸ್ಲಿಮರು ಒಟ್ಟಿಗೆ ವಾಸಿಸುವ ಭಾರತೀಯ ಜಾತ್ಯತೀತತೆಯ ಎಲ್ಲಾ ಕುರುಹುಗಳನ್ನು ನಾಶಪಡಿಸುವುದು. ಆ ಜಾತ್ಯತೀತ ಹೆಗ್ಗುರುತುಗಳಲ್ಲಿ ಬಾಬರಿ ಮಸೀದಿಯೂ ಒಂದು. ಅದನ್ನು ಅವರು ಒಡೆದು ಹಾಕಿದರು. ಮುಂದಿನದು, ಮುಸ್ಲಿಮರು ಬಹುಸಂಖ್ಯಾತರಾಗಿರುವ ಕಾಶ್ಮೀರ. ವಿಭಜನೆಯ ನಂತರವೂ ಭಾರತದೊಂದಿಗೆ ಉಳಿದಿರುವ ಮುಸ್ಲಿಂ ಬಹುಸಂಖ್ಯಾತ ಪ್ರದೇಶ ಇದು. ಆ ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ತೆಗೆದುಹಾಕುವುದು ಎರಡನೆಯ ವಿಷಯ. ಅದರ ಮೂಲಕ ಕಾಶ್ಮೀರವನ್ನು ಪ್ರತ್ಯೇಕ ಭಾಗಗಳಾಗಿ ವಿಂಗಡಿಸಲಾಯಿತು. ಮೂರನೆಯ ವಿಷಯವೆಂದರೆ, ಸಂವಿಧಾನವನ್ನು ಮನುಸ್ಮೃತಿಯೊಂದಿಗೆ ಬದಲಾಯಿಸುವುದು. ಆದ್ದರಿಂದ ಇದನ್ನು ಸಂವಿಧಾನದ ಮೇಲಿನ ದಾಳಿ ಎಂದೇ ಪರಿಗಣಿಸಬೇಕು. ಹಿಂದೂ ರಾಷ್ಟ್ರ ಸ್ಥಾಪನೆಯ ಸಂಘಪರಿವಾರದ ಚಿರಂತನ ಕನಸನ್ನು ನನಸು ಮಾಡಲು ಅವರು ಈಗ ಶ್ರಮಿಸುತ್ತಿದ್ದಾರೆ. ಇಂದಿನ ಭಾರತೀಯ ಸಮಾಜವು ಇಲ್ಲಿರುವ ವಿವಿಧ ಸಂಸ್ಕೃತಿಗಳಿಂದ ಕೂಡಿದೆ. ಇದು ಪ್ರಪಂಚದ ವಿವಿಧ ಭಾಗಗಳಿಂದ ವಿವಿಧ ಹಂತಗಳಲ್ಲಿ ಇಲ್ಲಿಗೆ ಬಂದಿದೆ. ರಾಷ್ಟ್ರೀಯ ಆಂದೋಲನದ ಸಮಯದಲ್ಲಿ ಐತಿಹಾಸಿಕ ಮತ್ತು ಸಾಮಾಜಿಕ ವಾಸ್ತವತೆಯನ್ನು ಗಮನದಲ್ಲಿಟ್ಟುಕೊಂಡು ವಿವಿಧತೆಯಲ್ಲಿ ಏಕತೆಯ ಪರಿಕಲ್ಪನೆಯನ್ನು ಅಭಿವೃದ್ಧಿಪಡಿಸಲಾಯಿತು. ಭಾರತದ ಶ್ರೇಷ್ಠ ಲಕ್ಷಣವೆಂದರೆ ಈ ವಿಷಯ ಆಧಾರಿತ ಪ್ರಗತಿ. ಆ ದೃಷ್ಟಿಕೋನವನ್ನು ಬಲಪಡಿಸುವ ಮೂಲಕ, ಭಾರತದ ಸಂವಿಧಾನವು ವಿವಿಧ ಭಾಷೆಗಳು, ಸಂಸ್ಕೃತಿಗಳು ಮತ್ತು ಜನರನ್ನು ಅಪ್ಪಿಕೊಳ್ಳುವ ವಿಧಾನವನ್ನು ಅಳವಡಿಸಿಕೊಂಡಿದೆ ಮತ್ತು ಅವರಿಗೆ ವಿಶೇಷ ಸ್ಥಾನಮಾನ ಅಥವಾ ರಕ್ಷಣೆ ಅಗತ್ಯವಿದ್ದರೆ ಅವರನ್ನು ದೃಢೀಕರಿಸುತ್ತದೆ.

ವಿಶೇಷ ವಿಭಾಗಗಳನ್ನು ತೆಗೆದುಹಾಕುವುದು

ಇಂತಹ ಸಾಮಾನ್ಯ ದೃಷ್ಟಿಕೋನದ ಆಧಾರದ ಮೇಲೆ ಭಾರತದ ಸಂವಿಧಾನದ 21ನೇ ವಿಧಿಯಲ್ಲಿ ಕೆಲವು ನಿರ್ದಿಷ್ಟ ವಿಧಿಗಳನ್ನು ಸೇರಿಸಲಾಗಿದೆ. ಅವುಗಳಲ್ಲಿ ಸೆಕ್ಷನ್ 370, ಸೆಕ್ಷನ್ 371 ಮತ್ತು ಸೆಕ್ಷನ್ 371 ಎ ಯಿಂದ ಐ ವರೆಗೆ ಒಳಗೊಂಡಿರುವ ವಿಧಿಗಳು ಪ್ರಮುಖವಾದವುಗಳು. ಅವುಗಳಲ್ಲಿ, ಈಗಿನ ಕೇಂದ್ರ ಸರ್ಕಾರವು ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯಿಸುವ 370 ನೇ ವಿಧಿಯನ್ನು ರದ್ದುಗೊಳಿಸಿದ ಪ್ರಕ್ರಿಯೆಯನ್ನು ನಾವೆಲ್ಲರೂ ನೆನಪಿಸಿಕೊಳ್ಳುತ್ತೇವೆ. ಈಗ ಏಕರೂಪ ನಾಗರಿಕ ಸಂಹಿತೆಯ ಪ್ರತಿಪಾದಕರೇ 370 ನೇ ವಿಧಿಯನ್ನು ತೆಗೆದುಹಾಕುವುದನ್ನು ಸಮರ್ಥಿಸಲು ಮುಂದಾಗಿದ್ದಾರೆ. ಭಾರತವನ್ನು ಒಗ್ಗೂಡಿಸಲು ಇದು ಸಹಾಯ ಮಾಡುತ್ತಿದೆ ಎಂದು ಸ್ವಾಗತಿಸಿದ ಸಂಘಪರಿವಾರೇತರ ರಾಜಕೀಯ ಶಕ್ತಿಗಳು ಕೂಡ, ತಮ್ಮ ರಾಜ್ಯಗಳಲ್ಲಿ ಕೇಂದ್ರ ಸರ್ಕಾರ ಇಂತಹ ಕ್ರಮಗಳನ್ನು ಕೈಗೊಳ್ಳಲು ಆರಂಭಿಸಿದಾಗ ಅವರಿಗೆ ಅಪಾಯದ ಅರಿವಾಯಿತು. ಭಾರತದ ಸಂವಿಧಾನದ ಆರನೇ ಶೆಡ್ಯೂಲ್ ಪ್ರಕಾರ, ಬುಡಕಟ್ಟು ಸಮುದಾಯಗಳಿಗೆ ಸ್ವಾಯತ್ತ ಜಿಲ್ಲಾ ಮಂಡಳಿಗಳನ್ನು ರಚಿಸಲಾಗಿದೆ. ಪ್ರಸ್ತುತ ಅಸ್ಸಾಂ, ಮೇಘಾಲಯ, ತ್ರಿಪುರಾ ಮತ್ತು ಮಿಜೋರಾಂ ಎಂಬ 4 ರಾಜ್ಯಗಳಲ್ಲಿ 10 ಸ್ವಾಯತ್ತ ಜಿಲ್ಲಾ ಮಂಡಳಿಗಳಿವೆ. ಸಾಮಾನ್ಯ ನಾಗರಿಕ ಕಾನೂನು ಬೇಕು ಎನ್ನುವವರು ಈ ಸಾಂವಿಧಾನಿಕ ಸ್ವಾಯತ್ತ ಜಿಲ್ಲಾ ಮಂಡಳಿಗಳನ್ನು ಬೇಡ ಎನ್ನುತ್ತಾರೆಯೇ? ಅದು ಸಂಭವಿಸಿದಲ್ಲಿ, ಬುಡಕಟ್ಟು ಜನಾಂಗದವರಿಗೆ ಅವರ ಭೂಮಿ ಮತ್ತು ಅದರ ಸಂಪನ್ಮೂಲಗಳು ಬೇಕು, ಆದರೆ, ಅವರ ಜೀವನಶೈಲಿ ಮತ್ತು ಆಹಾರಕ್ರಮವು ಸ್ವೀಕಾರಾರ್ಹವಲ್ಲ ಎಂಬ ಹಿಂದಿನ ದೃಷ್ಟಿ ಬದಲಾಯಿಸುತ್ತದೆಯೇ? ಆ ಮೂಲಕ ದಲಿತರು, ಆದಿವಾಸಿಗಳು, ಹಿಂದುಳಿದವರು ಪ್ರಾರ್ಥನಾ ಸ್ಥಳಗಳನ್ನು ಪ್ರವೇಶಿಸಿ ಪ್ರಾರ್ಥನೆ ಸಲ್ಲಿಸಲು ಮತ್ತು ಪೂಜೆ ಸಲ್ಲಿಸಲು ಅವಕಾಶ ಸಿಗುತ್ತದೆಯೇ?

> ಅಂದು, ಸಾಂವಿಧಾನಿಕ ಚರ್ಚೆಯ ಸಂದರ್ಭದಲ್ಲಿ ಸಂಘಪರಿವಾರ ತನ್ನ ದಿನಪತ್ರಿಕೆಯ ಮುಖಪುಟದಲ್ಲಿ ತನ್ನ ರಾಜಕೀಯ ನಿಲುವನ್ನು ಸ್ಪಷ್ಟಪಡಿಸಿದೆ. ಅದರಲ್ಲಿರುವ ಒಂದು ವಿಷಯ ಹೇಳಲೇ ಬೇಕಾಗಿದೆ. "ಸರ್ಕಾರ ರಚನೆಗೆ ಮಾದರಿಗಳನ್ನು ಹುಡುಕಿಕೊಂಡು ವಿದೇಶಕ್ಕೆ ಹೋಗುವ ಅಗತ್ಯವಿಲ್ಲ; ಈ ವಿಷಯದಲ್ಲಿ ನಮ್ಮದೇ ಆದ ಮಾರ್ಗದರ್ಶಿ ನಮ್ಮ ಮುಂದಿದೆ ಮತ್ತು ಅದು ಮನುಸ್ಮೃತಿಯಾಗಿದೆ." ಇದುವೇ ಅದರ ವಿಷಯವಾಗಿತ್ತು.



ಕೇರಳ ವಿಧಾನಸಭೆಯು ಆಗಸ್ಟ್ 8 ರಂದು ಏಕರೂಪ ನಾಗರಿಕ ಸಂಹಿತೆ ವಿರುದ್ಧ ನಿರ್ಣಯವನ್ನು ಅಂಗೀಕರಿಸಿತು. ಇದಕ್ಕೂ ಮುನ್ನ ನಿರ್ಣಯವನ್ನು ಪ್ರಸ್ತಾಪಿಸಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಭಾಷಣ ಮಾಡುತ್ತ ಸಂಘಪರಿವಾರದ ತಂತ್ರವನ್ನು ಬಿಚ್ಚಿಟ್ಟಿದ್ದಾರೆ.

ತಾರತಮ್ಯ ಕೊನೆಗೊಳ್ಳುತ್ತದೆಯೇ?

ಏಕರೂಪ ನಾಗರಿಕ ಸಂಹಿತೆಯ ಜಾರಿಯಿಂದ ಶಿಕ್ಷಣ ಮತ್ತು ಉದ್ಯೋಗದಲ್ಲಿ ಹಿಂದುಳಿದ ಆದಿವಾಸಿಗಳು, ದಲಿತರು, ಅಲ್ಪಸಂಖ್ಯಾತರು ಇವರ ಕಡಿಮೆ ಪ್ರಾತಿನಿಧ್ಯವನ್ನು ಪರಿಹರಿಸುತ್ತದೆಯೇ? ಉದ್ಯೋಗ, ಉಡುಗೆ ತೊಡುಗೆ, ಜೀವನ ಸಂಗಾತಿ ಹೆಸರಲ್ಲಿ ದಲಿತರ ಮೇಲೆ ಹಲ್ಲೆ ನಡೆಯುತ್ತಿಲ್ಲವೇ? ಅದರೊಂದಿಗೆ ಕಾಪ್ ಪಂಚಾಯಿತಿಗಳು ರದ್ದಾಗುತ್ತವೆಯೇ? ಉತ್ತರಾಧಿಕಾರ, ಪಾಲನೆ ಮತ್ತು ದತ್ತು ಸ್ವೀಕಾರಕ್ಕೆ ಸಂಬಂಧಿಸಿದ ಕಾನೂನುಗಳಿಂದ ಹಿಂದೂ ಮಹಿಳೆಯರು ಎದುರಿಸುತ್ತಿರುವ ಹಿಂಸೆಗೆ ಕೊನೆ ಸಿಗುವುದೇ? ಸಾಚಾರ್ ಸಮಿತಿ ಪ್ರಸ್ತಾಪಿಸಿರುವ ಸಮಾನ ಅವಕಾಶ ಆಯೋಗ ಇನ್ನೂ ಕಾರ್ಯರೂಪಕ್ಕೆ ಬರಬೇಕಿದೆ. ಮೀಸಲಾತಿ ಸೇರಿದಂತೆ ರಂಗನಾಥ ಮಿಶ್ರಾ ಆಯೋಗದ ಶಿಫಾರಸುಗಳು ಇನ್ನೂ ಜಾರಿಯಾಗಿಲ್ಲ. ಇವು ಸಮಾಜದ ವಿವಿಧ ವರ್ಗಗಳ ನಡುವೆ ಸಮಾನತೆಯನ್ನು ಖಚಿತಪಡಿಸಿಕೊಳ್ಳಲು ಸಹಾಯ ಮಾಡಿದ ಸಲಹೆಗಳು ಮತ್ತು ಶಿಫಾರಸುಗಳಾಗಿವೆ. ಆದರೆ, ಅವುಗಳಾವುದನ್ನೂ ಮಾಡಲು ಮುಂದಾಗದೆ ಒಂದೇ ಕಾನೂನು ಎಂಬ ಘೋಷಣೆಗಳೊಂದಿಗೆ ಬಂದಿದ್ದಾರೆ. ನಾಗರಿಕ ಸಂಹಿತೆಗಳನ್ನು ಏಕೀಕರಣಗೊಳಿಸಬೇಕು ಎಂದು ಹೇಳಿದವರು, ಮುಸ್ಲಿಂ ಸಮಾಜದಲ್ಲಿನ ವಿಚ್ಛೇದನವನ್ನು ಮಾತ್ರ ಅಪರಾಧವೆಂದು ನಾವು ನೆನಪಿಸಿಕೊಳ್ಳಬೇಕು. ಕಾನೂನುಗಳು ಎಲ್ಲರಿಗೂ ಸಮಾನವಾಗಿರಬೇಕು ಎಂದು ಹೇಳುವವರು ಎಲ್ಲರಿಗೂ ಸಮಾನವಾಗಿ ಪೌರತ್ವವನ್ನು ನೀಡಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಎಲ್ಲರಿಗೂ ಸಮಾನವಾಗಿ ಅನ್ವಯವಾಗುವಂತೆ ಕಾನೂನುಗಳನ್ನು ರಚಿಸಿದರೆ, ಗುಜರಾತ್ ಮತ್ತು ಮುಜಾಫರ್ ನಗರದಲ್ಲಿ ನಡೆದದು ಮತ್ತೆ ನಡೆಯುವುದಿಲ್ಲವೇ? ಕಂದಮಾಲ್, ಮಣಿಪುರ ಗಲಭೆಗಳು ಮತ್ತೆ ಬರಲು ಸಾಧ್ಯವಿಲ್ಲವೇ? ಭಾರತೀಯ ಸಮಾಜವನ್ನು ಬಾಧಿಸುವ ಇಂತಹ ಮೂಲಭೂತ ಸಮಸ್ಯೆಗಳನ್ನು ಪರಿಹರಿಸಲು, ಯಾವುದೇ ಪರಿಹಾರ ಅಥವಾ ರಚನಾತ್ಮಕ ಕ್ರಮಗಳನ್ನು ತೆಗೆದುಕೊಂಡಿಲ್ಲ. ಆದರೆ, ಅದೇ ಸಮಯದಲ್ಲಿ, ಸಂಘ ಪರಿವಾರಗಳು ಮತ್ತು ಉನ್ನತ ಮಟ್ಟದ ಅಧಿಕಾರಿಗಳು ಈಗ ಕೋಮು ವಿಭಜನೆಗಳನ್ನು ಸೃಷ್ಟಿಸಿ ಸಾಮಾನ್ಯ ನಾಗರಿಕ ಕಾನೂನನ್ನು ಪ್ರತಿಪಾದಿಸುವ ಮೂಲಕ ರಾಜಕೀಯ ಲಾಭ ಪಡೆಯಲು ಪ್ರಯತ್ನಿಸುತ್ತಿದ್ದಾರೆ.

2014ರ ಚುನಾವಣೆಯಲ್ಲಿ ಬಿಜೆಪಿ ನೀಡಿದ ಭರವಸೆಗಳು

ದೇಶದಲ್ಲಿ ಸಾರ್ವತ್ರಿಕ ಚುನಾವಣೆಗಳು ಸಮೀಪಿಸುತ್ತಿರುವಂತೆಯೇ ಜನರನ್ನು ಬಾಧಿಸುತ್ತಿರುವ ನೈಜ ಸಮಸ್ಯೆಗಳಿಂದ ಗಮನವನ್ನು ಬೇರೆಡೆ ಸೆಳೆಯಲು ಇಂತಹ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. 2014ರ ಲೋಕಸಭೆ ಚುನಾವಣೆ ವೇಳೆ ಬಿಜೆಪಿ ಭ್ರಷ್ಟಾಚಾರ, ಕಪ್ಪುಹಣ, ಬೆಲೆ ಏರಿಕೆ, ಮಹಿಳೆಯರ ರಕ್ಷಣೆಯಂತಹ ವಿಷಯಗಳನ್ನು ಪ್ರಸ್ತಾಪಿಸಿತ್ತು. ಆದರೆ 2019ರ ಚುನಾವಣೆಯ ವೇಳೆಯೂ ಬಿಜೆಪಿ ಇದನ್ನು ಪರಿಹರಿಸಲು ಏನು ಮಾಡಿದೆ ಎಂದು ಹೇಳುವ ಧೈರ್ಯ ಮಾಡಲಿಲ್ಲ. ಅವರು ಭಯೋತ್ಪಾದನೆ ಮತ್ತು ರಾಷ್ಟ್ರೀಯ ಭದ್ರತೆಯ ಬಗ್ಗೆ ಮಾತನಾಡಿದರು. 2024ರಲ್ಲೂ ಅವರು ಅದರ ಬಗ್ಗೆ ಮಾತನಾಡುವುದಿಲ್ಲ ಎಂದು ಎಲ್ಲರಿಗೂ ತಿಳಿದಿದೆ. ಏಕೆಂದರೆ, ಭಯೋತ್ಪಾದಕ ದಾಳಿಗಳು ಈಗಲೂ ನಡೆಯುತ್ತಿವೆ. ಈಗಲೂ ಭಾರತೀಯ ಸೈನಿಕರು ಹತ್ಯೆಯಾಗುತ್ತಿದ್ದಾರೆ. ಪುಲ್ವಾಮಾದಲ್ಲಿ ನಿಜವಾಗಿ ಏನಾಯಿತು ಎಂಬುದರ ಕುರಿತು ಹಲವಾರು ಆರೋಪಗಳಿವೆ. ಇದೆಲ್ಲವನ್ನೂ ಮರೆಮಾಚುವ ಅವರ ಮುಂದಿನ ಕಾರ್ಯಯೋಜನೆಯು ಸಾಮಾನ್ಯ ನಾಗರಿಕ ಕಾನೂನಿಗೆ ಸಂಬಂಧಿಸಿದಂತೆ ತರಲಾದ ಚರ್ಚೆಗಳು ಎಂದು ನಾವು ಅರ್ಥಮಾಡಿಕೊಳ್ಳಬೇಕು.

ಇದು ಜನರ ನಿಜ ಜೀವನದ ಸಮಸ್ಯೆಗಳನ್ನು ನಿರ್ಲಕ್ಷಿಸುವ ತಂತ್ರವಾಗಿದೆ. ಬಿಜೆಪಿ ಮತ್ತು ಅವರ ಸರ್ಕಾರಗಳು ಬಡತನ ನಿರ್ಮೂಲನೆ, ನಿರುದ್ಯೋಗ ಅಥವಾ ದಲಿತ ಸಮುದಾಯಗಳ ಮೇಲಿನ ನಿರಂತರ ದಾಳಿಗಳ ಬಗ್ಗೆ ಏನನ್ನೂ ಹೇಳುವುದಿಲ್ಲ. ಏಕರೂಪ ನಾಗರೀಕ ಸಂಹಿತೆ ಎಂಬುದು ದೇಶ ಎದುರಿಸುತ್ತಿರುವ ಇಂತಹ ತುರ್ತು ಸಮಸ್ಯೆಗಳಿಂದ ಜನರ ಗಮನವನ್ನು ಬೇರೆಡೆ ಸೆಳೆಯುವ ತಂತ್ರವಾಗಿದೆ. ಭಾರತವು ಅನೇಕ ಧರ್ಮಗಳು, ಸಂಸ್ಕೃತಿಗಳು, ಭಾಷೆಗಳು ಮತ್ತು ಜನಾಂಗಗಳ ಮಿಶ್ರಣವಾಗಿದೆ. ಭಾರತವು ನಮ್ಮ ಸಂವಿಧಾನದಲ್ಲಿ ಜಾತ್ಯತೀತ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ಒಕ್ಕೂಟ ರಚನೆಯೊಂದಿಗೆ ಎಲ್ಲರಿಗೂ ಅವಕಾಶ ಕಲ್ಪಿಸುತ್ತದೆ. ಆ ಅಂದಾಜುಗಳ ವಿರುದ್ಧ ಯಾವುದೇ ಕ್ರಮವು ಸಂವಿಧಾನ ವಿರೋಧಿಯಾಗಿದೆ. ಸಂಘಪರಿವಾರ ಅವುಗಳಿಗೆ ವಿರುದ್ಧವಾದ ನಡೆಗಳನ್ನು ನಡೆಸುತ್ತಿದೆ. ಆದ್ದರಿಂದ, ಈ ಹಂತದಲ್ಲಿ ಅಂತಹ ಎಲ್ಲಾ ಚಲನೆಗಳ ವಿರುದ್ಧ ಬಹಳ ಎಚ್ಚರಿಕೆಯ ಕಾವಲು ಅಗತ್ಯವಿದೆ. ಇಡೀ ಕೇರಳ ಈ ಜಾಗೃತಿಯನ್ನು ಅನುಸರಿಸುತ್ತಿದೆ ಎಂಬುದಕ್ಕೆ ಪುರಾವೆಯಾಗಿ ಈ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲು ಕೇರಳ ವಿಧಾನಸಭೆಯಲ್ಲಿ ವಿನಂತಿಸಲಾಗಿದೆ. ಭಾರತದಾದ್ಯಂತ ಪ್ರಜಾಸತ್ತಾತ್ಮಕ ಜಾತ್ಯತೀತವಾದಿಗಳು ಬಯಸುವುದು ಅದನ್ನೇ. ■



ದೇಶವನ್ನು ಪರಿಸರ ವಿನಾಶದತ್ತ ಒಯ್ಯುತ್ತಿರುವ ಸರಕಾರ

ಎರಡು ಅಪಾಯಕಾರಿ ಮಸೂದೆಗಳ ಅಂಗೀಕಾರ

ಪ್ರಕಾಶ್ ಕಾರತ್

ಜನರಾಗಲಿ ಅಥವಾ ಪರಿಸರವಾಗಲಿ, ಯಾವುದನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೆ ದೇಶದ ನೈಸರ್ಗಿಕ ಸಂಪನ್ಮೂಲಗಳನ್ನು ಖಾಸಗಿ ಬಂಡವಾಳದ ಶೋಷಣೆಗೆ ಮುಕ್ತವಾಗಿ ಬಿಟ್ಟುಬಿಡುವ ತನ್ನ ಸಂಕಲ್ಪಬದ್ಧ ನೀತಿಯನ್ನು ಮುಂದುವರಿಸಿರುವ ಮೋದಿ ಸರ್ಕಾರ, ಅದರ ಭಾಗವಾಗಿ ಅಪಾಯಕಾರಿ ಪರಿಣಾಮಗಳನ್ನು ಪರಿಗಣಿಸದೇ ಸಂಸತ್ತಿನಲ್ಲಿ ಎರಡು ಕಾನೂನುಗಳನ್ನು ತ್ವರಿತವಾಗಿ ಅಂಗೀಕರಿಸಿದೆ. ಒಂದು ಅರಣ್ಯ ಸಂರಕ್ಷಣೆ ಕಾನೂನು (ಎಫ್‌ಸಿಎ) ತಿದ್ದುಪಡಿ ಮಾಡುವ ಹಾಗೂ ಇನ್ನೊಂದು ಗಣಿಗಳು ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) (ಎಂಎಂಡಿಆರ್) ಕಾನೂನನ್ನು ತಿದ್ದುಪಡಿ ಮಾಡುವ ಉದ್ದೇಶದ್ದಾಗಿದೆ. 1980ರಲ್ಲಿ ಅಂಗೀಕಾರವಾದ ಎಫ್‌ಸಿಎ, ಅರಣ್ಯಗಳೆಂದು ಮೀಸಲಾದ ಭೂಮಿಯನ್ನು ಏಕಪಕ್ಷೀಯವಾಗಿ ಮೀಸಲಿನಿಂದ ಹೊರತರುವುದನ್ನು (ಡೀರಿಸರ್ವ್) ತಡೆಯುವ ಕಠಿಣ ನಿಯಮವನ್ನು ಒಳಗೊಂಡಿದೆ. ಕಾಡುಗಳ ಯದ್ವಾತದ್ವಾ ನಾಶವನ್ನು ತಡೆದು ಅವುಗಳನ್ನು ಉಳಿಸುವುದು ಈ ಕಾನೂನಿನ ಉದ್ದೇಶವಾಗಿದೆ. 2006ರಲ್ಲಿ ಪರಿಶಿಷ್ಟ ಪಂಗಡಗಳು ಮತ್ತು ಇತರ ಸಾಂಪ್ರದಾಯಿಕ ಅರಣ್ಯ ವಾಸಿಗಳು (ಅರಣ್ಯ ಹಕ್ಕುಗಳ ಮಾನ್ಯತೆ ಕಾನೂನು) ಮೂಲಕ ಕೆಲವು ವಿನಾಯಿತಿಗಳನ್ನು ಸೇರಿಸಲಾಯಿತು. ಅದು ಎಫ್‌ಆರ್‌ಎ ಎಂದು ಪ್ರಸಿದ್ಧವಾಗಿದೆ. ಬುಡಕಟ್ಟು ಸಮುದಾಯಗಳಿಗೆ ಭೂಮಿ ಹಕ್ಕು ನೀಡುವುದು ಹಾಗೂ ಅವರಿಗೆ ಮೂಲಸೌಕರ್ಯಗಳನ್ನು ಒದಗಿಸುವುದು ಇದರ ಉದ್ದೇಶವಾಗಿದೆ. ಅರಣ್ಯಗಳ ವ್ಯಾಖ್ಯಾನವನ್ನು ದುರ್ಬಲಗೊಳಿಸುವುದು ಮತ್ತು ರಸ್ತೆ, ರೈಲು ಮಾರ್ಗಗಳು, ಭದ್ರತಾ ಮೂಲಸೌಕರ್ಯಗಳು, ರಕ್ಷಣಾ ಶಿಬಿರಗಳು, ನಿಸ್ತಂತು ಸ್ಟೇಶನ್‌ಗಳು, ಸೇತುವೆಗಳು, ಕಂದಕಗಳು, ಪೈಪ್‌ಲೈನ್‌ಗಳು ಮತ್ತು ಮೃಗಾಲಯ, ಸಫಾರಿಗಳು ಹಾಗೂ ಪರಿಸರಪ್ರವಾಸೋದ್ಯಮ ಮುಂತಾದವುಗಳಿಗೆ ವಿನಾಯಿತಿ ನೀಡುವ ಹೆಸರಿನಲ್ಲಿ ಹಾಲಿ ಕಾನೂನಿನ ಇಡೀ ನಿಯಂತ್ರಣ ಸ್ವರೂಪವನ್ನು ದುರ್ಬಲಗೊಳಿಸುವುದು ಮೋದಿ ಸರ್ಕಾರದ ಮಸೂದೆಯ ಉದ್ದೇಶವಾಗಿದೆ. 1996ರಲ್ಲಿ ಸುಪ್ರೀಂಕೋರ್ಟ್ ತಿಳಿಸಿದಂತೆ ಅರಣ್ಯಗಳ ಪರಿಕಲ್ಪನೆಗಳನ್ನು ಈ ಮಸೂದೆ ಮರುವ್ಯಾಖ್ಯಾನಿಸುತ್ತದೆ. ಕಾಡು ಎಂದು ವ್ಯಾಖ್ಯಾನಿಸದ ಪ್ರದೇಶಗಳನ್ನು 'ಡೀಮ್ಡ್ ಫಾರೆಸ್ಟ್' (ಪರಿಭಾವಿತ ಅರಣ್ಯ) ಎಂದು ಪರಿಗಣಿಸಬೇಕಾಗುತ್ತದೆ. ಗ್ರಾಮ ಸಭೆಗಳು ಮತ್ತು ಇತರ ಉಸ್ತುವಾರಿ ಸಮಿತಿಗಳ ಕಡ್ಡಾಯ ಅನುಮತಿ ಪಡೆಯಬೇಕೆಂಬ ಅರಣ್ಯ ಹಕ್ಕುಗಳ ಕಾಯ್ದೆಯ ನಿಯಮಗಳನ್ನು ಈ ಮಸೂದೆ ಅತಿಕ್ರಮಿಸುತ್ತದೆ. ತಮ್ಮ ಜಮೀನು ವಶಪಡಿಸಿಕೊಳ್ಳುವ ಕ್ರಮದ ವಿರುದ್ಧ ಬುಡಕಟ್ಟು ಸಮುದಾಯಗಳನ್ನು ಇದು ಸಂಪೂರ್ಣವಾಗಿ ಅಸಹಾಯಕಗೊಳಿಸುತ್ತದೆ. ಒಂದೇ ಏಟಿನಲ್ಲಿ ಕಾಡುಗಳು ವಿನಾಶಕ್ಕೆ ಮುಕ್ತವಾಗುತ್ತವೆ ಮಾತ್ರವಲ್ಲದೆ ಅಲ್ಲಿರುವ ವಾಸಿಗಳು ನಿರಾಶ್ರಿತರಾಗುತ್ತಾರೆ. ಕಾನೂನುಗಳು ಮತ್ತು ಸುಪ್ರೀಂ ಕೋರ್ಟ್ ಆದೇಶಗಳು ನಿಗದಿಪಡಿಸಿದ ನಿಯಂತ್ರಣ ಮಿತಿಗಳನ್ನು ದಾಟಿ ಅರಣ್ಯ ಭೂಮಿಯನ್ನು ವಶಪಡಿಸಿಕೊಳ್ಳಲು ಹಾದಿ ಸುಗಮಗೊಳಿಸಲು ಈ ರೀತಿ ಮಾಡಲಾಗುತ್ತಿದೆ ಎನ್ನುವುದು ಸುಸ್ಪಷ್ಟವಾಗಿದೆ.

ಈ ದೂರಗಾಮಿ ಬದಲಾವಣೆ ಬೀರುವ ಬದಲಾವಣೆಗಳು ಮೋದಿ ಸರ್ಕಾರದ ಒಂದು ದಶಕದ ಆಡಳಿತದುದ್ದಕ್ಕೂ ಪರಿಸರ ನಿಯಂತ್ರಣ ಚೌಕಟ್ಟನ್ನು ನಿರಂತರವಾಗಿ ಕಳಚಿ ಹಾಕುತ್ತಿರುವ ಕ್ರಮದ ಮುಂದುವರಿಕೆಯಾಗಿದೆ. ತಿದ್ದುಪಡಿಗಳು ಅಥವಾ ಅಧಿಕೃತ ಆದೇಶಗಳ ರೂಪದಲ್ಲಿ ಮಾಡಿದ್ದ ಹಿಂದಿನ ಕ್ರಮಗಳಲ್ಲಿ ಪರಿಸರ ಪರಿಣಾಮ ಅಂದಾಜು ನಿಯಮಗಳು, ಕರಾವಳಿ ವಲಯ ನಿಯಮಗಳು ಇತ್ಯಾದಿಗಳನ್ನು ದುರ್ಬಲಗೊಳಿಸಿದ್ದು ಸೇರಿವೆ. ಅರಣ್ಯ ಸಂರಕ್ಷಣೆ ಕಾನೂನು ತಿದ್ದುಪಡಿಯೊಂದಿಗೆ ಜೈವಿಕ ವೈವಿಧ್ಯತೆ ಕಾನೂನನ್ನು ಕೂಡ ಸರ್ಕಾರ ಇದೇ ರೀತಿಯಲ್ಲಿ ಅಂಗೀಕರಿಸಿದೆ. ಈ ಬದಲಾವಣೆಗಳಿಂದಾಗಿ ಅಪರಾಧಗಳು ಈ ಕಾನೂನಿನನ್ವಯ ಕ್ರಿಮಿನಲ್‌ಯೇತರ ಅಪರಾಧಗಳಾಗುತ್ತವೆ (ಡಿಕ್ರಿಮಿನಲೈಸ್). 'ಪಾರಂಪರಿಕ ಜ್ಞಾನ ಸಂಹಿತೆ'ಯ ವ್ಯಾಖ್ಯಾನವನ್ನು ಮಸಕುಗೊಳಿಸುತ್ತದೆ. ಆಯುಷ್ ಪ್ರಾಕ್ಟೀಶನರ್‌ಗಳನ್ನು ಕಾನೂನಿನಿಂದ ಹೊರಗಿಡುತ್ತದೆ. ಇವೆಲ್ಲವೂ ಸಸ್ಯ ಸಂಕುಲವನ್ನು ಕಾರ್ಪೊರೇಟ್ ಹಿತಾಸಕ್ತಿಗಳು, ವಿಶೇಷವಾಗಿ ಔಷಧ ಕಂಪನಿಗಳು ಎಗ್ಗಿಲ್ಲದೆ ಶೋಷಿಸಲು ಬಾಗಿಲನ್ನು ತೆರೆಯಲಿದೆ.

ಗಣಿ, ಖನಿಜಗಳಿಗೆ ಆಪತ್ತು

ಪ್ರಸಕ್ತ ಮುಂಗಾರು ಅಧಿವೇಶನದಲ್ಲಿ ಅಂಗೀಕರಿಸಲಾದ ಎರಡನೇ ತಿದ್ದುಪಡಿ ಕಾನೂನು ಗಣಿಗಳು ಮತ್ತು ಖನಿಜಗಳಿಗೆ ಸಂಬಂಧಿಸಿದ ನಿಯಂತ್ರಣಗಳನ್ನು ದುರ್ಬಲಗೊಳಿಸುತ್ತದೆ ಹಾಗೂ ಬದಲಾಯಿಸುತ್ತದೆ. ಕಠಿಣ ಪರಿಸ್ಥಿತಿಗಳನ್ನು ಹೊರತು ಪಡಿಸಿ ಉಳಿದಂತೆ ಖನಿಜಗಳ ಶೋಧಕ್ಕೆ ಅಗೆಯುವ ಮತ್ತು ಡ್ರಿಲ್ಲಿಂಗ್‌ನಂಥ ವಿನಾಶಕಾರಿ ಕ್ರಮಗಳನ್ನು ಮೂಲ ಕಾನೂನು ನಿಷೇಧಿಸಿದೆ. ಆದರೆ, ತಿದ್ದುಪಡಿಯ ನಂತರ ಪ್ರಾಥಮಿಕ ಸಮೀಕ್ಷೆ ಪ್ರಕ್ರಿಯೆ ವೇಳೆ ಪಿಟ್, ಕಂದಕ ತೋಡುವುದು, ಡ್ರಿಲ್ಲಿಂಗ್ ಮತ್ತು ಉಪ-ಮೇಲ್ಮೈ ಉತ್ಖನನಗಳಿಗೆ ಅನುಮತಿ ನೀಡಲಾಗಿದೆ. ಅರಣ್ಯ ಪ್ರದೇಶಗಳಲ್ಲಿ ಈ ಸ್ವರೂಪದ ಶೋಧ ಯೋಜನೆಗಳನ್ನು ಆರಂಭಿಸಲು ಅಗತ್ಯವಾಗಿದ್ದ ಕಡ್ಡಾಯ ಅರಣ್ಯ ಅನುಮತಿ (ಫಾರೆಸ್ಟ್ ಕ್ಲಿಯರೆನ್ಸ್) ಇನ್ನು ಮುಂದೆ ಅಗತ್ಯವಿಲ್ಲ.

ಅರಣ್ಯಗಳು ಖನಿಜ ಸಂಪತ್ತಿನ ಖಜಾನೆ

ಎಲ್ಲರಿಗೂ ಸಾಮಾನ್ಯವಾಗಿ ತಿಳಿದಿರುವಂತೆ ದೇಶದ ದೊಡ್ಡ ಪ್ರಮಾಣದ ಖನಿಜ ಸಂಪತ್ತು ಅರಣ್ಯ ಪ್ರದೇಶಗಳಡಿ ಇದೆ. ಈಗ ಕಾನೂನುಗಳು ಬದಲಾಗಿರುವುದರಿಂದ ಯಾವುದೇ ಕಾರ್ಪೊರೇಟ್ ಸಂಸ್ಥೆಯೂ ಅರಣ್ಯ ಆವರಣ ಅಥವಾ ಅಲ್ಲಿ ವಾಸಿಸುವ ಜನರನ್ನು ಪರಿಗಣಿಸದೆ ಪೂರ್ಣ ಪ್ರಮಾಣದ ವಿನಾಶಕಾರಿ ಶೋಧವನ್ನು ಕೈಗೊಳ್ಳಬಹುದಾಗಿದೆ. ಈ ವಿಚಾರದಲ್ಲಿ ಎಫ್‌ಸಿಎ ಮತ್ತು ಎಂಎಂಡಿಆರ್ ಈ ಎರಡೂ ತಿದ್ದುಪಡಿಯಾದ ಕಾನೂನುಗಳ ಉದ್ದೇಶ ಸ್ಪಷ್ಟವಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ, ಕೇಂದ್ರ ಸರಕಾರದ ವ್ಯಾಪ್ತಿಗೆ ಬರುವ ಕೆಲವು ನಿರ್ದಿಷ್ಟ ಪ್ರಕರಣಗಳನ್ನು ಹೊರತುಪಡಿಸಿ ಉಳಿದಂತೆ ಗಣಿಗಾರಿಕೆ ಹಕ್ಕಿನ ಹರಾಜು ರಾಜ್ಯ ಸರಕಾರದ ವ್ಯಾಪ್ತಿಗೆ ಬರುತ್ತಿತ್ತು. ಆದರೆ ತಿದ್ದುಪಡಿಯಾದ ಕಾನೂನು ಲೀಥಿಯಂ, ಕೋಬಾಲ್ಟ್, ನಿಕೆಲ್, ಪೊಟ್ಯಾಶ್, ತವರ ಮತ್ತು ಪಾಸ್ಫೇಟ್‌ನಂಥ ನಿರ್ಣಾಯಕ ಖನಿಜಗಳ ಹರಾಜು ಹಕ್ಕನ್ನು ಕೇಂದ್ರೀಕರಿಸಿದೆ. ಇದಲ್ಲದೆ ಹೊಸ ಕಾನೂನು ಚಿನ್ನ, ಬೆಳ್ಳಿ, ತಾಮ್ರ ಇತ್ಯಾದಿ 29 ಖನಿಜಗಳ ವಿಶೇಷ ಶೋಧ ಲೈಸೆನ್ಸ್ ಅಧಿಕಾರವನ್ನು ಕೇಂದ್ರ ಸರಕಾರಕ್ಕೆ ನೀಡುತ್ತದೆ. ಲೀಥಿಯಂ, ಬೆರಿಲಿಯಂ, ನಿಯೋಬಿಯಂ, ಟೈಟಾನಿಯಂ, ಟಂಟಾಲಂ ಮತ್ತು ಝಿರ್ಕೋನಿಯಂ- ಹೀಗೆ ಈ ಆರು ಲೋಹಗಳನ್ನು 'ಅಣು ಖನಿಜ' (ಆಟೊಮಿಕ್ ಮಿನರಲ್ಸ್) ಪಟ್ಟಿಯಿಂದ ತೆಗೆದು ಹಾಕಲಾಗಿದೆ. ಹಾಗೆ ಮಾಡಿರುವುದರಿಂದ ಖಾಸಗಿಯವರೂ ಈ ಖನಿಜಗಳ ಗಣಿಗಾರಿಕೆ ಮಾಡಲು ಅವಕಾಶವನ್ನು ಮುಕ್ತಗೊಳಿಸಲಾಗಿದೆ. ಹೊಸ ಎಂಎಂಡಿಆರ್ ನಿಯಮಗಳು ಖನಿಜಗಳ ಸರಾಸರಿ ಮಾರಾಟ ಬೆಲೆ (ಎಎಸ್‌ಪಿ) ಲೆಕ್ಕಾಚಾರದಿಂದ ವಿವಿಧ ಸುಂಕಗಳು ಮತ್ತು ಲೆವಿಗಳನ್ನು ಹೊರತುಪಡಿಸುತ್ತವೆ ಕೂಡ. ಖಾಸಗಿ ಬಂಡವಾಳವನ್ನು ಆಕರ್ಷಿಸುವುದು ಮತ್ತು ನೈಸರ್ಗಿಕ ಸಂಪತ್ತನ್ನು ಲಾಭಕ್ಕಾಗಿ ಕೊಳ್ಳೆ ಹೊಡೆಯಲು ಅನುಕೂಲ ಮಾಡಿಕೊಡುವುದು ಈ ಎಲ್ಲ ಬದಲಾವಣೆಗಳ ಗುರಿಯಾಗಿದೆ. ಪ್ರಸ್ತುತ ಭಾರಿ ಬೇಡಿಕೆಯಿರುವ ಲೀಥಿಯಂನಂಥ ಲೋಹಗಳೂ ಅದರಲ್ಲಿ ಒಳಗೊಂಡಿವೆ.

ನಗ್ನ ಕಾರ್ಪೊರೇಟ್-ಪರ ನೀತಿ

ಮೋದಿ ಸರಕಾರದ ನಗ್ನ ಕಾರ್ಪೊರೇಟ್-ಪರ ಧೋರಣೆಯು ಎಲ್ಲ ನೀತಿಗಳಲ್ಲಿ ವ್ಯಾಪಿಸಿದೆ: ತೆರಿಗೆ ಕಡಿತ, ಲಾಭ ಹೆಚ್ಚಳಕ್ಕೆ ಅನುಕೂಲವಾಗುವಂತೆ ರಕ್ಷಣಾತ್ಮಕ ಕಾರ್ಮಿಕ ಕಾನೂನುಗಳನ್ನು ದುರ್ಬಲಗೊಳಿಸುವುದು, ಕಲ್ಲಿದ್ದಲು ಗಣಿಗಾರಿಕೆ, ಅಣು ಇಂಧನ ಮುಂತಾದ ನಿರ್ಣಾಯಕ ವಲಯಗಳನ್ನು ಮುಕ್ತಗೊಳಿಸಲು ಸಾರ್ವಜನಿಕ ವಲಯದ ಆಸ್ತಿಗಳು ಮತ್ತು ಮೂಲಸೌಕರ್ಯಗಳನ್ನು ಖಾಸಗಿಯವರಿಗೆ ವಹಿಸಿಕೊಡುವುದು ಮತ್ತು ರಕ್ಷಣಾ ವಲಯವನ್ನು ಕೂಡ ಖಾಸಗಿ ಬಂಡವಾಳಕ್ಕೆ -ದೇಶೀಯ ಮತ್ತು ವಿದೇಶಿ- ತೆರೆದಿಡುವುದು ಅವುಗಳಲ್ಲಿ ಸೇರಿವೆ. ಈ ವಿಶಾಲ ಚೌಕಟ್ಟಿನ ಹಿನ್ನೆಲೆಯಲ್ಲಿ ಪರಿಸರ ಕಾನೂನುಗಳು ಮತ್ತು ನಿಯಮಗಳಿಗೆ ಮಾಡಲಾದ ಬದಲಾವಣೆಗಳನ್ನು ನೋಡಬೇಕಾಗುತ್ತದೆ. ಪರಿಸರ ರಕ್ಷಣೆಗಾಗಿ ಕಾಳಜಿ ತೋರುವ ಹಾಗೂ ಹವಾಮಾನ ಬದಲಾವಣೆ ವಿರುದ್ಧ ಹೋರಾಡುವ ಬಗ್ಗೆ ಭಾರಿ ಬೊಗಳೆ ಬಿಡುವ ಸರಕಾರ, ವಾಸ್ತವದಲ್ಲಿ ಜನರ ಹಿತಗಳನ್ನು ಬಲಿಗೊಟ್ಟು ದೇಶವನ್ನು ಹೆಚ್ಚೆಚ್ಚು ಪರಿಸರ ವಿನಾಶದತ್ತ ಕೊಂಡೊಯ್ಯುತ್ತಿದೆ.

ಅನು: ವಿಶ್ವ

ಸಾರ್ವಜನಿಕ ವಲಯದ ಆಸ್ತಿಗಳು ಮತ್ತು ಮೂಲಸೌಕರ್ಯಗಳನ್ನು ಖಾಸಗಿಯವರಿಗೆ ವಹಿಸಿಕೊಡುವುದು ಮತ್ತು ರಕ್ಷಣಾ ವಲಯವನ್ನು ಕೂಡ ಖಾಸಗಿ ಬಂಡವಾಳಕ್ಕೆ -ದೇಶೀಯ ಮತ್ತು ವಿದೇಶಿ- ತೆರೆದಿಡುವುದು ಅವುಗಳಲ್ಲಿ ಸೇರಿವೆ. ಈ ವಿಶಾಲ ಚೌಕಟ್ಟಿನ ಹಿನ್ನೆಲೆಯಲ್ಲಿ ಪರಿಸರ ಕಾನೂನುಗಳು ಮತ್ತು ನಿಯಮಗಳಿಗೆ ಮಾಡಲಾದ ಬದಲಾವಣೆಗಳನ್ನು ನೋಡಬೇಕಾಗುತ್ತದೆ.

ವಿಶ್ವ ಆದಿವಾಸಿ ದಿನಾಚರಣೆ ಆದಿವಾಸಿಗಳ ಸುಸ್ಥಿರ ಅಭಿವೃದ್ಧಿ ಸಾಧ್ಯವೇ........

ಪುಟ 5 ರಿಂದ

ವಾಸಿಸುವ ಪ್ರದೇಶಗಳಿಂದ ಎತ್ತಂಗಡಿ ಮಾಡಲಾಗುತ್ತಿದೆ. ಪರಿಹಾರವೂ ಸಿಗುವುದಿಲ್ಲ. ಹೀಗಾಗಿ ನಿರ್ವಸತಿದಾರರಾಗಿ ವಿಪರೀತ ವಲಸೆ, ಅನ್ನ, ನೆರಳಿಗಾಗಿನ ಪರದಾಟದಲ್ಲಿ ಅತಂತ್ರರಾಗಿ ಅಲೆಯಬೇಕಾಗಿದೆ.

ಆದಿವಾಸಿಗಳಿಗೆ ಕಾಡಿನ ಉತ್ಪನ್ನಗಳ ಮೇಲೆ ಪಾರಂಪರಿಕ ಹಕ್ಕುಗಳಿವೆ ಎಂದು ಹೇಳಲಾಗುತ್ತಿದೆ. ಕಾನೂನುಗಳಿವೆ ನಿಜ. ಆದರೆ ಜೀವನೋಪಾಯಕ್ಕಾಗಿ ಕಾಡಿನ ಉತ್ಪನ್ನಗಳ ಸಂಗ್ರಹಕ್ಕೆ ಅನೇಕ ಅಡೆ ತಡೆಗಳನ್ನು ಹಾಕಿ ನಿರಾಕರಿಸಲಾಗುತ್ತಿದೆ. ಭೂಮಿಯನ್ನೂ ನೀಡುತ್ತಿಲ್ಲ. ಅಲ್ಲದೇ ದೌರ್ಜನ್ಯಗಳು, ಅತ್ಯಾಚಾರಗಳೂ ಸಾಮಾನ್ಯವಾಗುತ್ತಿದೆ. ಬಲಿಷ್ಠರ ಎದುರಿನಲ್ಲಿ ಕಾನೂನಿನ ರಕ್ಷಣೆಯೂ ಸಿಗುವುದಿಲ್ಲ.

ಈ ಹಿನ್ನೆಲೆಯಲ್ಲಿ ಆಗಸ್ಟ್ 9 ರ ವಿಶ್ವ ಆದಿವಾಸಿ ದಿನಾಚರಣೆಯನ್ನು ಆದಿವಾಸಿ ಹಕ್ಕುಗಳ ದಿನವನ್ನಾಗಿ, ಹಕ್ಕುಗಳ ರಕ್ಷಣೆ ಮತ್ತು ಹೆಚ್ಚಿನದ್ದನ್ನು ಪಡೆಯಲು ಹೋರಾಡುವ ಸಂಕಲ್ಪದ ದಿನವನ್ನಾಗಿ ನಮ್ಮ 'ಆದಿವಾಸಿ ಅಧಿಕಾರ್ ರಾಷ್ಟ್ರೀಯ ಮಂಚ್' (AARM) ಮತ್ತು ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯು ಆಗಸ್ಟ್ 9ರಂದು ದೇಶ್ಯಾದ್ಯಂತ ಆಚರಿಸಿದೆ. ೦

ಜನಶಕ್ತಿ ಕನ್ನಡ ವಾರಪತ್ರಿಕೆ

ಚಂದಾ ವಿವರ

ವಾರ್ಷಿಕ ಚಂದಾ : ರೂ.500.00
ದ್ವೈವಾರ್ಷಿಕ ಚಂದಾ : ರೂ.1000.00

ಚಂದಾದಾರರು ಸಂರ್ಕಿಸಿ :
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.40/5, 2ನೇ 'ಬಿ' ಮುಖ್ಯರಸ್ತೆ, 16ನೇ ಅಡ್ಡರಸ್ತೆ, ಸಂಪಂಗಿರಾಮನಗರ,
ಬೆಂಗಳೂರು 560027
ಕಛೇರಿ ದೂರವಾಣಿ:
080-22234369
ಫೋನ್:
9448578021, 9483966467





ಸ್ವಾತಂತ್ರ್ಯದ ಹೊಸ್ತಿಲಿನಲ್ಲೇ ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡುವ ದುಷ್ಟ ಸಂಚು

ಭಾರತ ಸ್ವಾತಂತ್ರ್ಯ ಗಳಿಸುವ ಹೊಸ್ತಿಲಿನಲ್ಲಿ ಪ್ರಜಾಸತ್ತಾತ್ಮಕ ಗಣರಾಜ್ಯ ಉದಯಿಸುವ ಸಂಭ್ರಮ. ಆ ಆಶಯಗಳು ನನಸಾಗುವ ಕಾತುರ! ಆದರೆ . . . . ಅವನ್ನೆಲ್ಲ ಬುಡಮೇಲು ಮಾಡುವ ದುಷ್ಟ ಸಂಚುಗಳ ದಳ್ಳುರಿ, ದಾವಾನಲ! ಸ್ವಾತಂತ್ರ್ಯ ಸಂಗ್ರಾಮವನ್ನು ದುರ್ಬಲಗೊಳಿಸಲು ಸತತವಾಗಿ ಯತ್ನಿಸುತ್ತಲೇ ಬಂದ ಮತೀಯವಾದಿಗಳ ಅಟ್ಟಹಾಸ. ದೇಶ ವಿಭಜನೆಯ ಬೆನ್ನಲ್ಲೇ ವ್ಯಾಪಕಗೊಂಡ ಕೋಮು ದಂಗೆಗಳಲ್ಲಿ ಲಕ್ಷ ಲಕ್ಷ ಜನರ ಹತ್ಯಾಕಾಂಡ. ಮುಂದೆ ಮಹಾತ್ಮನ ಕಗ್ಗೊಲೆ, ಪ್ರಜಾಸತ್ತಾತ್ಮಕ ಸಂವಿಧಾನದ ಬದಲು ಮನುಸ್ಮೃತಿ ಹೇರುವ ಹುನ್ನಾರ. ಆ ಹುನ್ನಾರಗಳನ್ನು ಜನ ಅಂದು ಸೋಲಿಸಿದರು, ಇಂದು. .?!

ಸ್ವಾತಂತ್ರ್ಯದ ಹೊಸ್ತಿಲಿನಲ್ಲಿ ನಡೆದ ಆ ಸಂಚುಗಳ ಅನಾವರಣ ಈ ಲೇಖನದಲ್ಲಿ, ಓದಿ.

ಜಿ.ಎಸ್. ನಾಗರಾಜ್

ನನಸಾದುದೋ ಶತಮಾನದ
ಶತ ಶತ ಮನದಾ ಕನಸಿಂದು
ಸ್ವಾತಂತ್ರ್ಯದ ಸಂಗ್ರಾಮದಿ
ಗತಿಸಿದಮಿತ ಹುತ ಆತ್ಮರ
ಬಲಿದಾನಂ ಫಲಿಸಿತೋ ಇಂದು
ಓ ! ಗೆಳೆಯರೆ ಐತನ್ನಿ
ಹೊಸ ಬಾಳಿಗೆ ಐತನ್ನಿ



ಭಾರತಕ್ಕೆ ಸ್ವಾತಂತ್ರ್ಯ ದೊರಕಿದಾ ದಿನ, 1947 ರ ಆಗಸ್ಟ್ 14 ರ ಮಧ್ಯ ರಾತ್ರಿಯಿಂದ ಆರಂಭವಾದ ಪ್ರಥಮ ಸ್ವಾತಂತ್ರ್ಯೋತ್ಸವದ ದಿನ ಇಡೀ ದೇಶದಲ್ಲಿ ಸಂತಸ, ಸಂಭ್ರಮ ನಗರ, ಪಟ್ಟಣಗಳ ಬೀದಿ ಬೀದಿಗಳಲ್ಲಿ, ಹಳ್ಳಿ ಹಳ್ಳಿಗಳಲ್ಲಿ ಉಕ್ಕಿ ಹರಿದಿತ್ತು. ಭಾರತದ ಇತಿಹಾಸದಲ್ಲಿ ಎಂದೂ ಕಾಣದ ಜನೋತ್ಸವವಾಗಿತ್ತು.

ಆದರೆ ಅದೇ ದಿನ, ಅದರ ಮುಂದಿನ ಕೆಲ ದಿನಗಳಲ್ಲಿ ಲಕ್ಷಾಂತರ ಜನರ ಆಸ್ತಿಪಾಸ್ತಿ ಜೀವನಾಧಾರಗಳನ್ನು ಕಸಿದುಕೊಂಡು ಓಡಿಸಲಾದ ಜನ ಪ್ರವಾಹ ರಭಸದಿಂದ ಹರಿದು ಬರುತ್ತಿತ್ತು. ಭಾರತದಿಂದ ಪಾಕೀಸ್ತಾನದೆಡೆಗೆ, ಪಾಕಿಸ್ಥಾನದಿಂದ ಭಾರತದೆಡೆಗೆ ಜೀವ ಕೈಯಲ್ಲಿ ಹಿಡಿದುಕೊಂಡು ಒಂದೂವರೆ ಕೋಟಿ ಜನರ ಈ ಪ್ರವಾಹದಲ್ಲಿ ಸುಮಾರು ಇಪ್ಪತ್ತು ಲಕ್ಷ ಜನರು ಸಾವಿಗೀಡಾಗಿದ್ದರು. ಅದರಲ್ಲಿ ಬಹಳ ಜನರನ್ನು ಕೈ ಕಾಲು ಕತ್ತರಿಸಿ, ತಿವಿದು ತಿವಿದು ಕ್ರೂರವಾಗಿ ಕೊಲೆ ಮಾಡಲಾಗಿತ್ತು. ಇಡೀ ಇಡೀ ಹಳ್ಳಿಗಳಿಗೇ ಬೆಂಕಿ ಹಚ್ಚಲಾಗಿತ್ತು. ಮಕ್ಕಳು, ವೃದ್ಧರೆನ್ನದೆ ಕೊಲೆ ಮಾಡಲ್ಪಟ್ಟರು. 75,000 ಕ್ಕೂ ಹೆಚ್ಚು ಯುವತಿಯರನ್ನು ಹೊತ್ತೊಯ್ದು ಅತ್ಯಾಚಾರ ಮಾಡಿದರು. ತಮ್ಮ ಮನೆಗಳಲ್ಲಿ ಬಂಧಿಸಿ ಜೀತದಾಳಾಗಿ, ಲೈಂಗಿಕ ಜೀತದಾಳಾಗಿ ಬಳಸಲ್ಪಟ್ಟರು. ಗಡಿಯ ಎರಡೂ ಕಡೆ, ಮುಸ್ಲಿಮರು, ಹಿಂದೂಗಳು, ಸಿಖ್ ಧರ್ಮದವರು ಈ ಕೊಲೆ, ಅತ್ಯಾಚಾರಗಳಿಗೆ ಈಡಾಗಿದ್ದರು.

ಒಬ್ಬ ಇತಿಹಾಸಕಾರರು ಹೇಳುವಂತೆ "ಗಡಿಯ ಎರಡೂ ಕಡೆ ಅಮಾನುಷ ಕೃತ್ಯಗಳು ಹಬ್ಬಿದವು".

ಸ್ವಾತಂತ್ರ್ಯದ ಫಲವಾಗಿ ಸ್ಥಾಪಿತವಾಗಲಿದ್ದ ಪ್ರಜಾಪ್ರಭುತ್ವ ಗಣರಾಜ್ಯವನ್ನು ಬುಡಮೇಲು ಮಾಡುವ ಘೋರ ಸಂಚು ನಡೆದಿತ್ತು. ಪೂರ್ವ ಪಂಜಾಬಿನಲ್ಲಿ ಸಿಖ್ಖರು, ಹಿಂದೂಗಳು ತಂಡೋಪತಂಡವಾಗಿ ಮುಸ್ಲಿಮರನ್ನು ಹೊರ ಬರುವಂತೆ ಪ್ರಚೋದಿಸುತ್ತಾ, ಕಣ್ಣಿಗೆ ಬಿದ್ದ ಮುಸ್ಲಿಮರನ್ನು ಕೊಚ್ಚಿ ಕೊಲ್ಲುತ್ತಾ ಹಳ್ಳಿ ಹಳ್ಳಿಗಳನ್ನು ಸುತ್ತಿದರು.

ಅಮೃತಸರ ಸುತ್ತ ಮುತ್ತಲಿನ ಮುಸ್ಲಿಮರು ಲಾಹೋರಿನತ್ತ ಪ್ರವಾಹದೋಪಾದಿಯಲ್ಲಿ ವಲಸೆ ಹೋದರು.

ಇದೇ ರೀತಿ ಲಾಹೋರ್ ಮತ್ತು ಪಶ್ಚಿಮ ಪಂಜಾಬಿನಲ್ಲಿ ಹಿಂದೂಗಳನ್ನು ಮನೆಗಳಿಂದ ಹೊರಹಾಕಿ ಹೊರದಬ್ಬಲಾಯಿತು, ಕೊಲ್ಲಲಾಯಿತು. ಪ್ರತಿ ತಿಂಗಳೂ ಈ ಕೃತ್ಯಗಳು ಮತ್ತಷ್ಟು ಕ್ರೂರ ಮತ್ತಷ್ಟು ರಕ್ತಸಿಕ್ತ.


ಸುಮಾರು ಐದು ಮೈಲು ಉದ್ದ ನಿರಾಶ್ರಿತರ ಪಯಣ ಬಸವನಹುಳುವಿನಂತೆ ನಿಧಾನವಾಗಿ ಸಾಗಿತ್ತು. ಮಹಿಳೆಯರು ಹಸುಗೂಸುಗಳನ್ನು ಕಂಕುಳಲ್ಲಿ ಎತ್ತಿಕೊಂಡು ತಲೆಯ ಮೇಲೆ ತಗಡಿನ ಟ್ರಂಕುಗಳನ್ನು ಹೊತ್ತುಕೊಂಡು ನೂರಾರು ಮೈಲಿ ನಡೆಯುತ್ತಿದ್ದರು."

ಇದು ದೆಹಲಿಗೂ ಹಬ್ಬಿತು. "ದೆಹಲಿಯ ಮುಸ್ಲಿಮರು ಭಯಭೀತರಾಗಿದ್ದರು. ಅವರ ಮನೆಗಳು ಮಸೀದಿಗಳು ಹೆಚ್ಚು ಹೆಚ್ಚು ಆಕ್ರಮಣಗಳಿಗೆ ಒಳಗಾಗಿದ್ದವು. 137 ಕ್ಕೂ ಹೆಚ್ಚು ಮಸೀದಿಗಳನ್ನು ನಾಶಪಡಿಸಲಾಯಿತು. ಬಲಾತ್ಕಾರದಿಂದ ಮುಸ್ಲಿಮರ ಮನೆಗಳನ್ನು ವಶಪಡಿಸಿ ಕೊಳ್ಳಲಾಯಿತು. ಇವರು ದೆಹಲಿಯ ಪುರಾನಾ ಕಿಲ್ಲಾಕ್ಕೆ ಪಲಾಯನ ಮಾಡಿದರು. ಅಲ್ಲಿ 60,000 ನಿರಾಶ್ರಿತರು ಗುಡಾರಗಳಲ್ಲಿ ಅಡಗಿ ಕುಳಿತರು."

1946 ರ ನವೆಂಬರ್‌ನಲ್ಲಿ ಕಲ್ಕತ್ತಾದಲ್ಲಿ ಮುಸ್ಲಿಮರ ಮಹಾ ಕಗ್ಗೊಲೆಗಳಿಂದ ಆರಂಭವಾದ ಈ ಸರಣಿ, ನೌಖಾಲಿಯಲ್ಲಿ ಹಿಂದೂಗಳ ಕಗ್ಗೊಲೆ, ಅದಕ್ಕೆ ಸೇಡಿನ ಕ್ರಮವಾಗಿ ಬಿಹಾರದಲ್ಲಿ ಮುಸ್ಲಿಮರ ಕೊಲೆ, ನಂತರ ದೆಹಲಿಗಳಿಗೆ ಹರಡಿತು. ಪಂಜಾಬಿನ ವಿಭಜನೆಯ ಗಡಿಗಳನ್ನು ಬ್ರಿಟಿಷರು ಘೋಷಿಸಿದ ಕೂಡಲೇ ಸ್ವಾತಂತ್ರ್ಯ ದಿನಾಚರಣೆಯ ಹಿಂದಿನ ದಿನದಿಂದ ಆರಂಭವಾಗಿ ನಂತರದ ವಾರಗಳಲ್ಲಿ ಭಾರತದ ಭಾಗ, ಪಾಕೀಸ್ತಾನದ ಭಾಗಗಳಲ್ಲಿ, ಅಮೃತಸರ, ಲಾಹೋರು ನಗರಗಳಲ್ಲಿ ತಾರಕಕ್ಕೇರಿತು. ಮೇಲಿರುವುದು ಅದರ ವಿವರಣೆಯೇ.

ಪಾಕ್ ಗಡಿಯಲ್ಲಿ ರಾಜ, ನವಾಬರ ಆಳ್ವಿಕೆಯಲ್ಲಿದ್ದ ಸಂಸ್ಥಾನಗಳಲ್ಲಿ ಈ ಕ್ರೌರ್ಯ ಎಲ್ಲ ಮೇರೆಗಳನ್ನು ಮೀರಿತು. ಕಪುರ್ತಲ ಸಂಸ್ಥಾನದಲ್ಲಿ ಶೇ.65ರಷ್ಟು ಮುಸ್ಲಿಮರಿದ್ದರು. ಅಲ್ಲಿಯ ರಾಜ ಮಹಾ ಲಂಪಟ. ಅವನು ಮುಸ್ಲಿಂ ಪ್ರಜೆಗಳಿಗೆ ಅಪಾಯ ಇದೆಯೆಂದೂ ತಾನು ಅವರನ್ನು ರಕ್ಷಿಸಲಾರೆನೆಂದೂ ಬೇಕಾದರೆ ತನ್ನ ಪಡೆ ಅವರಿಗೆ ರಕ್ಷಣೆ ನೀಡಿ ಗಡಿ ಮುಟ್ಟಿಸುತ್ತಾರೆಂದು ಪ್ರಕಟಿಸಿದ. ಅವರು ಗಡಿ ದಾಟಿದ ಕೂಡಲೇ ಈ ರಕ್ಷಣಾ ಪಡೆ ಮತ್ತು ಅಲ್ಲಿ ಕಾಯುತ್ತಿದ್ದ ಘಾತಕರು ಹಾಗೂ ಅವರ ಮೇಲೆ ಎರಗಿದರು. ಲೂಟಿ ಮಾಡಿದರು. ಎಷ್ಟೋ ಜನರನ್ನು ಕೊಂದರು. ಅದೇ ರೀತಿ ಪಾಟಿಯಾಲಾ, ಆಳ್ವಾರ್, ಭರತಪುರ, ಮೇವತ್, ಜಮ್ಮುಗಳಲ್ಲಿ ಮುಸ್ಲಿಮರನ್ನು ಓಡಿಸುವ, ಕೊಲ್ಲುವ, ಅವರ ಯುವತಿಯರನ್ನು ಅಪಹರಿಸಿ ಅತ್ಯಾಚಾರ ಮಾಡುವ ಅಮಾನುಷ ಕೃತ್ಯಗಳಿಗೆ ಎಣೆಯಿರಲಿಲ್ಲ.

ಅದೇ ರೀತಿ ನವಾಬನ ಆಳ್ವಿಕೆಯ ಬಹಾವಲ್ ಪುರ, ನಿಜಾಮನ ಆಳ್ವಿಕೆಯ ಹೈದರಾಬಾದ್ ಸಂಸ್ಥಾನಗಳಲ್ಲಿ, ಪಾಕ್ ಭಾಗವಾದ ಹಲವು ಪ್ರದೇಶಗಳಲ್ಲಿ ಇಂತಹ ಕ್ರೌರ್ಯ ➚



ಇದು ವಿಶ್ವದ ಇತಿಹಾಸದಲ್ಲಿಯೇ ಅತ್ಯಂತ ಬೃಹತ್ ಮಹಾವಲಸೆ ಎಂದು ಹೆಸರಾಗಿದೆ. ಈ ನೋವು, ಸಂಕಟಗಳನ್ನು ಎಷ್ಟೊಂದು ಪುಸ್ತಕಗಳು, ಕತೆ, ಕಾದಂಬರಿಗಳು, ನಾಟಕಗಳು, ಕವನಗಳು ತುಂಬಿಕೊಂಡಿವೆ ಲೆಕ್ಕವಿಲ್ಲ. ಸಾದತ್ ಹಸನ್ ಮಂಟೋರವರ ಕತೆಗಳು, ಭಿಷಮ್ ಸಾಹ್ನಿಯವರ ತಮಸ್, ಖುಷವಂತ್ ಸಿಂಗರ ಪಾಕೀಸ್ತಾನದ ಗಾಡಿ ಕಾದಂಬರಿಗಳು, ಅಮೃತಾ ಪ್ರೀತಂರವರ ಪಿಂಜರ್ ಕತೆ ಫೈಜ್‌ರವರ ಕವನಗಳು ಕೆಲ ಉದಾಹರಣೆಗಳು.

ಅಂದು ಲೈಫ್ ಪತ್ರಿಕೆಗೆ ಭಾರತದ ವರದಿಗಾರಳಾಗಿದ್ದ ಬರ್ಕ್‌ವೈಟ್‌ರವರ ಬರ್ಕ್‌ವೈಟ್ ಕಂಡ ಭಾರತ, ರಾಮಚಂದ್ರ ಗುಹಾರವರ ಬಾಪು ನಂತರದ ಭಾರತ ಮೊದಲ ಸಂಪುಟ, ಅಭಿನವದ ನ.ರವಿಕುಮಾರ್ ಸಂಪಾದಿಸಿದ ಹೇ ರಾಮ್ ಆ ಕ್ರೂರ ದಿನಗಳ ಸಂಕಟ, ಅವುಗಳ ಹಿಂದಿನ ಸಂಚಿನ ಚಿತ್ರಣ ಮತ್ತು ವಿಶ್ಲೇಷಣೆಗಳನ್ನು ನೀಡುತ್ತವೆ.

ಎಸಗಲಾಯಿತು.

ರಾಜ, ನವಾಬರು ಆರೆಸ್ಸೆಸ್ ಮುಸ್ಲಿಂ ಲೀಗ್

ಭಾರತ ಸ್ವತಂತ್ರವಾಗುವ ಸಮಯದಲ್ಲಿ ಭಾರತದಲ್ಲಿ 565 ರಷ್ಟು ಸಂಸ್ಥಾನಗಳು. ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್, ಬರೋಡಾ, ಕೊಲ್ಹಾಪುರ ರಾಜರುಗಳಂತಹ ಕೈ ಬೆರಳೆಣಿಯ ಕೆಲವರನ್ನು ಬಿಟ್ಟರೆ ಉಳಿದವರು ವೈಭವದ ಜೀವನ, ಭೋಗ ಲಾಲಸೆಗಳಲ್ಲಿ ಮುಳುಗಿ ಪ್ರಜೆಗಳ ಮೇಲೆ ವಿಪರೀತ ತೆರಿಗೆ ಹೇರಿಕೆ, ಅದರ ವಸೂಲಿಗೆ ದಬ್ಬಾಳಿಕೆ ನಡೆಸುತ್ತಾ ಪ್ರಜಾಪೀಡಕರಾಗಿದ್ದರು. ಸ್ವಾತಂತ್ರ್ಯ ಚಳುವಳಿಯ ಪ್ರಭಾವದಿಂದ ಅಲ್ಲಿಯ ಪ್ರಜೆಗಳು ಇವರ ವಿರುದ್ಧ ಚಳುವಳಿ ಹೂಡಲಾರಂಭಿಸಿದರು. ಮೈಸೂರು ಸಂಸ್ಥಾನದಲ್ಲಿಯೂ ಮೈಸೂರು ಚಲೋ ಚಳುವಳಿ ನಡೆದುದನ್ನು ನೆನಪಿಸಿಕೊಳ್ಳಬಹುದು. ಬ್ರಿಟಿಷರು ಭಾರತದಿಂದ ಕಾಲ್ತೆಗೆಯುವುದು ಹತ್ತಿರವಾಗುತ್ತಿದ್ದಂತೆ ಈ ಹಲವು ರಾಜ, ನವಾಬುರುಗಳಲ್ಲಿ ತಾವು ಸ್ವತಂತ್ರರಾಗಿ ಆಳುವ ದುರಾಸೆ ಮೂಡಿತು. ಈ ದುರಾಸೆಯ ರಾಜರುಗಳಿಗೆ ಆರೆಸ್ಸೆಸ್ ಆಧಾರವಾಗಿ ನಿಂತರೆ ನವಾಬರುಗಳಿಗೆ ಮುಸ್ಲಿಂ ಲೀಗ್.

> ಸ್ವಾತಂತ್ರ್ಯ ಚಳುವಳಿ ಬಿರುಸಾದಂತೆಲ್ಲ ಕೋಮು ದಂಗೆಗಳನ್ನು ಹಬ್ಬಿಸುವ ಈ ದುಷ್ಟ ವಿಧಾನ ಸ್ವಾತಂತ್ರ್ಯ ಹತ್ತಿರವಾದಂತೆಲ್ಲಾ ತಾರಕಕ್ಕೇರಿತು.

ಸ್ವಾತಂತ್ರ್ಯ ಬಂದ ಸಮಯದಲ್ಲಿ ಭಾರತದ ವರದಿಗಾರಳಾಗಿದ್ದ ಬರ್ಕ್‌ವೈಟ್ ಹೀಗೆ ವರದಿ ಮಾಡಿದ್ದಾರೆ: ರಾಜರುಗಳನ್ನು ಹಿಂದೂ ಪಾರಮ್ಯತೆಯ ಗತ ವೈಭವವನ್ನು ಪುನರುಜ್ಜೀವಿಸಲು ಮನುಸ್ಮೃತಿಯ, ಜಾತಿ ಬೇಧದ ವಿಷಮ ಸಮಾಜವನ್ನು ಮುಂದುವರೆಸಲು ಆರೆಸ್ಸೆಸ್ ಬಳಸಿತು. ಇಂತಹ ಹಲವು ರಾಜರುಗಳ ಅರಮನೆಗಳೇ ಆರೆಸ್ಸೆಸ್ ಚಟುವಟಿಕೆಗಳ ಕೇಂದ್ರಗಳಾದವು. ಈ ಸಂಸ್ಥಾನದ ಪ್ರಜೆಗಳ ಸಂಕಟಗಳಿಗೆ ಆ ಸಂಸ್ಥಾನದಲ್ಲಿದ್ದ ಮುಸ್ಲಿಮರೇ ಕಾರಣ ಎಂದು ಆರೆಸ್ಸೆಸ್ ಆ ಪ್ರಜೆಗಳಲ್ಲಿ ಬಿತ್ತಿತು. ಅವರನ್ನು ಮುಸ್ಲಿಮರ ಮೇಲೆ ಧಾಳಿ ಮಾಡಲು ಬಳಸಿತು. ಆ ಸಂಸ್ಥಾನಗಳಲ್ಲಿ ಬೆಳೆಯುತ್ತಿದ್ದ ಪ್ರಜಾ ಚಳುವಳಿಯನ್ನು ನಾಶ ಮಾಡಲಾಯಿತು.

ಆರೆಸ್ಸೆಸ್‌ಗೆ ರಾಜರುಗಳು ಮಾತ್ರವೇ ಅಲ್ಲದೆ ಭಾರತದ ಅತ್ಯಂತ ದೊಡ್ಡ ಉದ್ಯಮಿಗಳು ಹಣದ ಹೊಳೆಯನ್ನೇ ಹರಿಸುತ್ತಿದ್ದರು. ಬಿರ್ಲಾ ಸಾಮ್ರಾಜ್ಯದ ತಮ್ಮ ಗಾಂಧೀಜಿಯವರಿಗೆ ಆಸರೆಯಾಗಿದ್ದರೆ ಅಣ್ಣ ಆರೆಸ್ಸೆಸ್, ಹಿಂದೂ ಮಹಾ ಸಭಾಗಳನ್ನು ಅನ್ನು ಬೆಳೆಸುವುದರಲ್ಲಿ ನಿರತನಾಗಿದ್ದ. ಹಾಗೆಯೇ ದಾಲ್ಮಿಯಾ ಕುಟುಂಬ ಮುಸ್ಲಿಂ ಲೀಗ್, ಹಿಂದೂ ಮಹಾ ಸಭಾ ಎರಡಕ್ಕೂ ವಿಪುಲ ದೇಣಿಗೆ ನೀಡುತ್ತಿದ್ದ.

ಆರೆಸ್ಸೆಸ್ ಮತ್ತು ಹಿಂದೂ ಮಹಾ ಸಭಾಗಳು ದೆಹಲಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕಲಕತ್ತಾ, ಬಿಹಾರಗಳಲ್ಲಿ ಮುಸ್ಲಿಮರ ಕಗ್ಗೊಲೆ, ಅತ್ಯಾಚಾರ ಮತ್ತು ಅವರನ್ನು ಓಡಿಸುವುದರಲ್ಲಿ ಮುಖ್ಯ ಪಾತ್ರ ವಹಿಸಿದವು. ಈಗಿನ ಬಂಗ್ಲಾದೇಶ, ಪಾಕ್ ಪ್ರದೇಶಗಳಿಂದ, ಹಿಂದೂಗಳನ್ನು ಓಡಿಸುವುದರಲ್ಲಿ, ಕೊಲೆ ಮಾಡುವುದರಲ್ಲಿ ಮುಸ್ಲಿಂ ಲೀಗ್ ಪ್ರಧಾನ ಪಾತ್ರ ವಹಿಸಿತು.

ಎರಡೂ ಸಂಘಟನೆಗಳೂ ಒಂದು ಹಿಂದೂ ರಾಷ್ಟ್ರ, ಮತ್ತೊಂದು ಮುಸ್ಲಿಂ ರಾಷ್ಟ್ರ ಎಂಬ ಎರಡು ದೇಶ ಸಿದ್ಧಾಂತವನ್ನು 1930 ರಿಂದಲೇ ಪ್ರತಿಪಾದಿಸುತ್ತಿದ್ದವು. ಹಿಂದೂ ಮಹಾಸಭಾದ ನಾಯಕ ಸಾವರ್ಕರೇ ಈ ಸಿದ್ಧಾಂತವನ್ನು ಮೊತ್ತ ಮೊದಲು ವಿಸ್ತಾರವಾಗಿ ಮಂಡಿಸಿದವನು.

ಸ್ವಾತಂತ್ರ್ಯ ಚಳುವಳಿ ಹಬ್ಬಿದಂತೆಲ್ಲಾ ಅದನ್ನು ಒಡೆಯಲು ಎರಡೂ ಸಂಘಟನೆಗಳು ನಿರಂತರವಾಗಿ ಕೋಮು ಗಲಭೆ ಎಬ್ಬಿಸುತ್ತಾ ಬಂದಿದ್ದವು. ಇದಕ್ಕೆ ಒಡೆದಾಳುವ ನೀತಿಯನ್ನು ಅನುಸರಿಸುತ್ತಿದ್ದ ಬ್ರಿಟಿಷರ ಪ್ರೇರೇಪಣೆ, ಪ್ರೋತ್ಸಾಹ, ಆಡಳಿತದ ಯಥೇಚ್ಛ ಬೆಂಬಲ ಇತ್ತು. 1920 ರಲ್ಲಿ ಅಸಹಕಾರ ಚಳವಳಿ ಯಶಸ್ಸು ಕಂಡ ಕೂಡಲೇ ಹಿಂದೂ ಮುಸ್ಲಿಂ ದಂಗೆಗಳನ್ನು ಉತ್ತೇಜಿಸಲಾಯಿತು. 1922–27 ರ ನಡುವಣ ಅವಧಿಯಲ್ಲಿ 122 ಕೋಮು ದಂಗೆಗಳಲ್ಲಿ 450 ಜನ ಸಾವನ್ನಪ್ಪಿದರು. 5,000 ಕ್ಕೂ ಹೆಚ್ಚು ಜನ ತೀವ್ರವಾಗಿ ಗಾಯಗೊಂಡರು. 1926 ರ ಒಂದು ವರ್ಷದಲ್ಲಿಯೇ 21 ದಂಗೆಗಳು ನಡೆದವು.

ಕಾಂಗ್ರೆಸ್‌ನ ಹಿಂದೂ ನಾಯಕರಲ್ಲಿ ಹಲವರು ಹಿಂದೂ ಮಹಾಸಭಾವನ್ನು, ಮುಸ್ಲಿಂ ನಾಯಕರು ಮುಸ್ಲಿಂ ಲೀಗನ್ನು ಸೇರಿದರು.

ಇದೇ ಅವಧಿಯಲ್ಲಿ ಬೆಂಗಳೂರಿನ ಪ್ರಸಿದ್ಧ ಗಣೇಶ ಗಲಭೆ, ದಾವಣಗೆರೆ, ಧಾರವಾಡ ಮೊದಲಾದ ಕೆಲವು ಪ್ರದೇಶಗಳಲ್ಲಿ ಕೋಮುಗಲಭೆಗಳು ನಡೆದವು. ಕಾಂಗ್ರೆಸ್ ಒಳಗೇ ಇದ್ದ ಕೆಲವು ಹಿಂದೂ ಮಹಾ ಸಭಾದ ನಾಯಕರು ಈ ಗಲಭೆಗಳಲ್ಲಿ ಮುಖ್ಯ ಪಾತ್ರ ವಹಿಸಿದ್ದರು.

ಆ ಸಂದರ್ಭದಲ್ಲಿ ಕೋಮುವಾದದ ಸಮಸ್ಯೆಯ ಮೇಲೊಂದು ಪ್ರಣಾಳಿಕೆ ಮಂಡಿಸಿದ ಕಮ್ಯೂನಿಸ್ಟ್ ಪಕ್ಷ, ನೈಜ ಸ್ವಾತಂತ್ರ್ಯಕ್ಕಾಗಿ ನಡೆದ ದಿಟ್ಟ ಹೋರಾಟ ಉಕ್ಕೇರುತ್ತಿರುವ ಕೋಮು ದ್ವೇಷದ ಸಾಗರದಲ್ಲಿ ಮುಳುಗಿ ಹೋಗಿದೆ ಎಂದು ವಿಷಾದ ವ್ಯಕ್ತಪಡಿಸಿತು. ಕಮ್ಯೂನಿಸ್ಟರಾರೂ ಯಾವುದೇ ಕೋಮುವಾದೀ ಸಂಘಟನೆಗಳಲ್ಲಿ ಭಾಗವಹಿಸಬಾರದು ಎಂದು 1927 ರಲ್ಲಿಯೇ ನಿರ್ಣಾಯಕವಾಗಿ ಘೋಷಿಸಿತು.

ಹೀಗೆ ಸ್ವಾತಂತ್ರ್ಯ ಚಳುವಳಿ ಬಿರುಸಾದಂತೆಲ್ಲ ಕೋಮು ದಂಗೆಗಳನ್ನು ಹಬ್ಬಿಸುವ ಈ ದುಷ್ಟ ವಿಧಾನ ಸ್ವಾತಂತ್ರ್ಯ ಹತ್ತಿರವಾದಂತೆಲ್ಲಾ ತಾರಕಕ್ಕೇರಿತು. ಮುಸ್ಲಿಂ ಲೀಗ್ ಎರಡು ದೇಶಗಳ ಸ್ಥಾಪನೆಗಾಗಿ 1946 ರಲ್ಲಿ ಡೈರೆಕ್ಟ್ ಆಕ್ಷನ್ ಘೋಷಣೆ ನೀಡಿ ಹಿಂಸಾಚಾರಕ್ಕಿಳಿದರೆ ಆರೆಸ್ಸೆಸ್, ಹಿಂದೂ ಮಹಾಸಭೆಗಳು ಮುಸ್ಲಿಮರನ್ನು ಓಡಿಸುವುದಕ್ಕೆ ಈ ಅವಕಾಶ ಬಳಸಿಕೊಂಡವು.

ಭಾರತದಲ್ಲಿ ಸಮಾನತೆ, ಸೋದರತ್ವಗಳನ್ನು ಅಡಿಪಾಯವಾಗಿ ಪಡೆದ ಸಂವಿಧಾನದ ಅಡಿಯಲ್ಲಿ ಪ್ರಜಾಪ್ರಭುತ್ವ ಗಣರಾಜ್ಯ ಸ್ಥಾಪನೆಯಾಗುವುದನ್ನು ತಪ್ಪಿಸಿ ಜಾತಿ ಮತ ಬೇಧದ, ಮಹಿಳಾ ಕೀಳ್ತನವನ್ನು ಪ್ರತಿಪಾದಿಸುವ ಮನುಸ್ಮೃತಿಯನ್ನೇ ಸಂವಿಧಾನಗುಳ್ಳ ಅಸಮಾನತೆಯ ದೇಶವನ್ನು ಸ್ಥಾಪಿಸಲು ಪ್ರಯತ್ನಿಸಿತು.

ಎರಡೂ ಕಡೆ ಹಬ್ಬಿದ ಕೋಮುದಂಗೆ, ದ್ವೇಷಗಳ ವಿಷಜ್ವಾಲೆಯಿಂದ ಉತ್ತೇಜಿತರಾದ ಆರೆಸ್ಸೆಸ್, ಹಿಂದೂಮಹಾಸಭಾಗಳು ಈ ಕೋಮುದಂಗೆಗಳನ್ನು ದೇಶಾದ್ಯಂತ ವಿಸ್ತರಿಸಲು ಸಂಚುಗಳನ್ನು ರೂಪಿಸಿದವು.

ಕೋಮುದಂಗೆಗಳಲ್ಲಿ ಲಕ್ಷಾಂತರ ಜನರ ಹತ್ಯೆ, ಅತ್ಯಾಚಾರಗಳಾಗುತ್ತಿರುವಾಗಲೇ ಗಾಂಧೀಜಿಯ ಹತ್ಯೆ ಮಾಡಲು ಸಂಚು ರೂಪಿಸಿ ಸ್ವಾತಂತ್ರ್ಯ ಲಭಿಸಿದ ಐದೇ ತಿಂಗಳಲ್ಲಿ ಅವರನ್ನು ಹತ್ಯೆಗೈಯುವುದಕ್ಕೆ ಸಹಕಾರಿಯಾದವು. ಗಾಂಧೀಹತ್ಯೆಯ ನಂತರ ದೆಹಲಿ, ಮುಂಬಯಿ, ಕಲಕತ್ತಾ, ಲಾಹೋರುಗಳಂತಹ ಮುಖ್ಯ ನಗರಗಳಲ್ಲಿ ಮತ್ತು ಇತರ ಹಲವು ಪ್ರದೇಶಗಳಲ್ಲಿ ಸಿಹಿ ಹಂಚಲಾಯಿತು ಎಂಬುದು ಅವರ ಸಂಚಿನ ವ್ಯಾಪಕತೆಯನ್ನು ಬಿಂಬಿಸುತ್ತದೆ.

1949 ರ ನವೆಂಬರ್ 26 ರಂದು ಅಂಗೀಕಾರಗೊಂಡ ಭಾರತದ ಸಂವಿಧಾನವನ್ನು ಸಾರಾ ಸಗಟಾಗಿ ತಿರಸ್ಕರಿಸಿ ಮನುಸ್ಮೃತಿಯೇ ಸಂವಿಧಾನದ ಆಧಾರವಾಗಿರಬೇಕೆಂದು ಆರೆಸ್ಸೆಸ್ ಪ್ರತಿಪಾದಿಸಿತು.

ಅಷ್ಟೇ ಅಲ್ಲದೆ 1950 ರ ಜನವರಿ 26 ರಂದು ಕಾರ್ಯರೂಪಕ್ಕೆ ಬರಲಿರುವ ಸಂವಿಧಾನ ಮತ್ತು ಗಣರಾಜ್ಯವನ್ನು ತಪ್ಪಿಸಲೆಂದು 1949 ರ ಡಿಸೆಂಬರ್ 22–23 ರ ಮಧ್ಯ ರಾತ್ರಿ ಅಯೋಧ್ಯೆಯ ಬಾಬರಿ ಮಸೀದಿಯಲ್ಲಿ ರಾಮ, ಲಕ್ಷ್ಮಣ, ಸೀತೆಯರ ಮೂರ್ತಿಗಳನ್ನು ಕಳ್ಳತನದಿಂದ ಇರಿಸುವ ಸಂಚು ಮಾಡಿತು.


ಗಾಂಧೀಜಿ ಹತ್ಯೆ, ಬಾಬರಿ ಮಸೀದಿಯ ಘಟನೆಗಳನ್ನು ಬಳಸಿ ಕೇವಲ ಗಡಿ ಭಾಗಕ್ಕೆ ಸೀಮಿತವಾಗಿದ್ದ ಕೋಮುದಂಗೆಗಳನ್ನು ಭಾರತದ ತುಂಬೆಲ್ಲ ಹರಡುವ ದುಷ್ಟ ಯೋಜನೆ ಅದು.

46–47 ರಲ್ಲಿ ಕೋಟಿ ಜನರನ್ನು ಒಳಗೊಂಡ ಕೋಮುದಂಗೆಗಳು, 48 ರ ಆರಂಭದಲ್ಲಿಯೇ ಗಾಂಧೀಜಿ ಹತ್ಯೆ, 49ರಲ್ಲಿ ಬಾಬರಿ ಮಸೀದಿಯಲ್ಲಿ ರಾಮನ ಮೂರ್ತಿ.

ಈ ಮೂರು ಘಟನೆಗಳು ಒಂದರ ಮೇಲೊಂದರಂತೆ ಘಟಿಸಿದ್ದು ಮತ್ತು ಅದು ಎಷ್ಟು ವ್ಯಾಪಕವಾಗಿ ಜನರನ್ನು ಕೋಮು ದಂಗೆಗಳಿಗೆ ಸೆಳೆಯುವ ಸಾಧ್ಯತೆ ಇತ್ತು ಎಂಬುದನ್ನು ಗಂಭೀರವಾಗಿ ಯೋಚಿಸಿ ನೋಡಿ. ಮನುಸ್ಮೃತಿ ಹೇರುವ, ಸಮಾನತೆಯನ್ನು ಅಳಿಸಿ ಹಾಕುವ ಸಂಚಿನ ಅಗಾಧತೆ ಮನಸ್ಸಿಗೆ ತಾಕುತ್ತದೆ.

ಆದರೆ ಭಾರತದ ಜನತೆ, ಸ್ವಾತಂತ್ರ್ಯ ಚಳುವಳಿಯ ಸಮಾನತೆ, ಪ್ರಜಾಪ್ರಭುತ್ವದ ಆಶಯಗಳಿಂದ ಉದ್ದೀಪ್ತರಾಗಿದ್ದ ಜನ ಸಾಮಾನ್ಯರ ವಿವೇಕ ಮತ್ತು ಎಚ್ಚರದ ಮುಂದೆ ಈ ಮಹಾ ಸಂಚು ಫಲ ನೀಡಲಿಲ್ಲ ಎಂಬುದು ಭಾರತದ ಇತಿಹಾಸದ ಒಂದು ಮಹಾ ಅಧ್ಯಾಯ.

ಈಗ ಸ್ವಾತಂತ್ರ್ಯ ಬಂದ 77 ವರ್ಷಗಳ ತರುವಾಯ ನಮ್ಮ ದೇಶದ ಸಮಾನತೆ ಆಧಾರಿತವಾದ ಸ್ವಾತಂತ್ರ್ಯವನ್ನು, ಸಂವಿಧಾನವನ್ನು, ಪ್ರಜಾಪ್ರಭುತ್ವ ಗಣರಾಜ್ಯವನ್ನು ಅದೇ ಹಳೆಯ ಸಂಚಿನ ಹೊಸ ಅವತರಣಿಕೆ ಬುಡಮೇಲು ಮಾಡಲು ನಡೆಸುತ್ತಿರುವ ಪ್ರಯತ್ನವನ್ನು ವಿಫಲಗೊಳಿಸಲು ಇಡೀ ಜನತೆ, ದುಡಿಯುವ ವರ್ಗ ಧೀರ ಪ್ರತಿಜ್ಞೆ ಕೈಗೊಳ್ಳಬೇಕು.



ಕಥೆ

ಸಭ್ಯಸತ್ಕಾರ

ಗಲಭೆಕೋರರು ರೈಲನ್ನು ನಿಲ್ಲಿಸಿದರು. ಬೇರೆ ಮತಕ್ಕೆ ಸೇರಿದವರನ್ನು ಸರಿಯಾಗಿ ಗುರುತಿಸಿ ಕೊಚ್ಚಿಹಾಕಿದರು. ಇದು ಮುಗಿದ ನಂತರ, ಉಳಿದ ಪ್ರಯಾಣಿಕರಿಗೆ ಹಾಲು, ಹಣ್ಣು, ಸಿಹಿ ತಿಂಡಿಗಳನ್ನು ಕೊಟ್ಟು ಸತ್ಕರಿಸಿದರು. ರೈಲು ಹೊರಡಲು ತಯಾರಾದಾಗ, ಕೊಲೆಗಡುಕರ ನಾಯಕ ಒಂದು ಪುಟ್ಟ ಬೀಳ್ಕೊಡುಗೆ ಭಾಷಣ ಮಾಡಿದ.

"ಪ್ರೀತಿಯ ಸಹೋದರ, ಸಹೋದರಿಯರೇ, ನಿಮ್ಮ ರೈಲು ಬಂದು ತಲುಪುವ ಸಮಯದ ಬಗ್ಗೆ ನಮಗೆ ಖಾತ್ರಿ ಇರಲಿಲ್ಲವಾದ್ದರಿಂದ, ಇದ್ದುದರಲ್ಲೇ ತಮ್ಮನ್ನು ತೃಪ್ತಿಪಡಿಸಬೇಕಾಯಿತಲ್ಲ ಎಂದು ವಿಷಾದಿಸುತ್ತಿದ್ದೇವೆ. ಅದ್ದೂರಿಯಾದ ಸತ್ಕಾರ ಮಾಡಬೇಕೆಂಬುದು ನಮ್ಮೆಲ್ಲರ ಆಶಯವಾಗಿತ್ತು."

–ಸಾದತ್ ಹಸನ್ ಮಾಂಟೋ

ಕಥೆ

ಸಕ್ಷಮ ಉಸ್ತುವಾರಿ

ಒಬ್ಬ ತನ್ನ ಸ್ನೇಹಿತನನ್ನು 'ಈತ ನಮ್ಮವನೇ' ಎಂದು ಪರಿಚಯಿಸಿ, ಮಿಲಿಟರಿ ರಕ್ಷಣೆಯಲ್ಲಿ ಸುರಕ್ಷಿತ ಸ್ಥಳಕ್ಕೆ ಹೊರಟಿದ್ದ ಜನರ ಗುಂಪಿನಲ್ಲಿ ತನ್ನ ಜೊತೆ ಸ್ನೇಹಿತನನ್ನೂ ಸೇರಿಸಿಕೊಳ್ಳುವಂತೆ ಮಿಲಿಟರಿಯವರ ಮನ ಒಲಿಸುವಲ್ಲಿ ಸಫಲನಾದ.

ಒಂದಷ್ಟು ದೂರ ಪ್ರಯಾಣಿಸಿದ ನಂತರ, ಯಾವುದನ್ನು ತನ್ನ ಮತವೆಂದು ಹೇಳಿದ್ದನೋ ಆ ಮತಕ್ಕೆ ತಕ್ಕಂತಹ ಹೆಸರನ್ನು ಇಟ್ಟುಕೊಂಡಿದ್ದ ಆ ಸ್ನೇಹಿತ 'ಈ ಪ್ರದೇಶದಲ್ಲಿ ಏನಾದರೂ ಅವಘಡಗಳು ಸಂಭವಿಸಿವೆ' ಎಂದು ಜೊತೆಗಿದ್ದ ಸೈನಿಕರನ್ನು ಕೇಳಿದ. 'ಅಂತಹುದೇನೂ ಇಲ್ಲ, ಒಂದೆರಡು ದಿನಗಳ ಹಿಂದೆ ಹತ್ತಿರದಲ್ಲೇ ಇರುವ ವಸತಿ ಪ್ರದೇಶದಲ್ಲಿ ಮತಗೆಟ್ಟವರಿಗೆ ಹುಟ್ಟಿದವನೊಬ್ಬನನ್ನು ಗುಂಡು ಹೊಡೆದು ಕೊಲ್ಲಲಾಗಿದೆಯಷ್ಟೆ' ಎಂದು ಸೈನಿಕರು ಹೇಳಿದರು.

ಭಯಗ್ರಸ್ತನಾದ ಆತ 'ಮತ್ತೇನಾದರೂ?' ಎಂದು ಕೇಳಿದ.

'ಏನೂ ಇಲ್ಲ, ಮೂವರು ಹುಚ್ಚು ಲೌಡಿಯರ ಹೆಣಗಳು ಹತ್ತಿರದಲ್ಲೇ ಇರುವ ಕಾಲುವೆಯಲ್ಲಿ ತೇಲುತ್ತಿದ್ದವಷ್ಟೆ.

ಸೈನಿಕರ ನ್ಯಾಯಪರತೆ ತಿಳಿದರೆ, ಹೆದರಿ ಕಂಗಾಲಾಗುತ್ತಿರುವ ತನ್ನ ಸ್ನೇಹಿತನಿಗೆ ಒಂದಿಷ್ಟು ಧೈರ್ಯ ಬಂದೀತು ಎಂದೆಣಿಸಿ, ಇವನನ್ನು ಜೊತೆಗೆ ಕರೆತಂದ ವ್ಯಕ್ತಿ' ಇಷ್ಟೆಲ್ಲ ಆದರೂ ಮಿಲಿಟರಿಯವರು ಸುಮ್ಮನಿದ್ದರೆ?' ಎಂದು ಸೈನಿಕರನ್ನು ಕೇಳಿದ.

'ಛೇ, ಛೇ ಎಲ್ಲ ಅವರ ಸಕ್ಷಮ ಉಸ್ತುವಾರಿಯಲ್ಲೇ ನಡೆದಿರುವುದು' ಎಂದರು ಸೈನಿಕರು.

–ಸಾದತ್ ಹಸನ್ ಮಾಂಟೋ

'ನ್ಯೂಸ್‌ಕ್ಲಿಕ್' ವಿರುದ್ಧ 'ಗುರಿಯಿಟ್ಟು' ಅಭಿಯಾನ ನಡೆಸುತ್ತಿರುವುದು ಕಳವಳಕಾರಿ – ಆಧಾರರಹಿತ ಆರೋಪಗಳ ಬಗ್ಗೆ ಪತ್ರಕರ್ತರ ಸಂಘಟನೆಗಳ ಖೇದ

'ನ್ಯೂಸ್‌ಕ್ಲಿಕ್' ವೆಬ್ ಸುದ್ದಿತಾಣ ಮತ್ತು ಅದರ ಸಂಸ್ಥಾಪಕರ ವಿರುದ್ಧ 'ಗುರಿಯಿಟ್ಟು' ಅಭಿಯಾನ ನಡೆಯುತ್ತಿದೆ ಎಂದು ವಿವಿಧ ಪತ್ರಕರ್ತರ ಸಂಘಟನೆಗಳು ಆಳವಾದ ಕಳವಳ' ವ್ಯಕ್ತಪಡಿಸಿವೆ. ಕೆಲವು ಸಂಸದ್ ಸದಸ್ಯರು ಸೇರಿದಂತೆ ಹಿರಿಯ ರಾಜಕೀಯ ವ್ಯಕ್ತಿಗಳು ಇತ್ತೀಚಿನ ಆರೋಪಗಳನ್ನು ಮಾಡಿದ್ದು, ನ್ಯೂಸ್ ಕ್ಲಿಕ್ ನೆರೆಯ ದೇಶಕ್ಕೆ ಮುಖವಾಣಿಯಾಗಿ ಕಾರ್ಯನಿರ್ವಹಿಸುತ್ತದೆ ಎಂದು ಸೂಚಿಸುವುದು 'ಅಕಾರಣ ಮತ್ತು ಖಂಡನೀಯ' ಎಂದು ಒಂದು ಜಂಟಿ ಹೇಳಿಕೆಯಲ್ಲಿ ಅವು ತಿಳಿಸಿವೆ.

ಇತರ ಹಲವು ಮಾಧ್ಯಮಗಳಂತೆ ನ್ಯೂಸ್ ಕ್ಲಿಕ್ ಕೂಡ ಸರ್ಕಾರದ ಕ್ರಮವನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸುತ್ತದೆ. ಅಷ್ಟಕ್ಕೇ ಅದು ದೇಶಪ್ರೇಮವಿಲ್ಲದ್ದು ಅಥವಾ ಯಾವುದೇ ವಿದೇಶಿ ರಾಷ್ಟ್ರದ ಸಾಧನವಾಗುವುದಿಲ್ಲ ಎಂದು ಪ್ರೆಸ್ ಕ್ಲಬ್ ಆಫ್ ಇಂಡಿಯಾದ ಅಧ್ಯಕ್ಷ ಉಮಾಕಾಂತ್ ಲಖೇರಾ, ದೆಹಲಿ ಪತ್ರಕರ್ತರ ಒಕ್ಕೂಟದ ಅಧ್ಯಕ್ಷೆ ಸುಜಾತಾ ಮಧೋಕ್, ಭಾರತೀಯ ಮಹಿಳಾ ಪತ್ರಿಕಾ ದಳದ (ಐಡಬ್ಲ್ಯೂಪಿಸಿ) ಅಧ್ಯಕ್ಷೆ ಶೋಭನಾ ಜೈನ್ ಮತ್ತು ಪತ್ರಿಕಾ ಸಂಘದ ಅಧ್ಯಕ್ಷ ಸಿಕೆ ನಾಯಕ್ ಈ ಜಂಟಿ ಹೇಳಿಕೆಯಲ್ಲಿ ಹೇಳಿದ್ದಾರೆ.

ನ್ಯೂಸ್‌ಕ್ಲಿಕ್‌ಗೆ ನಿಧಿಯ ಮೂಲಗಳು ಪರಿಶೀಲನೆಯಲ್ಲಿದ್ದರೆ, ಅದೇ ಪಾರದರ್ಶಕತೆ ಸರಕಾರದ ಪರವಾಗಿರುವ ಇತರ ಹಲವಾರು ಪೋರ್ಟಲ್‌ಗಳು ಮತ್ತು ಅವರ ಬೆಂಬಲಿಗರು ಮತ್ತು ಸಹಾಯಕರಿಗೂ ಅನ್ವಯವಾಗಬೇಕು ಎಂದು ಅವರು ಹೇಳಿದ್ದಾರೆ. ಇಲ್ಲವಾದರೆ ಇದನ್ನು 'ಬೇಟೆಯಾಟ' ಎಂದೇ ಹೇಳಬೇಕಾಗುತ್ತದೆ



ಇದರಲ್ಲಿ ಸಮಗ್ರತೆಯುಳ್ಳ ಮತ್ತು ಸಾರವುಳ್ಳ ವ್ಯಕ್ತಿಗಳು ಲೇಖನಗಳನ್ನು ಬರೆಯುತ್ತಾರೆ. ಇತರ ದೇಶಗಳ ನೀತಿಗಳ ಬಗ್ಗೆ ವಿಮರ್ಶಾತ್ಮಕ ಮತ್ತು ಮೆಚ್ಚುಗೆ ವ್ಯಕ್ತಪಡಿಸುವ ಲೇಖನಗಳಿದ್ದರೆ, ಅದನ್ನು ಆ ದೇಶಗಳ ಪರವಾದ ವಕಾಲತ್ತು ಎಂದು ತಪ್ಪಾಗಿ ಗ್ರಹಿಸಲಾಗದು ಅಥವಾ ಅವಕ್ಕೆ ರಾಷ್ಟ್ರವಿರೋಧಿ ಅಥವಾ ದೇಶದ್ರೋಹಿ ಎಂದು ಹಣೆಪಟ್ಟಿ ಹಚ್ಚಲಾಗದು ಎಂದು ಹೇಳಿಕೆ ಅಭಿಪ್ರಾಯ ವ್ಯಕ್ತಪಡಿಸಿದೆ.

ಮಾಧ್ಯಮ ಸಂಸ್ಥೆಗಳು ಭಾರತೀಯ ಕಾನೂನಿನ ಮಿತಿಯಲ್ಲಿ ಕಾರ್ಯನಿರ್ವಹಿಸುತ್ತವೆ ಮತ್ತು ಸರ್ಕಾರಿ ಸಂಸ್ಥೆಗಳು ಈ ಮಾನದಂಡಗಳಿಗೆ ಬದ್ಧವಾಗಿರುವುದು ಅಷ್ಟೇ ಮುಖ್ಯ. ಒಂದು ತುಡಿಯುವ ಪ್ರಜಾಪ್ರಭುತ್ವದಲ್ಲಿ ಮಾಧ್ಯಮ ಸಂಸ್ಥೆಗಳು, ಸರ್ಕಾರ ಅಥವಾ ಕಾರ್ಪೊರೇಟ್ ಒತ್ತಡಗಳಿಲ್ಲದೆ ಕಾರ್ಯನಿರ್ವಹಿಸುವ ಸ್ವಾತಂತ್ರ್ಯವನ್ನು ಹೊಂದಿರಬೇಕು. ಪ್ರಜಾಪ್ರಭುತ್ವದ ಜೀವಂತಿಕೆಯು ಸ್ವತಂತ್ರ ಮಾಧ್ಯಮಗಳೊಂದಿಗೆ ಅವಿನಾಭಾವ ಸಂಬಂಧ ಹೊಂದಿದೆ ಎಂದು ಈ ಹಿರಿಯ ಪತ್ರಕರ್ತರು ಹೇಳಿದ್ದಾರೆ.

ನ್ಯೂಸ್‌ಕ್ಲಿಕ್ ಸ್ವತಂತ್ರ ಸುದ್ದಿ ಸಂಸ್ಥೆ –ಪ್ರಧಾನ ಸಂಪಾದಕರ ಸ್ಪಷ್ಟೀಕರಣ

ಇದಕ್ಕೆ ಮೊದಲು, ಆಗಸ್ಟ್ 7ರಂದು ಒಕ್ಕೂಟ ಸರ್ಕಾರ ಮತ್ತು ಮಾಧ್ಯಮಗಳು ಸ್ವತಂತ್ರ ಸುದ್ದಿ ಸಂಸ್ಥೆ ನ್ಯೂಸ್‌ಕ್ಲಿಕ್ ವಿರುದ್ಧ ಮಾಡುತ್ತಿರುವ ಆರೋಪಗಳಿಗೆ ಅದು ಪ್ರತಿಕ್ರಿಯೆ ನೀಡಿದ್ದು, ಎಲ್ಲಾ ಆರೋಪಗಳು ಆಧಾರರಹಿತವಾಗಿವೆ ಎಂದು ಹೇಳಿದೆ. "ನಮ್ಮ ಸಂಸ್ಥೆ ಸ್ವತಂತ್ರ ಸುದ್ದಿ ಸಂಸ್ಥೆಯಾಗಿದ್ದು, ಚೀನಾದ ಕಮ್ಯುನಿಸ್ಟ್ ಪಕ್ಷದ ಅಥವಾ ಇತರ ಯಾವುದೆ ಹಿತಾಸಕ್ತಿಗಳ ಮುಖವಾಣಿಯಾಗಿ ಕಾರ್ಯನಿರ್ವಹಿಸುತ್ತಿದ್ದೇವೆ ಎಂಬ ವರದಿ ಸುಳ್ಳಿನಿಂದ ಕೂಡಿದೆ" ಎಂದು ನ್ಯೂಸ್‌ಕ್ಲಿಕ್‌ನ ಪ್ರಧಾನ ಸಂಪಾದಕ ಪ್ರಬೀರ್ ಪುರಕಾಯಸ್ಥ ಹೇಳಿದ್ದಾರೆ. ಈ ಬಗ್ಗೆ ಟ್ವಿಟರ್ ಮತ್ತು ವೆಬ್‌ಸೈಟ್‌ನಲ್ಲಿ ಸ್ಪಷ್ಟನೆ ಪ್ರಕಟಿಸಿರುವ ನ್ಯೂಸ್ ಕ್ಲಿಕ್ "ಕಳೆದ 12 ಗಂಟೆಗಳಲ್ಲಿ, ನ್ಯೂಸ್‌ಕ್ಲಿಕ್ ವಿರುದ್ಧ ಹಲವಾರು ಸುಳ್ಳು ಮತ್ತು ತಪ್ಪುದಾರಿಗೆಳೆಯುವ ಆರೋಪಗಳನ್ನು ಹೊರಿಸಲಾಗಿದೆ. ಇವೆಲ್ಲವೂ ಪ್ರಸ್ತುತ ದೇಶದ ನ್ಯಾಯಾಲಯಗಳ ಮುಂದೆ ವಿಚಾರಣಾಧೀನವಾಗಿರುವ ವಿಷಯಗಳಿಗೆ ಸಂಬಂಧಿಸಿದೆ. ನಾವು ಕಾನೂನು ಪ್ರಕ್ರಿಯೆಯ ಪಾವಿತ್ರ್ಯತೆಯನ್ನು ಗೌರವಿಸುತ್ತೇವೆ ಮತ್ತು ಮಾಧ್ಯಮಗಳ ಕಟಕಟೆಯಲ್ಲಿ ನಿಲ್ಲುವುದಿಲ್ಲ" ಎಂದು ಹೇಳಿದೆ.

"ನ್ಯೂಸ್‌ಕ್ಲಿಕ್ ಒಂದು ಸ್ವತಂತ್ರ ಸುದ್ದಿ ಸಂಸ್ಥೆಯಾಗಿದ್ದು, ಚೀನಾದ ಕಮ್ಯುನಿಸ್ಟ್ ಪಕ್ಷ ಅಥವಾ ಇತರ ಯಾವುದೆ ಹಿತಾಸಕ್ತಿಗಳ ಮುಖವಾಣಿಯಂತೆ ಕಾರ್ಯನಿರ್ವಹಿಸುತ್ತೇವೆ ಎಂಬ ಪ್ರತಿಪಾದನೆ ಸುಳ್ಳಾಗಿದೆ. ನಾವು ದೇಶದ ನ್ಯಾಯಾಲಯಗಳಲ್ಲಿ ನಮ್ಮ ನಂಬಿಕೆಯನ್ನು ಪುನರುಚ್ಚರಿಸುತ್ತಿದ್ದೇವೆ. ನಾವು ಭಾರತೀಯ ಕಾನೂನಿಗೆ ಅನುಸಾರವಾಗಿ ಕಾರ್ಯನಿರ್ವಹಿಸುತ್ತಿದ್ದು, ಅದರಂತೆ ಕಾರ್ಯನಿರ್ವಹಿಸುವುದನ್ನು ಮುಂದುವರಿಸುತ್ತದೆ ಎಂಬ ವಿಶ್ವಾಸವಿದೆ" ಎಂದು ನ್ಯೂಸ್ ಕ್ಲಿಕ್ ಹೇಳಿದೆ.

"ಕೆಲವು ರಾಜಕೀಯ ವ್ಯಕ್ತಿಗಳು ಮತ್ತು ಮಾಧ್ಯಮದ ವಿಭಾಗಗಳು ನಮ್ಮ ವಿರುದ್ಧ ಮಾಡುತ್ತಿರುವ ಆರೋಪಗಳು ಆಧಾರರಹಿತವಾಗಿವೆ. ವಾಸ್ತವವಾಗಿ ಇವಕ್ಕೆ ಕಾನೂನಿನ ಆಧಾರವಿಲ್ಲ. ಪ್ರಮುಖವಾಗಿ, ಪ್ರಕರಣವೊಂದರಲ್ಲಿ ದೆಹಲಿ ಹೈಕೋರ್ಟ್ ನಮ್ಮ ಪರವಾಗಿ ತೀರ್ಪು ನೀಡಿದ್ದು, ಕಂಪನಿಯ ವಿವಿಧ ಅಧಿಕಾರಿಗಳಿಗೆ ಬಂಧನದಿಂದ ಮಧ್ಯಂತರ ರಕ್ಷಣೆಯನ್ನು ನೀಡಿದೆ" ಎಂದು ನ್ಯೂಸ್ ಕ್ಲಿಕ್ ನೆನಪಿಸಿದೆ.

"ಅಷ್ಟೆ ಅಲ್ಲದೆ, ದೆಹಲಿಯ ಹೆಚ್ಚುವರಿ ಮುಖ್ಯ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ (ವಿಶೇಷ ಕಾಯಿದೆಗಳು) ನ್ಯಾಯಾಲಯ ಸಂಸ್ಥೆಯ ವಿರುದ್ಧ ಆದಾಯ ತೆರಿಗೆ ಅಧಿಕಾರಿಗಳು ಸಲ್ಲಿಸಿದ ದೂರನ್ನು ವಜಾಗೊಳಿಸಿ, ಅದು (ವಿಚಾರಣೆಗೆ)ಅರ್ಹವಲ್ಲ ಎಂದು ಕಂಡುಕೊಂಡಿದೆ"

ನ್ಯೂಸ್ ಕ್ಲಿಕ್ ಚೀನಾ ಮೂಲದಿಂದ ಅನುದಾನ ಪಡೆದು ಅವರ ಪರವಾಗಿ ಪ್ರಚಾರ ನಡೆಸುತ್ತಿದೆ ಎಂದು ಅಮೆರಿಕಾ ಮೂಲದ ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿತ್ತು. ಈ ವರದಿಯನ್ನು ಉಲ್ಲೇಖಿಸಿದ್ದ ಕೇಂದ್ರ ಸಚಿವ ಅನುರಾಗ್ ಠಾಕೂರ್, "ಸಂಸ್ಥೆಯು ಚೀನಾ ಕಮ್ಯುನಿಸ್ಟ್ ಪಾರ್ಟಿ ಕಾರ್ಯಸೂಚಿಯನ್ನು ಹರಡುತ್ತಿದೆ. 2021 ರಲ್ಲಿ ಜಾರಿ ನಿರ್ದೇಶನಾಲಯವು ನ್ಯೂಸ್ ಕ್ಲಿಕ್ ವಿರುದ್ಧ ದಾಳಿ ನಡೆಸಿದಾಗ ನ್ಯೂಸ್ ಕ್ಲಿಕ್ ಪರವಾಗಿ ಮಾತನಾಡಿದ್ದ ಕಾಂಗ್ರೆಸ್ ಕೂಡಾ ನ್ಯೂಸ್‌ಕ್ಲಿಕ್‌ನೊಂದಿಗೆ ಕೈಜೋಡಿಸಿದೆ" ಎಂದು ಆರೋಪಿಸಿದ್ದರು.

ಆಗಸ್ಟ್ 9: ದೇಶಾದ್ಯಂತ ಕಾರ್ಮಿಕರು, ರೈತರಿಂದ 'ಕ್ವಿಟ್ ಇಂಡಿಯಾ' ದಿನಾಚರಣೆ ಜನವಿರೋಧಿ, ದೇಶ-ವಿರೋಧಿ ಸರ್ಕಾರದ ವಿರುದ್ಧ ದೃಢ ಹೋರಾಟದ ಪಣ



2023 ರ ಜನವರಿ 30 ರಂದು ನವದೆಹಲಿಯಲ್ಲಿ ನಡೆದ ಕೇಂದ್ರೀಯ ಕಾರ್ಮಿಕ ಸಂಘಗಳು ಮತ್ತು ಸ್ವತಂತ್ರ ಒಕ್ಕೂಟಗಳು/ಸಂಘಗಳ ವೇದಿಕೆಯಿಂದ ಜಂಟಿಯಾಗಿ ಆಯೋಜಿಸಲಾದ ಕಾರ್ಮಿಕರ ರಾಷ್ಟ್ರೀಯ ಸಮಾವೇಶವು ನೀಡಿದ ಕರೆಯ ಮೇರೆಗೆ, ಶ್ರಮಜೀವಿಗಳು ಆಗಸ್ಟ್ 9ರಂದು ದೇಶಾದ್ಯಂತ "ದೇಶವನ್ನು ಉಳಿಸಿ, ಜನರನ್ನು ಉಳಿಸಿ" ಎಂಬ ಘೋಷಣೆಯೊಂದಿಗೆ ಪ್ರತಿಭಟನಾ ಕಾರ್ಯಾಚರಣೆಗಳಲ್ಲಿ ಭಾಗವಹಿಸಿದರು ಎಂದು ವೇದಿಕೆ ಪತ್ರಿಕಾ ಹೇಳಿಕೆಯೊಂದರಲ್ಲಿ ತಿಳಿಸಿದೆ.

ಬ್ರಿಟಿಷ್ ಆಳ್ವಿಕೆಯಿಂದ ಸ್ವಾತಂತ್ರ್ಯಕ್ಕಾಗಿ ಭಾರತದ ಹೋರಾಟದ ಇತಿಹಾಸದಲ್ಲಿ ಈ ದಿನಕ್ಕೆ ವಿಶೇಷ ಮಹತ್ವವಿದೆ. ಇದು ತಮ್ಮ ಗಂಟು ಮೂಟೆ ಕಟ್ಟಿಕೊಂಡು ಭಾರತ ಬಿಟ್ಟು ತೊಲಗುವಂತೆ ವಸಾಹತುಶಾಹಿಗಳಿಗೆ ಕೊನೆಯ ಎಚ್ಚರಿಕೆ ನೀಡಿದ್ದ "ಕ್ವಿಟ್ ಇಂಡಿಯಾ" ದಿನ.

ಇಂದು ಬಿಜೆಪಿ ಆಡಳಿತದಲ್ಲಿ ಉಸಿರುಗಟ್ಟಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. 2014ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಕಾರ್ಮಿಕರು, ರೈತರು, ವಿದ್ಯಾರ್ಥಿಗಳು, ಯುವಕರು, ಮಹಿಳೆಯರು ಹೀಗೆ ದುಡಿಯುವ ಜನಸಾಮಾನ್ಯರ ಬದುಕು ಪ್ರತಿಯೊಂದು ಹಂತದಲ್ಲೂ ಹದಗೆಟ್ಟಿದೆ.

ರಾಷ್ಟ್ರೀಯ ಸಂಪನ್ಮೂಲಗಳು ಮತ್ತು ಆಸ್ತಿಗಳು, ಆಯಕಟ್ಟಿನ ಕ್ಷೇತ್ರಗಳು ಸೇರಿದಂತೆ ಎಲ್ಲಾ ವಲಯಗಳಲ್ಲಿನ ಸಾರ್ವಜನಿಕ ವಲಯದ ಉದ್ಯಮಗಳನ್ನು ಖಾಸಗೀಕರಣಗೊಳಿಸಲಾಗುತ್ತಿದೆ ಮತ್ತು ಭಾರತೀಯ ಮತ್ತು ವಿದೇಶಿ ಬ್ರ್ಯಾಂಡ್‌ನ ದೊಡ್ಡ ಕಾರ್ಪೊರೇಟ್‌ಗಳಿಗೆ ಮಾರಾಟ ಮಾಡಲಾಗುತ್ತಿದೆ. ಅಸಮಾನತೆಗಳು ಹೆಚ್ಚಾಗುತ್ತಿದ್ದು, ಜನ ಸಾಮಾನ್ಯರ ಬದುಕು ದುಸ್ತರವಾಗಿದೆ. ಹೆಚ್ಚುತ್ತಿರುವ ಅಗತ್ಯ ವಸ್ತುಗಳ ಬೆಲೆಗಳು ಮತ್ತು ನಿರುದ್ಯೋಗ, ಉದ್ಯೋಗ ನಷ್ಟ, ವೇತನ ಕುಸಿತ, ನಮ್ಮ ಬಹುಪಾಲು ಜನರಿಗೆ ಸಾಮಾಜಿಕ ಭದ್ರತೆ ಇಲ್ಲದಿರುವ ಸನ್ನಿವೇಶ. ಕಾರ್ಪೊರೇಟ್ ಪರ, ಜನವಿರೋಧಿ, ರಾಷ್ಟ್ರವಿರೋಧಿ ಸರ್ಕಾರದ ವಿರುದ್ಧ ಜನಸಾಮಾನ್ಯರು ಹೋರಾಡುವುದನ್ನು ಬಿಟ್ಟು ಬೇರೆ ದಾರಿಯಿಲ್ಲ.

ಹೀಗೆಂದು ಗಮನಿಸಿದ್ದ ಕಾರ್ಮಿಕ ಸಂಘಟನೆಗಳು ಜನವರಿ 30 ರಂದು "ದೇಶವನ್ನು ಉಳಿಸಿ, ಜನರನ್ನು ಉಳಿಸಿ" ಕರೆ ನೀಡಿದ್ದವು. ಅಂದಿನಿಂದಲೇ ದೇಶದ ಮೂಲೆ ಮೂಲೆಗೆ ಈ ಸಂದೇಶವನ್ನು ಹರಡಲು ನಿರತವಾಗಿವೆ. ಜಂಟಿ ಸಭೆಗಳು, ಜಾಥಾಗಳು (ಪಾದಯಾತ್ರೆಗಳು, ಸೈಕಲ್/ಮೋಟಾರ್ ಸೈಕಲ್/ಜೀಪ್ ಜಾಥಾಗಳು), ಗೇಟ್ ಸಭೆಗಳು, ಪ್ರದರ್ಶನಗಳು, ಶಾಸಕರು, ಸಂಸದರು ಮುಂತಾದ ಚುನಾಯಿತ ಪ್ರತಿನಿಧಿಗಳಿಗೆ ಮನವಿ, ಕರಪತ್ರಗಳನ್ನು ಹಂಚುವುದು ಹೀಗೆ ಹತ್ತು ಹಲವು ವಿಧಗಳಲ್ಲಿ ಬುಡಮಟ್ಟದಲ್ಲಿ ಶ್ರಮಜೀವಿಗಳನ್ನು ಈ ಸಂದೇಶವನ್ನು ತಲುಪಿಸಲಾಗಿದೆ.

ಆಗಸ್ಟ್ 9 ರಂದು, ಈ ಪತ್ರಿಕಾ ಹೇಳಿಕೆ ಪ್ರಕಟಿಸುವ ವೇಳೆಗೆ 700 ಕ್ಕೂ ಹೆಚ್ಚು ಜಿಲ್ಲೆಗಳು, 26 ರಾಜ್ಯಗಳ ರಾಜಧಾನಿಗಳಿಂದ ಹಲವಾರು ಸಾವಿರ ತಾಲೂಕುಗಳು/ಮಂಡಲಗಳು ಪ್ರದರ್ಶನಗಳು/ ಧರಣಿಗಳು ನಡೆದ ವರದಿಗಳು ಬರುತ್ತಿವೆ ಎಂದು ಹೇಳಿಕೆ ತಿಳಿಸುತ್ತದೆ.

ದೆಹಲಿಯಲ್ಲಿ ಜಂತರ್ ಮಂತರ್ ನಲ್ಲಿ ಜಂಟಿ ಪ್ರತಿಭಟನೆಯನ್ನು ಕೇಂದ್ರ ಮತ್ತು ರಾಜ್ಯ ನಾಯಕರು ಉದ್ದೇಶಿಸಿ ಮಾತನಾಡಿದರು. ಶೆಹನಾಜ್–ಐಎನ್‌ಟಿಯುಸಿ, ಅಮರ್‌ಜೀತ್ ಕೌರ್–ಎಐಟಿಯುಸಿ, ಹರ್ಭಜನ್ ಸಿಂಗ್–ಎಚ್‌ಎಂಎಸ್, ತಪನ್ ಸೇನ್–ಸಿಐಟಿಯು, ಹರೀಶ್ ತ್ಯಾಗಿ–ಎಐಯುಟಿಯುಸಿ, ಲತಾ ಬೆನ್–ಸೇವಾ, ರಾಜೀವ್ ಡಿಮ್ರಿ–ಎಐಸಿಸಿಟಿಯು, ರಶೀದ್ ಖಾನ್–ಎಲ್‌ಪಿಎಫ್, ಶತ್ರುಜಿತ್ ಸಿಂಗ್–ಯುಟಿಯುಸಿ ಸೇರಿದಂತೆ ಕೇಂದ್ರ ನಾಯಕರು ಮಾತನಾಡಿದರು. ಇತರರಲ್ಲಿ ಸಂತೋಷ್ ಕುಮಾರ್–ಎಂಇಸಿ, ನರೇಶ್ ಕುಮಾರ್–ಐಸಿಟಿಯು ಕೂಡ ಉದ್ದೇಶಿಸಿ ಮಾತನಾಡಿದರು.

ಬಿಜೆಪಿ ಸರ್ಕಾರದ ನೀತಿಗಳು ಗಾಯಗಳಿಗೆ ಉಪ್ಪು ಸವರುವ ಕೆಲಸವನ್ನೇ ಮಾಡುತ್ತಿವೆ. "ಡಬಲ್ ಇಂಜಿನ್ ಅಭಿವೃದ್ಧಿ" ಎಂದು ನಿರ್ಲಜ್ಜವಾಗಿ ಸುಳ್ಳು ಹೇಳುತ್ತಿರುವುದರಿಂದ ಎಲ್ಲೆಡೆ ಪ್ರದರ್ಶನಗಳು ಉಗ್ರಗೊಳ್ಳುತ್ತಿವೆ. ಮಣಿಪುರ ಹೊತ್ತಿ ಉರಿಯುತ್ತಿದೆ, ನಮ್ಮ ಪದಕ-ವಿಜೇತ ಮಹಿಳಾ ಕುಸ್ತಿಪಟುಗಳಿಗೆ ಕಿರುಕುಳ ಕೊಡುತ್ತಿರುವವರು ಮುಕ್ತವಾಗಿ ಅಡ್ಡಾಡುತ್ತಿದ್ದಾರೆ, ಮತ್ತು ಈಗ ಹರಿಯಾಣವನ್ನು ಯೋಜಿತ ರೀತಿಯಲ್ಲಿ ಹಿಂಸಾಚಾರಕ್ಕೆ ತಳ್ಳಲಾಗಿದೆ. ಪ್ರಜಾಪ್ರಭುತ್ವ ಮತ್ತು ಜಾತ್ಯತೀತ ಮೌಲ್ಯಗಳಿಗೆ ಸವಾಲು ಬಂದಿದೆ. ಈ ಬಿಜೆಪಿ ಸರ್ಕಾರದಿಂದ ಯಾವುದೇ ನಿರೀಕ್ಷೆ ಇಲ್ಲ, ಇದು ಹೋಗಬೇಕು, ರಾಷ್ಟ್ರಕ್ಕೆ ಒಂದು ಉಲ್ಲಾಸಕರ ಬದಲಾವಣೆಯ ಅಗತ್ಯವಿದೆ. ಇದಕ್ಕಾಗಿ ಕಾರ್ಮಿಕ ವರ್ಗ ಮುಂದಿನ ದಿನಗಳಲ್ಲಿ ಹೋರಾಟವನ್ನು ತೀವ್ರಗೊಳಿಸಲಿದೆ ಎಂದು ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಆಗಸ್ಟ್ 9ರ ಹೇಳಿಕೆ ತಿಳಿಸಿದೆ.

ಸಿಪಿಐ(ಎಂ) ವಿರುದ್ಧ ಬಿಜೆಪಿಯ ಮಸಿ ಬಳಿಯುವ ಪ್ರಚಾರ–ಪೊಲಿಟ್‌ಬ್ಯುರೊ ಖಂಡನೆ

ಬಿಜೆಪಿ ಸಂಸದ ನಿಶಿಕಾಂತ್ ದುಬೆ ಸಿಪಿಐ(ಎಂ) ಮತ್ತು ಅದರ ಮಾಜಿ ಪ್ರಧಾನ ಕಾರ್ಯದರ್ಶಿಗಳ ವಿರುದ್ಧ ಲೋಕಸಭೆಯಲ್ಲಿ ಮಾಡಿರುವ ಟಿಪ್ಪಣಿಗಳು ಮತ್ತು ಸಿಪಿಐ(ಎಂ) ದೇಶದ್ರೋಹಿ ಪಕ್ಷ ಎಂದಿರುವುದನ್ನು ಸಿಪಿಐ(ಎಂ) ಪೊಲಿಟ್ ಬ್ಯೂರೋ ಬಲವಾಗಿ ಖಂಡಿಸಿದೆ.

ಸ್ಥಾಪಿತ ಸಂಸದೀಯ ಕಾರ್ಯವಿಧಾನಗಳನ್ನು ಸ್ಪಷ್ಟವಾಗಿ ಉಲ್ಲಂಘಿಸುತ್ತ ದುಬೆ "ಸಾವಿರಾರು ಮೇಲ್" ಉಲ್ಲೇಖಗಳನ್ನು ಈ ಅಂಶವನ್ನು ಸಾಬೀತುಪಡಿಸಲು ದಾಖಲಿಸ ಬಯಸುವುದಾಗಿ ಹೇಳಿದ್ದಾರೆ. ಆತ ಹಾಗೆ ಮಾಡಲಿ, ಇದರಿಂದ ಅವರ ದಾವೆಗಳು ಸಂಪೂರ್ಣ ಸುಳ್ಳು ಎಂಬುದು ಬಯಲಿಗೆ ಬರುತ್ತದೆ ಎಂದಿರುವ ಪೊಲಿಟ್‌ಬ್ಯುರೊ ಈ ವಿಷಯದಲ್ಲಿ ಮಾಧ್ಯಮದ ಒಂದು ವಿಭಾಗವು ನಡೆಸುತ್ತಿರುವ ಅಪಪ್ರಚಾರವನ್ನು ಕೂಡ ಖಂಡಿಸಿದೆ.

ಸಿಪಿಐ(ಎಂ)ನ ರಾಜಕೀಯ ಮತ್ತು ಸಿದ್ಧಾಂತ ತೆರೆದ ಪುಸ್ತಕವಾಗಿದೆ. ಎಡಪಕ್ಷಗಳು ಬಿಜೆಪಿಯ ಹಿಂದುತ್ವ ಕೋಮುವಾದಿ ಸಿದ್ಧಾಂತದ ಎಡೆಬಿಡದ ಕಡು ವಿರೋಧಿಗಳು ಎಂದು ಬಿಜೆಪಿಗೆ ಚೆನ್ನಾಗಿ ತಿಳಿದಿದೆ ಮತ್ತು ಅದಕ್ಕಾಗಿಯೇ ಅವರು ಈ ಮಸಿ ಬಳಿಯುವ ನಡೆಸುತ್ತಿದ್ದಾರೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಕೇಂದ್ರದಲ್ಲಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದು 9 ವರ್ಷಗಳು ಕಳೆದಿವೆ. ಮೋದಿ ಆಡಳಿತದ ಸಾಧನೆಗಳ ಬಗ್ಗೆ ಬಿಜೆಪಿ, ಸಂಘಪರಿವಾರ ಹಾಗೂ ಕಾರ್ಪೊರೇಟ್ ಒಡೆತನದ ಮಾಧ್ಯಮಗಳು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ನಿರಂತರವಾಗಿ ಪ್ರಚಾರ ಮಾಡುತ್ತಿದ್ದಾರೆ. ಅವರು ಸಾಧನೆಗಳೆಂದು ಹೇಳುತ್ತಿರುವುದೆಲ್ಲಾ ಜನಪರವಾದ ಅಥವಾ ದೇಶದ ಹಿತ ದೃಷ್ಟಿಯಿಂದ ರೂಪಿಸಲಾದ ಯೋಜನೆಗಳಲ್ಲ, ಅವುಗಳೆಲ್ಲವೂ ನವ ಉದಾರವಾದಿ ನೀತಿಗಳ ಜಾರಿಯ ಭಾಗವಾಗಿದೆ ಎಂಬುದನ್ನು ಕಳೆದ 10 ಲೇಖನಗಳಲ್ಲಿ ಒಂದಷ್ಟು ಮಾಹಿತಿ ನೀಡುವ ಪ್ರಯತ್ನವನ್ನು 'ಜನಶಕ್ತಿ' ಮಾಡಿದೆ. ಜನಸಾಮಾನ್ಯರ ಹಿತಕ್ಕಾಗಿ ಹೊಸ ಯೋಜನೆಗಳನ್ನು ರೂಪಿಸಲು ಮುಂದಾಗದ ಒಕ್ಕೂಟ ಸರ್ಕಾರ, ಜನತೆ ಹೋರಾಟಗಳ ಮೂಲಕ ಪಡೆದ ಸಾಮಾಜಿಕ ಭದ್ರತಾ ಯೋಜನೆಗಳನ್ನು, ಉದ್ಯೋಗ ಖಾತ್ರಿ ಯೋಜನೆಗಳನ್ನು ನಾಶ ಮಾಡಲು ಮುಂದಾಗಿದೆ. ಈ ಕುರಿತು ಸರಣಿ ಲೇಖನಗಳ ಮುಂದುವರೆದ ಭಾಗ.

ಮೋದಿ 9 ವರ್ಷಗಳು – ಭಾಗ – 11

ನರೇಗಾ ಯೋಜನೆಯ ನಾಶಕ್ಕೆ ಹೆಜ್ಜೆಗಳು

ಮೋದಿ ಸರ್ಕಾರದ 9 ವರ್ಷಗಳ ಸಾಧನೆಗಳಲ್ಲಿ ನರೇಗಾ ಯೋಜನೆಯನ್ನು ನಾಶ ಮಾಡಲು ಹೊರಟಿರುವುದೂ ಒಂದಾಗಿದೆ.

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ (ಎಂಜಿನರೇಗಾ) ಯೋಜನೆಗೆ ಕೇಂದ್ರ ಸರ್ಕಾರ ಅನುದಾನ ಕಡಿತ ಮಾಡುತ್ತಿರುವ ಈ ಸಂದರ್ಭದಲ್ಲಿ 10 ವರ್ಷಗಳ ಹಿಂದಿನ ಒಂದು ಲೇಖನ ನೆನಪಿಗೆ ಬರುತ್ತದೆ. ಇಂದು ಸಂಸದರಾಗಿರುವ ಪ್ರತಾಪ್ ಸಿಂಹ 2013ರಲ್ಲಿ ಕನ್ನಡಪ್ರಭ ಪತ್ರಿಕೆಯಲ್ಲಿ ನರೇಗಾ ಯೋಜನೆಯನ್ನು ಟೀಕಿಸಿ ಲೇಖನ ಬರೆದಿದ್ದರು. ಅವರು ಆ ಲೇಖನದಲ್ಲಿ ಹೀಗೆ ಬರೆದಿದ್ದಾರೆ. "2004ರಲ್ಲಿ ಪ್ರಧಾನಿ ಸ್ಥಾನವನ್ನು ನಿರಾಕರಿಸುವ ನಾಟಕವಾಡಿ, ರಾಷ್ಟ್ರೀಯ ಸಲಹಾ ಮಂಡಳಿ (NAC) ಮೂಲಕ ಪರೋಕ್ಷವಾಗಿ ಸರ್ಕಾರದ ಕಡಿವಾಣ ಕೈಗೆತ್ತಿಕೊಂಡ ಸೋನಿಯಾ ಗಾಂಧಿ ನೇತೃತ್ವದ ಈ ಸಮಿತಿಯಲ್ಲಿ ತರ್ಲೆ ಕಮ್ಯುನಿಸ್ಟರೇ ತುಂಬಿಕೊಂಡಿದ್ದಾರೆ. ಇವರ ಸಲಹೆಯ ಫಲವೇ ನರೇಗಾ ಯೋಜನೆ. ವರ್ಷಕ್ಕೆ 100 ದಿನಗಳು ಖಚಿತ ಕೆಲಸ, ದಿನವೊಂದಕ್ಕೆ 120 ಕೂಲಿ ನೀಡುವ ಈ ಯೋಜನೆಯಿಂದ ಎಂಥ ಅನಾಹುತ ಸಂಭವಿಸಿದೆಯೆಂದರೆ, ಅಸ್ಸಾಂನ ಟೀ ಎಸ್ಟೇಟ್ ಗಳಿಂದ, ಕರ್ನಾಟಕದ ಬತ್ತ ಬೆಳೆಯುವವರೆಗೂ ಕಾರ್ಮಿಕರ ಕೊರತೆ ಕಾಡುತ್ತಿದೆ... ಸರ್ಕಾರ 30 ಕೆಜಿ ಅಕ್ಕಿಯನ್ನೂ ಕೊಡುತ್ತದೆ, ನರೇಗಾವೆಂಬ ಕಳ್ಳಾಟಕ್ಕೂ 120 ರೂ ಕೊಡುತ್ತದೆ. ಹೀಗಾಗಿ ನಮ್ಮ ಜನ ಸಾರಾಯಿಗಷ್ಟೇ ಚಿಂತೆಪಡಬೇಕೇ ಹೊರತು, ಅನ್ನಕ್ಕಲ್ಲ. ಮೈ ಬಗ್ಗಿಸಿ ದುಡಿದಿದ್ದರೆ ಆರೋಗ್ಯವಾದರೂ ಸರಿಯಿರುತ್ತಿತ್ತು."

ಇದು ಪ್ರತಾಪ್ ಸಿಂಹ ಅವರ ಅಭಿಪ್ರಾಯ ಮಾತ್ರವಲ್ಲ, ಬಿಜೆಪಿ ಮತ್ತು ಸಂಘಪರಿವಾರದ ನಿಲುವುಗಳೂ ಇದೇ ಆಗಿವೆ. ಇದು ಮುಕ್ತ ಆರ್ಥಿಕ ನೀತಿಗಳ ಜಾರಿಯ ಭಾಗವೂ ಆಗಿದೆ. ಹಾಗೆಂದು ಇಂತಹ ಜನಪರ ಯೋಜನೆಗಳನ್ನು ಏಕಾಏಕಿ ತೆಗೆಯಲಾಗದು. ನಿಧಾನವಾಗಿ ಸ್ವಲ್ಪ ಸ್ವಲ್ಪವೇ ನಾಶ ಮಾಡಬೇಕು. ಇದು ಹೇಗೆಂದರೆ, ಅಡುಗೆ ಅನಿಲದ ಮೇಲಿನ ಸಬ್ಸಿಡಿಯನ್ನು ಹಂತ ಹಂತವಾಗಿ ಕಡಿತ ಮಾಡುತ್ತಾ, ಕೊರೋನಾ ಸಾಂಕ್ರಾಮಿಕದ ಸಂದರ್ಭದಲ್ಲಿ ಲಾಕ್ಡೌನ್ ಸಮಯದಲ್ಲೇ ಸಂಪೂರ್ಣವಾಗಿ ತೆಗೆದು ಹಾಕಿದರಲ್ಲಾ, ಹಾಗೆ.

2005ರಲ್ಲಿ ನರೇಗಾ ಯೋಜನೆ ಜಾರಿ

ಎಡಪಕ್ಷಗಳು 2004 ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಎರಡನ್ನೂ ಸೋಲಿಸುವ ಗುರಿಯೊಂದಿಗೆ, ಈ ಎರಡೂ ಪಕ್ಷಗಳ ಹೊರತಾದ ಇತರೆ ಪಕ್ಷಗಳ ಜೊತೆಗೂಡಿ ಶ್ರಮಿಸಿದ್ದವು. ಈ ಚುನಾವಣೆಯಲ್ಲಿ ಎಡ ಪಕ್ಷಗಳು 61 ಲೋಕಸಭಾ ಸ್ಥಾನಗಳನ್ನು ಗಳಿಸಿ ನಿರ್ಣಾಯಕ ಪಾತ್ರ ವಹಿಸಿದ್ದವು. ಚುನಾವಣಾ ಫಲಿತಾಂಶದ ನಂತರ, ಬಿಜೆಪಿ ಅಧಿಕಾರಕ್ಕೆ ಬರದಂತೆ ತಡೆಯಲು ಕಾಂಗ್ರೆಸ್ ಪಕ್ಷವನ್ನು ಒಳಗೊಂಡ ಯುನೈಟೆಡ್ ಪ್ರೋಗ್ರೆಸ್ಸಿವ್ ಅಲೈಯನ್ಸ್ (UPA) ಸರ್ಕಾರ ರಚಿಸಿತು. ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದ ಯುಪಿಎ ಒಂದರ ಈ ಸರ್ಕಾರದ ಸಚಿವ ಸಂಪುಟದಲ್ಲಿ ಭಾಗಿಯಾಗಲು ಎಡಪಕ್ಷಗಳು ಒಪ್ಪಲಿಲ್ಲ. ಬದಲಾಗಿ, ಎಡಪಕ್ಷಗಳು ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಆಧಾರದ ಮೇಲೆ ಕೆಲವು ಷರತ್ತುಗಳೊಂದಿಗೆ ಸರ್ಕಾರಕ್ಕೆ ಹೊರಗಿನಿಂದ ಬೆಂಬಲ ನೀಡಿದ್ದವು. ಇದರ ಫಲವೇ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (NREGA) ಎಲ್ಲೆಡೆ ಜಾರಿಗೆ ಬಂದಿದ್ದು. ಗ್ರಾಮೀಣ ಪ್ರದೇಶದ ಪ್ರತಿ ಮನೆಗೆ ಆರ್ಥಿಕ ವರ್ಷದಲ್ಲಿ ಕನಿಷ್ಠ 100 ದಿನಗಳ ಉದ್ಯೋಗವನ್ನು ಒದಗಿಸುವ ಮೂಲಕ, ಗ್ರಾಮೀಣ ಪ್ರದೇಶಗಳಲ್ಲಿ ಜೀವನೋಪಾಯ ಮತ್ತು ಭದ್ರತೆಯನ್ನು ಹೆಚ್ಚಿಸುವ ಗುರಿಯನ್ನು ಈ ಯೋಜನೆ ಹೊಂದಿದೆ. ಈ ಯೋಜನೆಯು ದೇಶದೆಲ್ಲೆಡೆ ಕೃಷಿ ಕೂಲಿಕಾರರ ಬದುಕಿಗೆ ಒಂದಷ್ಟು ಆಸರೆಯಾಗಿದೆ. (ಇದನ್ನು 200 ದಿನಗಳಿಗೆ ಹೆಚ್ಚಿಸಬೇಕು ಮತ್ತು 600 ರೂ ಕೂಲಿ ನಿಗದಿ ಮಾಡಬೇಕು ಎಂಬ ಬೇಡಿಕೆಯೂ ಇದೆ.)

NREGA ಕುರಿತು ಒಂದಷ್ಟು ಮಾಹಿತಿ

23 ಆಗಸ್ಟ್ 2004 ರಂದು, ಲೋಕಸಭೆಯು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (NREGA) ಕಾಯಿದೆಯನ್ನು ಅಂಗೀಕರಿಸಿತು, ಇದು ಗ್ರಾಮೀಣ ಪ್ರದೇಶಗಳಲ್ಲಿ



ವಾಸಿಸುವ ಲಕ್ಷಾಂತರ ಬಡವರಿಗೆ ಜೀವನೋಪಾಯವನ್ನು ಖಾತ್ರಿಪಡಿಸಿತು. ಈ ಯೋಜನೆಯನ್ನು ಲೋಕಸಭೆಯಲ್ಲಿ 23ನೇ ಆಗಸ್ಟ್ 2004 ರಂದು ಮತ್ತು ರಾಜ್ಯಸಭೆಯಲ್ಲಿ 25ನೇ ಆಗಸ್ಟ್ 2005 ರಂದು ಅಂಗೀಕರಿಸಲಾಯಿತು ಮತ್ತು ಅಂತಿಮವಾಗಿ 5ನೇ ಸೆಪ್ಟೆಂಬರ್ 2005 ರಂದು ಭಾರತದ ರಾಷ್ಟ್ರಪತಿಗಳಿಂದ ಸಹಿ ಮಾಡಲ್ಪಟ್ಟಿತು.

ಈ ಕಾಯಿದೆಯು ಪ್ರತಿ ಹಣಕಾಸು ವರ್ಷದಲ್ಲಿ ಕನಿಷ್ಠ 100 ದಿನಗಳ ವೇತನದ ಉದ್ಯೋಗವನ್ನು ಖಾತರಿಪಡಿಸುತ್ತದೆ. ಯೋಜನೆಯ ಪ್ರಾರಂಭದಲ್ಲಿ ಕೌಶಲ್ಯರಹಿತ ಕೈಯಿಂದ ಕೆಲಸ ಮಾಡಲು ಸಿದ್ಧರಿರುವ ವಯಸ್ಕರಿಗೆ ದಿನವೊಂದಕ್ಕೆ ರೂ.120 ಕನಿಷ್ಠ ವೇತನ ನಿಗದಿಪಡಿಸಲಾಗಿತ್ತು. ಒಂದು ವೇಳೆ ಸರ್ಕಾರವು ಕೆಲಸ ನೀಡಲು ವಿಫಲವಾದರೆ, ಕಾರ್ಮಿಕರಿಗೆ ಅವರ ದೈನಂದಿನ ವೇತನವನ್ನು ಪಾವತಿಸಬೇಕಾಗುತ್ತದೆ.

ಈ ಕಾಯಿದೆಯನ್ನು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯಿದೆ (NREGA) ಎಂದು ಕರೆಯಲಾಯಿತು, ಆದರೆ 2ನೇ ಅಕ್ಟೋಬರ್ 2009 ರಂದು ಅದಕ್ಕೆ ಮಹಾತ್ಮಾ ಗಾಂಧಿ ಎಂಬ ಪೂರ್ವಪ್ರತ್ಯಯವನ್ನು ಸೇರಿಸಲಾಯಿತು.

ಉದ್ಯೋಗವನ್ನು ಒದಗಿಸುವುದರ ಹೊರತಾಗಿ, ಇದು ದೇಶದ ಗ್ರಾಮೀಣ ಭಾಗದಲ್ಲಿ ಸುಸ್ಥಿರ ಮೂಲಸೌಕರ್ಯವನ್ನು ನಿರ್ಮಿಸುವ ಗುರಿಯನ್ನು ಹೊಂದಿದೆ. MGNREGA ಎರಡು ಮುಖ್ಯ ಉದ್ದೇಶಗಳನ್ನು ಹೊಂದಿತ್ತು; ಗ್ರಾಮೀಣ ಅಭಿವೃದ್ಧಿ ಮತ್ತು ಉದ್ಯೋಗ. ನೀರಿನ ಸಂರಕ್ಷಣೆ, ಪ್ರವಾಹ ತಡೆಗಟ್ಟುವಿಕೆ, ಅರಣ್ಯೀಕರಣ, ಕೆರೆ, ಕಟ್ಟೆಗಳನ್ನು ಅಗೆಯುವುದು ಮತ್ತು ಮರಗಳನ್ನು ನೆಡುವುದು ಮುಂತಾದ ನಿರ್ದಿಷ್ಟ ಗ್ರಾಮೀಣ ಅಭಿವೃದ್ಧಿಯನ್ನು ಗುರಿಪಡಿಸಲಾಗಿದೆ.

12 ನೇ ಪಂಚವಾರ್ಷಿಕ ಯೋಜನೆಯು MGNREGA ಯಲ್ಲಿ ಕೆಲವು ಬದಲಾವಣೆಗಳನ್ನು ಪರಿಚಯಿಸಿತು ಮತ್ತು MGNREGA 2.0 ಅನ್ನು ಪ್ರಾರಂಭಿಸಿತು. ಇದು ಯೋಜನೆಯಿಂದ ತೆಗೆದುಕೊಂಡ ಕೆಲಸದ ಪಟ್ಟಿಯನ್ನು ವಿಸ್ತರಿಸುವ ಮೂಲಕ ಅದನ್ನು ಉತ್ತಮಗೊಳಿಸಿತು. ಗ್ರಾಮೀಣ ಕಾರ್ಮಿಕರಲ್ಲಿ ಕೆಲಸದ ಬೇಡಿಕೆಯನ್ನು ಬಲಪಡಿಸುತ್ತದೆ, ಕಾರ್ಮಿಕ ಬಜೆಟ್ ಅನ್ನು ಸುಧಾರಿಸುತ್ತದೆ, ವೇತನ ಪಾವತಿ ವಿಳಂಬವನ್ನು ಕಡಿಮೆ ಮಾಡುತ್ತದೆ, ಸಮಯಕ್ಕೆ ಸರಿಯಾಗಿ ವೇತನ ಪಾವತಿಯನ್ನು ಖಚಿತಪಡಿಸಿಕೊಳ್ಳಲು ಮತ್ತು ಕೈಗೊಳ್ಳಲಾಗುತ್ತಿರುವ ಯೋಜನೆಗಳ ನಿರಂತರ ಮೇಲ್ವಿಚಾರಣೆಗೆ ಬ್ಯಾಂಕ್ ಮತ್ತು ಅಂಚೆ ಕಛೇರಿ ಜಾಲವನ್ನು ಬಲಪಡಿಸುವುದು ಇದರ ಉದ್ದೇಶವಾಗಿದೆ.

ಇದರ ಭಾಗವಾಗಿ ನೇರ ನಗದು ಯೋಜನೆ ಜಾರಿ ಮಾಡಿ, ನರೇಗಾ ಯೋಜನೆಯನ್ನೂ ಕಂಪ್ಯೂಟೀಕರಣಗೊಳಿಸಲಾಗಿದೆ. ಇದರಿಂದಾಗಿ ಗ್ರಾಮೀಣ ಪ್ರದೇಶಗಳಲ್ಲಿ ಇಂಟರ್ ನೆಟ್ ನ ಸೌಲಭ್ಯದ ಕೊರತೆಯಿಂದಾಗಿ ಬಹಳಷ್ಟು ಫಲಾನುಭವಿಗಳಿಗೆ ಕೆಲಸ ಸಿಗದಂತಾಗುತ್ತಿದೆ. ಉದ್ಯೋಗ ಬಯಸಿ ಬರುವ ಕಾರ್ಮಿಕರಿಗೆ ಸಮಸ್ಯೆಗಳು ಮತ್ತಷ್ಟು ಹೆಚ್ಚಾಗಿವೆ.

'ನಿಜವಾದ ಉದ್ಯೋಗ ಕೇವಲ 40 ದಿನಗಳು'

ಯೋಜನೆಯು ಅದರ ಮಿಷನ್ ಹೇಳಿಕೆಯ ಪ್ರಕಾರ, "ಪ್ರತಿ ಮನೆಗೆ ಆರ್ಥಿಕ ವರ್ಷದಲ್ಲಿ ಕನಿಷ್ಠ 100 ದಿನಗಳ ಉದ್ಯೋಗವನ್ನು ಒದಗಿಸುವ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ಜೀವನೋಪಾಯ ಮತ್ತು ಭದ್ರತೆಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ." ಆದಾಗ್ಯೂ, 2022–23ರ ನಿಜವಾದ ಅಂಕಿಅಂಶವು 40 ದಿನಗಳ ಹತ್ತಿರದಲ್ಲಿದೆ ಎಂದು ತಜ್ಞರ ಹೇಳಿಕೆಗಳಿಂದ ತಿಳಿಯುತ್ತದೆ. ಇದಲ್ಲದೆ, ನೋಂದಾಯಿತ ಕಾರ್ಮಿಕರಲ್ಲಿ ಕೇವಲ 3% ರಷ್ಟು ಮಾತ್ರ 100 ದಿನಗಳವರೆಗೆ ಉದ್ಯೋಗವನ್ನು ಪಡೆಯಲು ಸಾಧ್ಯವಾಗಿದೆ ಎಂದು ಅವರು ಹೇಳುತ್ತಾರೆ.

PRS ಲೆಜಿಸ್ಲೇಟಿವ್ ರಿಸರ್ಚ್‌ನ ವಿಶ್ಲೇಷಣೆಯು 2016–17 ಮತ್ತು 2020–21 ರ ನಡುವೆ, ಅದು ಒದಗಿಸಿದ ಉದ್ಯೋಗದ ದಿನಗಳ ಸರಾಸರಿ ಸಂಖ್ಯೆ ಪ್ರತಿ ಕುಟುಂಬಕ್ಕೆ ಕೇವಲ 48 ದಿನಗಳು ಎಂದು ಬಹಿರಂಗಪಡಿಸಿದೆ.

200 ದಿನಗಳ ಕೆಲಸ ಮತ್ತು ರೂ. 600 ದಿನಗೂಲಿ ಎಂಬ ಬೇಡಿಕೆ

ಎಮ್ ಜಿ ನರೇಗಾ ಯೋಜನೆಯ ಅಡಿಯಲ್ಲಿ ಪುಟ 15 ಕ್ಕೆ

ಅಗತ್ಯವಿರುವ ಮೊತ್ತ ರೂ. 2.72 ಲಕ್ಷ ಕೋಟಿ

ಗ್ರಾಮೀಣ ಪ್ರದೇಶದ ಕೂಲಿಕಾರರಿಗೆ ಒಂದಷ್ಟು ಆಸರೆಯಾಗಿರುವ ಈ ಯೋಜನೆಯನ್ನು ಮೋದಿ ಸರ್ಕಾರ ನಿಧಾನವಾಗಿ ನಾಶಮಾಡಲು ಮುಂದಾಗಿದೆ. ಕೇಂದ್ರದಲ್ಲಿ ಬಿಜೆಪಿ ಎರಡನೆಯ ಬಾರಿಗೆ ಅಧಿಕಾರಕ್ಕೆ ಬಂದ 2019ರ ನಂತರ ನರೇಗಾ ಯೋಜನೆಗೆ ನೀಡುತ್ತಿರುವ ಅನುದಾನವನ್ನು ಕೇಂದ್ರ ಸರಕಾರ ಪ್ರತಿ ವರ್ಷವೂ ಕಡಿತ ಮಾಡುತ್ತಾ ಬಂದಿದೆ.

ದೇಶಾದ್ಯಂತ ಲಕ್ಷಾಂತರ ಕುಟುಂಬಗಳಿಗೆ ಯೋಜನೆಯು ಅತ್ಯಂತ ಮಹತ್ವದ್ದಾಗಿದೆ. 2022–23ರಲ್ಲಿ ಸುಮಾರು 5.6 ಕೋಟಿ ಕುಟುಂಬಗಳು ಈ ಯೋಜನೆಯ ಒಂದಷ್ಟು ಲಾಭ ಪಡೆದಿವೆ. ಪ್ರತಿ ಕುಟುಂಬಕ್ಕೆ 100 ದಿನಗಳ ಕೂಲಿಯನ್ನು ಲೆಕ್ಕ ಹಾಕಿದಾಗ, ಈ ಎಲ್ಲಾ ಕುಟುಂಬಗಳಿಗೆ 1.76 ಲಕ್ಷ ಕೋಟಿ ರೂಪಾಯಿ ವೆಚ್ಚವಾಗಲಿದೆ. ಅವಶ್ಯಕ ವಸ್ತುಗಳ ಬೆಲೆ ಏರಿಕೆ, ಆಡಳಿತ ಮತ್ತು ಇತರ ವೆಚ್ಚಗಳೊಂದಿಗೆ, ಈ ವೆಚ್ಚವು 2.46 ಲಕ್ಷ ಕೋಟಿ ರೂಪಾಯಿಗಳಿಗೆ ಹೆಚ್ಚಾಗಬಹುದು ಎಂದು ಅಧ್ಯಯನಗಳ ವರದಿಗಳು ಹೇಳಿವೆ. ಈ ಅಂಕಿ ಅಂಶಕ್ಕೆ 25,800 ಕೋಟಿ ರೂಪಾಯಿ ಬಾಕಿಯನ್ನು ಸೇರಿಸುವ ಮೂಲಕ ರೂ 2.72 ಲಕ್ಷ ಕೋಟಿ ಅಗತ್ಯವಿತ್ತು.

2023–24 ಆರ್ಥಿಕ ವರ್ಷಕ್ಕೆ ಕನಿಷ್ಠ ರೂ. 2.72 ಲಕ್ಷ ಕೋಟಿ ಅಗತ್ಯವಿದೆ ಎಂದು ಹಲವು ಅಧ್ಯಯನಗಳ ವರದಿ ಹೇಳಿದ್ದವು. ಆದರೆ, ಸರಕಾರ ಈ ಹಿಂದಿನ ವರ್ಷ ಮೀಸಲಿಟ್ಟಿದ್ದ ಮೊತ್ತಕ್ಕಿಂತಲೂ ಕಡಿಮೆ ಮೊತ್ತವನ್ನು ಮೀಸಲಿಟ್ಟಿದೆ. ಈ ಯೋಜನೆಗೆ 2022–2023 ರ ಬಜೆಟ್ ನಲ್ಲಿ ಮೀಸಲಿಟ್ಟಿದ್ದು ರೂ. 73,000 ಕೋಟಿ. ಈ ಮೊತ್ತದಲ್ಲಿ ರೂ. 16,070 ಕೋಟಿ ಹಿಂದಿನ ವರ್ಷದ ಬಾಕಿ ತೀರಿಸಲು ಬಳಕೆಯಾಗುತ್ತದೆ.

ಕಳೆದ ಐದು ವರ್ಷಗಳಲ್ಲಿ ವಾರ್ಷಿಕ ಬಜೆಟ್‌ನ ಸುಮಾರು ಶೇ. 21 ರಷ್ಟು ಮೊತ್ತವನ್ನು ಅದಕ್ಕೂ ಹಿಂದಿನ ವರ್ಷಗಳು ಉಳಿಸಿದ ಬಾಕಿಗಳನ್ನು ತೆರಲು ಖರ್ಚು ಮಾಡಲಾಗಿದ್ದು, ಪ್ರಸಕ್ತ ಹಣಕಾಸು ವರ್ಷದ ಕೊನೆಯಲ್ಲಿ ಇರುವ ಬಾಕಿಗಳು ಸುಮಾರು ರೂ. 25,800 ಕೋಟಿ.

ಕೋವಿಡ್–19 ಸಾಂಕ್ರಾಮಿಕದ ಉತ್ತುಂಗದ ವರ್ಷದಲ್ಲಿ ಯೋಜನೆಯ ಮೊತ್ತ 1.11 ಲಕ್ಷ ಕೋಟಿಗೆ ತಲುಪಿತ್ತು. ಆದರೆ, ಅದರ ಮುಂದಿನ ವರ್ಷ 2021–22ರಲ್ಲಿ 98,000 ಕೋಟಿ ರೂ.ಗೆ ಇಳಿಯಿತು. 2022–23 ರಲ್ಲಿ ಇದು ಮತ್ತಷ್ಟು ಕಡಿತವಾಗಿ 73,000 ಕೋಟಿ ರೂ.ಗೆ ಇಳಿಯಿತು. ಈ ಬಾರಿ ಕೇವಲ 60,000 ಕೋಟಿ ರೂ. ಮೀಸಲಿಡಲಾಗಿದೆ.

2022–23ರ ಪರಿಷ್ಕೃತ ಅಂದಾಜಿನ 89,400 ಕೋಟಿ ರೂ.ಗಳಿಗಿಂತ ಸುಮಾರು ಶೇ. 32 ರಷ್ಟು ಹಂಚಿಕೆಯನ್ನು ಈ ಬಾರಿ ಕಡಿತಗೊಳಿಸಿದ್ದಾರೆ. ಇದು ಅಂದಾಜಿಗಿಂತಲೂ ಸುಮಾರು 30,000 ಕೋಟಿ ರೂ.ಗಳಷ್ಟು ಕಡಿಮೆ ಹಂಚಿಕೆಯಾಗಿದೆ. 2020–21ರ 1.11 ಲಕ್ಷ ಕೋಟಿ ರೂ.ಗಳಿಗೆ ಹೋಲಿಸಿದರೆ, ಇದು ಅರ್ಧದಷ್ಟು ಕಡಿಮೆಯಾಗಿದೆ.

ಇದು ಅಮೃತ ಕಾಲ

ತೆರೆಯುವ ಈ 'ಅಮೋಘ ಇವೆಂಟ್'!



ಇದು ಆಗಸ್ಟ್ 10ರಂದು ಟೈಂಸ್ ಆಫ್ ಇಂಡಿಯ ದೈನಿಕದ ವ್ಯಂಗ್ಯಚಿತ್ರಕಾರ ಸಂದೀಪ ಅಧ್ವರ್ಯು ತನ್ನ ಫೇಸ್‌ಬುಕ್ ಪುಟದಲ್ಲಿ ಹಾಕಿದ ಚಿತ್ರ–.

"ಅಮೋಘ ತೆರೆಯುವಿಕೆ"!

ಅಮೋಘವಾದದ್ದು ಏನು ತೆರೆಯಲಿತ್ತು?

'ಬಾಯಿ'!

ಹೌದು, ದೇಶದ ಪ್ರಧಾನ ಮಂತ್ರಿಗಳ ಬಾಯಿ. ಅಂದು ಸಂಸತ್ತಿನಲ್ಲಿ ಪ್ರಧಾನ ಮಂತ್ರಿಗಳು ಕೊನೆಗೂ ಬಾಯಿ ತೆರೆಯಬೇಕಾಗಿತ್ತು– ಮಣಿಪುರದ ಹಿಂಸಾಚಾರದ ಬಗ್ಗೆ. ಜುಲೈ 20ರಂದು, ಮಣಿಪುರದಲ್ಲಿ ಹಿಂಸಾಚಾರ ಭುಗಿಲೆದ್ದ 79ದಿನಗಳ ನಂತರ, ಅದೂ ಜುಲೈ 18ರಂದು ಈ ಹಿಂಸಾಚಾರದ ಭೀಕರತೆಯನ್ನು ಪ್ರತಿನಿಧೀಕರಿಸಿದ ಒಂದು ವೀಡಿಯೋ ಬಯಲಾಗಿ ದೇಶದ ಸರ್ವೋಚ್ಚ ನ್ಯಾಯಾಲಯವೇ ಅಲ್ಲಿನ ಡಬಲ್ ಇಂಜಿನ್ ಸರಕಾರವನ್ನು ತರಾಟೆಗೆ ತಗೊಳ್ಳುವಂತಾದಾಗ, ಅವರು ಸಂಸತ್ತಿನ ಹೊರಗೆ 30 ಸೆಕೆಂಡುಗಳ ಕಾಲ ಈ ಬಗ್ಗೆ ಬಾಯಿ ತೆರೆದಿದ್ದರು–ಬಹುಶಃ ನಿರ್ವಾಹವಿಲ್ಲದೆ. ನಂತರ ಈ ಹಿಂಸಾಚಾರದ ಭೀಕರತೆಗಳು, ಅದರ ಹಿಂದಿದ್ದ ಹುನ್ನಾರಗಳೂ ಒಂದೊಂದಾಗಿ ಬಯಲಾಗುತ್ತಿದ್ದಾಗ, ಹಿಂಸಾಚಾರ ಮುಂದುವರೆಯುತ್ತಲೇ ಇದ್ದಾಗ, ಸಂಸತ್ತಿನಲ್ಲಿ ಜನಪ್ರತಿನಿಧಿಗಳು ಈ ಬಗ್ಗೆ ಆತಂಕ ವ್ಯಕ್ತಪಡಿಸುತ್ತಿದ್ದಾಗ ಅವರು ಸಂಸತ್ತಿಗೂ ಬರಲಿಲ್ಲ, ಮತ್ತೆ ಬಾಯಿ ತೆರೆಯಲೂ ಇಲ್ಲ.

ಪ್ರತಿಪಕ್ಷಗಳು, ತಮ್ಮ ಸಂಖ್ಯಾ ಬಲಹೀನತೆಯ ಅರಿವಿದ್ದರೂ, ಅವರು ಸದನಕ್ಕೆ ಬರುವಂತೆ ಮತ್ತು ಬಾಯಿ ತೆರೆಯುವಂತೆ ಮಾಡಲು ಅವಿಶ್ವಾಸ ಠರಾವನ್ನು ಮಂಡಿಸಿದರು. ಕೊನೆಗೂ ಲೋಕಸಭಾಧ್ಯಕ್ಷರು ಆಗಸ್ಟ್ 8ರಿಂದ ಇದರ ಮೇಲೆ ಚರ್ಚೆ ನಡೆಯುತ್ತದೆ, ಆಗಸ್ಟ್ 10ರಂದು ಪ್ರಧಾನಿಗಳು ಅದಕ್ಕೆ ಉತ್ತರ ನೀಡುತ್ತಾರೆ ಎಂದು ನಿರ್ಧರಿಸಬೇಕಾಗಿ ಬಂತು. ಪ್ರತಿಪಕ್ಷಗಳ ಕಾರ್ಯತಂತ್ರ ಅಷ್ಟರ ಮಟ್ಟಿಗೆ ಸಫಲವಾಯಿತು.

ವಸಾಹತುಶಾಹಿಯಿಂದ ಸ್ವತಂತ್ರವಾಗಿ 77ನೇ ವರ್ಷಕ್ಕೆ ಕಾಲಿಡುವ ಸಮಯದಲ್ಲಿ ದೇಶದ ಪ್ರಧಾನಿ ಸಂಸತ್ತಿಗೆ ಬಂದು ಬಾಯಿ ತೆರೆಯುವುದನ್ನು ಸಂಭ್ರಮಿಸಬೇಕಾಗಿ ಬಂದಿರುವ ಪರಿಸ್ಥಿತಿ ಏರ್ಪಟ್ಟಿರುವುದನ್ನು ಈ ವ್ಯಂಗ್ಯಚಿತ್ರ ಬಿಂಬಿಸಿದೆ.

ಪ್ರತಿಪಕ್ಷಗಳ ಸದಸ್ಯರು ಈ ಚರ್ಚೆಯಲ್ಲಿ ಮುಖ್ಯವಾಗಿ ಮಣಿಪುರದಲ್ಲಿ ಮೂರು ತಿಂಗಳ ನಂತರವೂ ಡಬಲ್ ಇಂಜಿನ್ ಸರಕಾರಗಳು ಹಿಂಸಾಚಾರ ತಡೆಯುವಲ್ಲಿ ಶೋಚನೀಯವಾಗಿ ವಿಫಲವಾಗಿರುವುದು ಏಕೆ ಎಂದು ಪ್ರಶ್ನಿಸಿದರು.

ಸಿಪಿಐ(ಎಂ)ನ ಸದಸ್ಯ ಎ.ಎಂ. ಆರಿಫ್ ಮಾತಾಡುತ್ತ ಈ ಪ್ರಧಾನಿ ನಮ್ಮ ಸಂಸದೀಯ ಇತಿಹಾಸದಲ್ಲೇ ಸದನದಲ್ಲಿ ಅತೀ ಕಡಿಮೆ ಹಾಜರಾತಿಯ ದಾಖಲೆ ನಿರ್ಮಿಸಿದ್ದಾರೆ ಎಂದರು. 'ವಿಶ್ವಗುರು' ಆಗಬಯಸುವ ದೇಶದ ಪ್ರಧಾನಿಗಳು ವಿಭಜನೆಯ ಮುಖಂಡರು ಎಂದು ಜಗತ್ತಿನ ಮಾಧ್ಯಮಗಳು ಹೇಳುವ ಪರಿಸ್ತಿತಿ ಬಂದಿದೆ. ಮಣಿಪುರದಲ್ಲಿ ಕಂಡಿರುವ ವಿಭಜನೆಯಿಂದ ರಾಜಕೀಯ ಲಾಭ ಪಡೆಯುವ ಪ್ರವೃತ್ತಿ ಈಗ ಹರ್‍ಯಾಣಕ್ಕೂ ವಿಸ್ತರಿಸಿದೆ ಎಂದ ಅವರು ಏಕರೂಪದ ನಾಗರಿಕ ಸಂಹಿತೆಯನ್ನು ತರುವ ಪ್ರಯತ್ನದ ಹಿಂದೆಯೂ ಇದೇ ಪ್ರವೃತ್ತಿ ಇದೆ ಎಂದರು. ಪರಿಸ್ಥಿತಿ ಎಂತಹ ಮಟ್ಟವನ್ನು ತಲುಪಿದೆಯೆಂದರೆ ಸುಪ್ರಿಂ ಕೋರ್ಟ್ ಮಧ್ಯಪ್ರವೇಶಿಸಿ ಅಲ್ಲಿ ಕಾನೂನು ವ್ಯವಸ್ಥೆ ಮತ್ತು ಸಂವಿಧಾನಿಕ ಏರ್ಪಾಟು ಮುರಿದು ಬಿದ್ದಿದೆ ಎನ್ನುತ್ತ ಅತ್ಯಾಚಾರಗಳ ತನಿಖೆಯನ್ನು ಮಹಾರಾಷ್ಟ್ರದ ನಿವೃತ್ತ ಡಿಜಿಪಿಗೆ ವಹಿಸಿದೆ ಎಂಬ ಸಂಗತಿಯತ್ತ ಆರಿಫ್ ಗಮನ ಸೆಳೆದರು.

ಅತ್ತ ಗೃಹಮಂತ್ರಿಗಳು ಸೇರಿದಂತೆ ಆಳುವ ಕೂಟದ ಸದಸ್ಯರು ಇಂತಹ ಸಂಪೂರ್ಣ ವಿಫಲತೆಯಿಂದ ಗಮನವನ್ನು ಬೇರೆಡೆಗೆ ತಿರುಗಿಸುವ ಪ್ರಯತ್ನ ನಡೆಸಿದರು. ಪ್ರಧಾನಮಂತ್ರಿಗಳು ಕೂಡ ಇದೇ ಜಾಡಿನಲ್ಲಿ ಮುಂದುವರೆದು ಚುನಾವಣಾ ಪ್ರಚಾರದ ಶೈಲಿಯಲ್ಲೇ ಮಾತಾಡಿದರು ಎಂದು ವರದಿಯಾಗಿದೆ; ಒಂದೂವರೆ ಗಂಟೆ ಕಳೆದರೂ ಮಣಿಪುರದ ಪ್ರಸ್ತಾಪವೇ ಬರದಿರುವುದನ್ನು ಪ್ರತಿಭಟಿಸಿ ಪ್ರತಿಪಕ್ಷಗಳ ಸದಸ್ಯರು ಸಭಾತ್ಯಾಗ ಮಾಡಿದ ಮೇಲೆ ಮಣಿಪುರದ ಬಗ್ಗೆ ಮಾತು ಆರಂಭಿಸಿದರು. ರಾಜಕೀಯ ವಿಶ್ಲೇಷಕರೆಲ್ಲರೂ ಗಮನಿಸಿದ ಸಂಗತಿಯೆಂದರೆ ಒಟ್ಟು ಎರಡು ಗಂಟೆಗಳ ಭಾಷಣದಲ್ಲಿ ದೇಶದ ಸರ್ವೋಚ್ಚ ನ್ಯಾಯಾಲಯವೂ ಗಂಭೀರವಾಗಿ ಪರಿಗಣಿಸಿದ ಮಣಿಪುರದ ಸನ್ನಿವೇಶಕ್ಕೆ ಪ್ರಧಾನಿಗಳು ಕೊಟ್ಟದ್ದು 10 ನಿಮಿಷಕ್ಕಿಂತಲೂ ಕಡಿಮೆ– ಅದೂ ಔಪಚಾರಿಕ ಆಶಯಗಳಷ್ಟೇ–ಮೂರ್ತವಾದ ಭರವಸೆಗಳನ್ನೇನೂ ಕೊಡಲಿಲ್ಲ.

ನಿಜ, ಹಿಂಸಾಚಾರದಲ್ಲಿ ಸತ್ತವರಲ್ಲಿ 'ದಾವೇದಾರರಿಲ್ಲದ ಹೆಚ್ಚಿನ ಹೆಣಗಳು ನುಸುಳು ಕೋರರದ್ದು 'ಎಂದು ಕೇಂದ್ರ ಸರಕಾರದ ಪರವಾಗಿ ಸಾಲಿಸಿಟರ್ ಜನರಲ್ ಸುಪ್ರಿಂ ಕೋರ್ಟಿಗೆ ವಿಚಾರಣೆ ವೇಳೆಯಲ್ಲಿ ತಪ್ಪು ಮಾಹಿತಿ ನೀಡಿದ್ದಾರೆ ಎಂದು ಬಂದಿರುವ ಪ್ರತಿಭಟನೆಗಳ ಬಗ್ಗೆಯಾಗಲೀ, ಆಳುವ ಪಕ್ಷ ಪ್ರಚಾರ ಮಾಡುವಂತೆ ಇದು ಮಾದಕ ಪದಾರ್ಥಗಳ ಕಳ್ಳವ್ಯಾಪಾರವನ್ನು ನಿಗ್ರಹಿಸಲು ಮಾಡಿದ ಪ್ರಯತ್ನದಿಂದಾಗಿ ಉಂಟಾದ ಸಮಸ್ಯೆಯಲ್ಲ, ಏಕೆಂದರೆ ಸ್ವತಃ ಮುಖ್ಯಮಂತ್ರಿಗಳೇ ಈ ವಿದ್ಯಮಾನದ ಭಾಗವಾಗಿದ್ದಾರೆ ಎಂದು ಈ ಬಗ್ಗೆ ತನಿಖೆ ನಡೆಸಿರುವ ಅಲ್ಲಿಯ ಒಬ್ಬ ಮಾಜೀ ಪೋಲಿಸ್ ಅಧಿಕಾರಿಯೇ ಸ್ಪಷ್ಟವಾಗಿ ಹೇಳಿರುವುದರ ಬಗ್ಗೆಯಾಗಲೀ ಪ್ರಧಾನಿಗಳು 'ಸ್ಪಷ್ಟೀಕರಣ' ನೀಡುತ್ತಾರೆ ಎಂಬ ನಿರೀಕ್ಷೆಯಂತೂ ಬಹುಶಃ ಯಾರಿಗೂ ಇರಲಿಲ್ಲ. ಅದೇ ರೀತಿ ಮುಂಬೈ ಸೆಂಟ್ರಲ್ ಎಕ್ಸ್‌ಪ್ರೆಸ್ ನಲ್ಲಿ ಮೂವರು ಮುಸ್ಲಿಂ ಪ್ರಯಾಣಿಕರನ್ನು ಗುಂಡಿಕ್ಕಿ ಕೊಂದು, ಅದಕ್ಕೆ ಸಮರ್ಥನೆ ಎಂಬಂತೆ ತನ್ನ ಹೆಸರೆತ್ತಿದ ಆರ್‌ಪಿಎಫ್ ಜವಾನನ ಮಾತನ್ನು ಖಡಾಖಂಡಿತವಾಗಿ ಖಂಡಿಸಲು ಈ ಸಂದರ್ಭವನ್ನಾದರೂ ಬಳಸುತ್ತಾರೆ ಎಂಬುದನ್ನು ಕೂಡ.

ಸುಸ್ತಿಕೋರರಿಗೆ ಸಾಲ ಮನ್ನಾ–ಸಾಮಾನ್ಯ ಗ್ರಾಹಕರಿಂದ 'ದಂಡ' ವಸೂಲಿ


ಬ್ಯಾಂಕುಗಳು ಕಳೆದ 9 ವರ್ಷಗಳಲ್ಲಿ(ಅಂದರೆ ಅಚ್ಛೇ ದಿನ್, ನಯಾಭಾರತ್ ಮತ್ತು ಅಮೃತ ಕಾಲದಲ್ಲಿ) ಒಟ್ಟು 14.56 ಲಕ್ಷ ಕೋಟಿ ರೂ.ಗಳ ಕೆಟ್ಟ ಸಾಲಗಳನ್ನು ಬ್ಯಾಂಕ್ ಲೆಕ್ಕಾಚಾರದಿಂದ ತೆಗೆದು ಹಾಕಿದೆ. ಇದರಲ್ಲಿ ಅರ್ಧದಷ್ಟು, ಅಂದರೆ 7,41 ಲಕ್ಷ ಕೋಟಿ ರೂ. ದೊಡ್ಡ ಉದ್ದಿಮೆಗಳವರು ಮರುಪಾವತಿ ಮಾಡದ ಸಾಲಗಳು. ಆಗಸ್ಟ್ 7ರಂದು ಸಂಸತ್ತಿನ ಮುಂದೆ ಸರಕಾರವೇ ಮಂಡಿಸಿದ ಅಂಕಿ–ಅಂಶಗಳಿವು.

ಇದು ಮನ್ನಾ ಮಾಡಿದ ಸಾಲಗಳಲ್ಲ ಎಂದು ಸರಕಾರ ಹೇಳಿಕೊಳ್ಳುತ್ತದೆ. ಆದರೆ ಸಾಮಾನ್ಯವಾಗಿ ಇದರಲ್ಲಿ ವಸೂಲಿಯಾಗುವ ಮೊತ್ತ ಬಹಳ ಕಡಿಮೆ. ಈ 9 ವರ್ಷಗಳಲ್ಲಿ ಅವು 2.05 ಲಕ್ಷ ಕೋಟಿ ರೂ.ಗಳಷ್ಟು ಮಾತ್ರ ವಸೂಲಿ ಮಾಡಿವೆ.

ಹಣಕಾಸು ಇಲಾಖೆ ಸಂಸತ್ತಿಗೆ ನೀಡಿದ ಇನ್ನೊಂದು ಮಾಹಿತಿಯ ಪ್ರಕಾರ 2018ರಿಂದೀಚೆಗೆ ಕಳೆದ 4 ವರ್ಷಗಳಲ್ಲಿ ಬ್ಯಾಂಕುಗಳು ಕನಿಷ್ಠ ಬ್ಯಾಲೆನ್ಸ್ ನಿರ್ವಹಣೆ, ಹೆಚ್ಚುವರಿ ಎಟಿಎಂ ವಹಿವಾಟುಗಳು ಮತ್ತು ಎಸ್‌ಎಂಎಸ್ ಸೇವೆಗಳಿಗೆಂದು ಸಾರ್ವಜನಿಕ ವಲಯದ ಬ್ಯಾಂಕ್‌ಗಳು ಮತ್ತು 5 ಪ್ರಮುಖ ಖಾಸಗಿ ವಲಯದ ಬ್ಯಾಂಕ್‌ಗಳು ರೂ. 35,000 ಕೋಟಿಗೂ ಹೆಚ್ಚು ಶುಲ್ಕವನ್ನು ಸಂಗ್ರಹಿಸಿವೆ. ಇವುಗಳಲ್ಲಿ ಖಾತೆಗಳಲ್ಲಿ ಕನಿಷ್ಠ ಬ್ಯಾಲೆನ್ಸ್ ನಿರ್ವಹಣೆ ಮಾಡದ ಕಾರಣದಿಂದ ವಸೂಲಿ ಮಾಡಿದ್ದು ರೂ.21,000 ಕೋಟಿ, ಹೆಚ್ಚುವರಿ ಎಟಿಎಂ ವಹಿವಾಟು ನಡೆಸಿದ ಕಾರಣಕ್ಕೆ ರೂ.8,000 ಕೋಟಿ ಹಾಗೂ ಎಸ್‌ಎಂಎಸ್ ಶುಲ್ಕವಾಗಿರೂ.6,000 ಕೋಟಿ.

ಕನಿಷ್ಟ ಬ್ಯಾಲೆನ್ಸ್ ಅನ್ನು ನಿರ್ವಹಿಸುವುದು ಎಂದರೆ ಗ್ರಾಹಕರು ಪ್ರತಿ ತಿಂಗಳು ತಮ್ಮ ಖಾತೆಯಲ್ಲಿ ಇರಬೇಕಾದ ಕನಿಷ್ಟ ಮೊತ್ತ. ಇದು ಮಹಾನಗರಗಳಲ್ಲಿ ರೂ.3,000–10,000, ನಗರ ಪ್ರದೇಶಗಳಲ್ಲಿ ರೂ.2,000–5,000 ಮತ್ತು ಗ್ರಾಮೀಣ ಪ್ರದೇಶದಲ್ಲಿ ರೂ.500–1,000 ವರೆಗೆ ಇರುತ್ತದೆ. ಕನಿಷ್ಠ ಮೊತ್ತ ಇಲ್ಲದಿಇದ್ದರೆ ರೂ.400–500 ರವರೆಗಿನ ದಂಡ ಶುಲ್ಕಗಳನ್ನು ವಿಧಿಸಲಾಗುತ್ತದೆ.

'ಉದಾರೀಕರಣ'ದ ವೊದಲು ಸಾರ್ವಜನಿಕ ವಲಯುದ ಬ್ಯಾಂಕುಗಳು ಗ್ರಾಹಕರಿಂದ ಯಾವುದೆ ಶುಲ್ಕ ಪಡೆಯದೆ ಸೇವೆಯನ್ನು ಒದಗಿಸುತ್ತಿದ್ದವು. ಆದರೆ ಈಗೀಗ ಈ ಬ್ಯಾಂಕ್‌ಗಳು ಕೂಡಾ ಗ್ರಾಹಕರನ್ನು ಲೂಟಿ ಮಾಡುವಲ್ಲಿ ಕೈಜೋಡಿಸಿವೆ. ಗ್ರಾಹಕರು ಈಗ ಪ್ರತಿಯೊಂದಕ್ಕೂ ಶುಲ್ಕ ಪಾವತಿ ಮಾಡಬೇಕಾದ ಸ್ಥಿತಿಯಿದೆ.



ವ್ಯಂಗ್ಯಚಿತ್ರ: ಪಿ.ಮಹಮ್ಮದ್, ಫೇಸ್ ಬುಕ್

ಮಣಿಪುರದ ಜನಗಳ ನೋವಿಗೆ ಪರಿಹಾರ ಕೇಳಿದರೆ
ಕಾಂಗ್ರೆಸ್ ವಿಫಲತೆಗಳ ಜಪ-9 ವರ್ಷಗಳ ನಂತರವೂ!



ವ್ಯಂಗ್ಯಚಿತ್ರ: ಅಲೋಕ್ ನಿರಂತರ್, ಸಕಾಳ್

ಚುನಾವಣಾ ಆಯೋಗದ ಮೇಲೆ ಹತೋಟಿಯ ಮೋದಿ ಸರಕಾರದ ನಡೆ

ಸುಪ್ರಿಂ ಕೋರ್ಟ್ ತೀರ್ಪುಗಳನ್ನು ಅಲ್ಲಗಳೆದು ನ್ಯಾಯಾಂಗದ ಸ್ವಾತಂತ್ರ್ಯವನ್ನು ದುರ್ಬಲಗೊಳಿಸುವ ಹುನ್ನಾರ

ಸುಪ್ರೀಂ ಕೋರ್ಟ್‌ನ ತೀರ್ಪುಗಳನ್ನು ಅಲ್ಲಗಳೆಯುವ ಮೂಲಕ ಮೋದಿ ಸರ್ಕಾರವು ಸಂವಿಧಾನಾತ್ಮಕವಾಗಿ ಆದೇಶಿಸಿರುವ ನ್ಯಾಯಾಂಗದ ಸ್ವಾತಂತ್ರ್ಯವನ್ನು ದುರ್ಬಲಗೊಳಿಸುತ್ತಿರುವ ವಿಧಾನವನ್ನು ಅನುಸರಿಸುತ್ತಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಬಲವಾಗಿ ಖಂಡಿಸಿದೆ.

ಸುಪ್ರೀಂ ಕೋರ್ಟ್‌ನ ಒಂದು ಸಂವಿಧಾನ ಪೀಠವು ತನ್ನ ತೀರ್ಪಿನಲ್ಲಿ, ಮುಖ್ಯ ಚುನಾವಣಾ ಆಯುಕ್ತರು ಮತ್ತು ಚುನಾವಣಾ ಆಯುಕ್ತರುಗಳನ್ನು ಪ್ರಧಾನ ಮಂತ್ರಿ, ಲೋಕಸಭೆಯ ವಿರೋಧ ಪಕ್ಷದ ನಾಯಕ ಮತ್ತು ಭಾರತದ ಮುಖ್ಯ ನ್ಯಾಯಾಧೀಶರನ್ನು ಒಳಗೊಂಡ ಸಮಿತಿಯು ನೇಮಿಸಬೇಕು ಎಂದು ಹೇಳಿತ್ತು. ಮೋದಿ ಸರ್ಕಾರವು ಮಂಡಿಸಿರುವ ಮಸೂದೆಯಲ್ಲಿ, ಭಾರತದ ಮುಖ್ಯ ನ್ಯಾಯಾಧೀಶರ ಜಾಗದಲ್ಲಿ "ಪ್ರಧಾನ ಮಂತ್ರಿ ನಾಮನಿರ್ದೇಶನ ಮಾಡುವ ಒಬ್ಬ ಕೇಂದ್ರ ಸಂಪುಟ ಮಂತ್ರಿ" ಎಂದು ಸೇರಿಸಲಾಗಿದೆ. ಕಾರ್ಯಾಂಗದ ಬಹುಮತದ ಅಭಿಪ್ರಾಯವೇ ಮೇಲುಗೈ ಸಾಧಿಸಬೇಕೆಂಬುದನ್ನು ಇದು ಖಚಿತಪಡಿಸುತ್ತದೆ. ಇದು ಚುನಾವಣಾ ಆಯೋಗದ ನಿಷ್ಪಕ್ಷಪಾತತೆ ಮತ್ತು ಸ್ವಾತಂತ್ರ್ಯವನ್ನು ಧ್ವಂಸಗೊಳಿಸುತ್ತದೆ. ಭಾರತದ ಸಂವಿಧಾನವು "ಮುಕ್ತ ಮತ್ತು ನ್ಯಾಯಯುತ ಚುನಾವಣೆಗಳನ್ನು" ನಡೆಸಲು ಕಾಂರ್ಯಾಂಗದ ಒತ್ತಡಗಳು ಮತ್ತು ಪ್ರಭಾವದಿಂದ ಸ್ವತಂತ್ರವಾದ ನಿಷ್ಪಕ್ಷಪಾತ ಚುನಾವಣಾ ಆಯೋಗ ಇರಬೇಕು ಎಂದು ಆದೇಶಿಸಿದೆ.

ಕೇಂದ್ರ ಸರಕಾರದ ಈ ನಡೆ ದಿಲ್ಲಿಸರ್ಕಾರದ ಅಧಿಕಾರದ ಕುರಿತು ಸುಪ್ರೀಂ ಕೋರ್ಟ್‌ನ ಮತ್ತೊಂದು ಸಾಂವಿಧಾನಿಕ ಪೀಠದ ತೀರ್ಪನ್ನು ಅಲ್ಲಗಳೆದಿರುವ ಬೆನ್ನಲ್ಲೇ ಬಂದಿದೆ. ಮೋದಿ ಸರ್ಕಾರವು ಮೊದಲು ,ಈ ತೀರ್ಪನ್ನು ಅನೂರ್ಜಿತಗೊಳಿಸುವ ಸುಗ್ರೀವಾಜ್ಞೆಯನ್ನು ಹೊರಡಿಸಿತ್ತು, ನಂತರ ಅದನ್ನು ಸಂಸತ್ತಿನಲ್ಲಿ ಇದನ್ನು ಶಾಸನವನ್ನು ಮಾಡಲಾಯಿತು.

ಪ್ರಭುತ್ವದ ಸ್ವತಂತ್ರ ಅಂಗಗಳನ್ನು ನಿಯಂತ್ರಿಸುವ ಮೋದಿ ಸರ್ಕಾರದ ಧಾವಂತ ಅಸಹ್ಯಕರವಾಗಿದೆ. ಸಂಸತ್ತಿನಲ್ಲಿ ಮಂಡಿಸಲಾದ ಈ ಮಸೂದೆಯನ್ನು ಸಿಪಿಐ(ಎಂ) ಬಲವಾಗಿ ವಿರೋಧಿಸುತ್ತದೆ ಎಂದಿರುವ ಪೊಲಿಟ್‌ಬ್ಯುರೊ ಭಾರತದ ಸಂವಿಧಾನವನ್ನು ರಕ್ಷಿಸಲು ಮತ್ತು ಎತ್ತಿಹಿಡಿಯಲು ಬದ್ಧವಾಗಿರುವ ಎಲ್ಲಾ ಪಕ್ಷಗಳು ಈ ಮಸೂದೆಯನ್ನು ಸೋಲಿಸಲು ಮುಂದೆ ಬರಬೇಕೆಂದು ಕರೆ ನೀಡಿದೆ.



‘ಸಾರ್ವತ್ರಿಕ ಮೂಲ ಆದಾಯ’ದ ಪ್ರಶ್ನೆ ಮೊಟ್ಟೆಗಳನ್ನು ಒಡೆಯದೆ ಆಮ್ಲೆಟ್..?

ಅನೇಕ ಅರ್ಥಶಾಸ್ತ್ರಜ್ಞರು ಭಾರತಕ್ಕೆ ಒಂದು ಸಾರ್ವತ್ರಿಕ ಮೂಲ ಆದಾಯವನ್ನು ಪ್ರತಿಪಾದಿಸುತ್ತಿದ್ದಾರೆ, ಇದನ್ನು 2016–17ರ ಅಧಿಕೃತ ಆರ್ಥಿಕ ಸಮೀಕ್ಷೆಯಲ್ಲಿಯೂ ಸಹ ಪ್ರಸ್ತಾಪಿಸಲಾಗಿದೆ. ನಿಜ, ಈ ನಿಟ್ಟಿನಲ್ಲಿ ಪ್ರಾಯೋಗಿಕ ಪ್ರಸ್ತಾವಗಳು ವಿಭಿನ್ನವಾಗಿವೆ, ಕೆಲವು ನಿರ್ದಿಷ್ಟ ಆದಾಯಕ್ಕಿಂತ ಕೆಳಗಿನ ಎಲ್ಲಾ ವ್ಯಕ್ತಿಗಳಿಗೆ ಸಾಮಾನ್ಯ ಸಾರ್ವತ್ರಿಕ (ನಗದು) ವರ್ಗಾವಣೆಯನ್ನು ಮಾಡಬೇಕು ಎಂದು ಸೂಚಿಸುತ್ತವೆ; ಇತರ ಕೆಲವು ವ್ಯಕ್ತಿಯ ಪರಿಸ್ಥಿತಿ ಎಷ್ಟು ಕೆಟ್ಟದಾಗಿರುತ್ತದೆ ಎಂಬುದರ ಆಧಾರದ ಮೇಲೆ ಶ್ರೇಣೀಕೃತ ವರ್ಗಾವಣೆಯನ್ನು ಸೂಚಿಸುತ್ತವೆ. ಆದರೆ ಇದರ ಹಿಂದಿರುವುದು–ಪ್ರತಿಯೊಬ್ಬ ನಾಗರಿಕನು/ಳು ಸೂಕ್ತ ಸರ್ಕಾರಿ ಹಣ ವರ್ಗಾವಣೆಗಳ ಮೂಲಕ ಒಂದು ನಿರ್ದಿಷ್ಟ ಮೂಲಭೂತ ಕನಿಷ್ಠ ಮಟ್ಟದ ಹಣದ ಆದಾಯವನ್ನು ಹೊಂದಿರುವಂತಹ, ಮತ್ತು ಅದು ಕನಿಷ್ಠ ಜೀವನಮಟ್ಟವನ್ನು ಖಾತ್ರಿಪಡಿಸುವ ಸರಕುಗಳ ಒಂದು ಸಂಚಯದ ಮೇಲೆ ಅವರಿಗೆ ಅಧಿಕಾರ ಕೊಡುವಂತಿರಬೇಕು ಎಂಬ ಒಂದು ಸಮಾಜದ ಕಣ್ಣೋಟ.

ಈ ವಿಚಾರಕ್ಕೆ, ಅದರ ಪರಿಕಲ್ಪನೆಗೆ ಸಂಬಂಧಪಟ್ಟಂತೆ ಆಕ್ಷೇಪಣೆಗಳಿವೆ. ಸರಕಾರದ ಆರ್ಥಿಕ ಸಮೀಕ್ಷೆಯು ಇವನ್ನು ವಿವರವಾಗಿ ಪರಿಶೀಲಿಸಿದೆ. ಅಂತಹ ವರ್ಗಾವಣೆಗಳು ಜನರು ಶ್ರಮ ಪಡದಿರುವಂತೆ ನಿರುತ್ತೇಜನೆ ಹರಡುತ್ತವೆ ಎಂಬುದು ಪ್ರಾಥಮಿಕ ಆಕ್ಷೇಪ. ಯಾವುದೇ ಶ್ರಮಪಡದೆ ಕನಿಷ್ಠ ಆದಾಯವನ್ನು ಪಡೆಯಬಹುದಾದರೆ, ಆದಾಯವನ್ನು ಗಳಿಸಲು ಯಾವುದೇ ಪ್ರಯತ್ನವನ್ನು ಏಕೆ ಮಾಡಬೇಕು? ಆದರೆ ಇಂತಹ ಆಕ್ಷೇಪಣೆ ಮಾಡುವವರು ಒಬ್ಬ ವ್ಯಕ್ತಿಯ ಆದಾಯವು ಅವನ ಪ್ರಯತ್ನವನ್ನಷ್ಟೇ ಪ್ರತಿಬಿಂಬಿಸುವಂತಹ ಸಮಾಜವನ್ನು ನಾವು ಹೊಂದಿದ್ದೇವೆ ಎಂದು ಭಾವಿಸುತ್ತಾರೆ. ಇದರಿಂದಾಗಿ ಯಾವುದೇ ಮಧ್ಯಪ್ರವೇಶವು (ಸಾರ್ವತ್ರಿಕ ಮೂಲ ಆದಾಯದ ರೂಪದಲ್ಲಿ) ಸಮಾಜ ಮಾಡಿಕೊಂಡಿರುವ ಈ ಏರ್ಪಾಟನ್ನು ವ್ಯವಸ್ಥೆಯನ್ನು ತಲೆಕೆಳಗು ಮಾಡಬಹುದು. ಆದರೆ ಇದು ಅಸಂಬದ್ಧ ಭಾವನೆ. ಏಕೆಂದರೆ ಶ್ರೀಮಂತರು ಯಾವುದೇ ಶ್ರಮವಿಲ್ಲದೆ ಅಪಾರ ಆದಾಯಗಳನ್ನು ಪಡೆಯುತ್ತಾರೆ, ಆದರೆ ಬಡವರು ಹಿಡಿ ಕೂಳಿಗಾಗಿ ಜೀವ ತೇಯುತ್ತಾರೆ.

ವಾಸ್ತವವಾಗಿ, ಅತ್ಯಂತ ದಣಿವಿನ ಮತ್ತು ಅಪಾಯದ ವೃತ್ತಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಆ ದಣಿವನ್ನು ಸರಿದೂಗಿಸುವಂತಹ ಉತ್ತಮ ಆದಾಯವನ್ನು ಪಡೆಯುತ್ತಾರೆ ಎಂಬ ಆಡಮ್ ಸಿತ್‌ರವರ ಸಿದ್ಧಾಂತಕ್ಕೆ ತದ್ವಿರುದ್ಧವಾಗಿ ಜಾನ್ ಸ್ಟುವರ್ಟ್ ಮಿಲ್, ಇಂತಹ ಕಾರ್ಮಿಕರು ನಿಜವಾಗಿಯೂ ಅತಿ ಕಡಿಮೆ ಸಂಬಳ ಪಡೆಯುವವರಾಗಿರುವುದು ಕಂಡು ಬಂದಿದೆ ಎಂದಿದ್ದಾರೆ. ಇಂತಹ ಸಂದರ್ಭದಲ್ಲಿ ಸಾರ್ವತ್ರಿಕ ಮೂಲ ಆದಾಯವು ಕೆಲಸ ಮಾಡದಿರುವುದಕ್ಕೆ ಆದಾಯವನ್ನು ಒದಗಿಸುವುದಿಲ್ಲ, ಬದಲಿಗೆ ಅತ್ಯಂತ ಬಡ ಕಾರ್ಮಿಕರ ಕೆಲಸದ ಕೂಲಿ ದರವನ್ನು ಹೆಚ್ಚಿಸುತ್ತದೆ. ಒಬ್ಬ ವ್ಯಕ್ತಿಗೆ ಯಾವುದೇ ಕೆಲಸ ಸಿಗದಿದ್ದರೆ, ಅವನು ನಿರುದ್ಯೋಗಿಯಾಗಿ ಉಳಿದಿರುವುದು ಆ ವ್ಯಕ್ತಿಯ ದೋಷವಲ್ಲ, ಬದಲಾಗಿ, ಅವನು ಯಾವ ಸಾಮಾಜಿಕ ಏರ್ಪಾಟಿನಲ್ಲಿ ವಾಸಿಸುತ್ತಿದ್ದಾನೋ ಅದರ ದೋಷವಾಗಿರುತ್ತದೆ.

ಸಾರ್ವತ್ರಿಕ ಮೂಲ ಆದಾಯವು ಒಬ್ಬ ವ್ಯಕ್ತಿ ಶ್ರಮ ಪಡದಂತೆ ನಿರುತ್ತೇಜಿತಗೊಳಿಸುತ್ತದೆ ಎಂದು ಹೇಳುವುದು, ಸಂಬಳವನ್ನು ಏರಿಸುವುದು ಜನರನ್ನು ಸೋಮಾರಿಗಳನ್ನಾಗಿ ಮಾಡುತ್ತದೆ ಎಂಬ ಬಲಪಂಥೀಯ “ಪೂರೈಕೆಯ ಕಡೆಯ” (supply-side) ಪ್ರತಿಪಾದನೆಗೆ ಸಮನಾದದ್ದು. ಅವರು "ಶ್ರೀಮಂತರು ಹೆಚ್ಚು ಕೊಟ್ಟರೆ ಉತ್ತಮವಾಗಿ ಕೆಲಸ ಮಾಡುತ್ತಾರೆ, ಬಡವರು ಕಡಿಮೆ ಕೊಟ್ಟರೆ

‘ಸಾರ್ವತ್ರಿಕ ಮೂಲ ಆದಾಯ’ ಉತ್ತಮ ಆಶಯದ ಶ್ಲಾಘನೀಯ ವಿಚಾರವಾಗಿದ್ದರೂ, ಅದು ಈಗ ಪ್ರತಿಪಾದಿಸುತ್ತಿರುವಂತೆ ಅರ್ಥಹೀನವೇ ಆಗಿದೆ. ನಿಜವಾದ ಅರ್ಥದಲ್ಲಿ ಒಂದು ಸಾರ್ವತ್ರಿಕ ಮೂಲ ಆದಾಯವನ್ನು ಒದಗಿಸಬೇಕಾದರೆ, ಅದು ಆಹಾರ, ಉದ್ಯೋಗ, ಶಿಕ್ಷಣ, ಆರೋಗ್ಯ ಮತ್ತು ಪಿಂಚಣಿಯ ಐದು ಸಾರ್ವತ್ರಿಕ ಆರ್ಥಿಕ ಹಕ್ಕುಗಳ ಸಂಚಯವಾಗಿಯಲ್ಲದೆ ಬೇರಾವ ರೀತಿಯಲ್ಲೂ ಸಾಧ್ಯವಾಗದು. ಸರ್ಕಾರ ಇವನ್ನು ಖಾತರಿಪಡಿಸುವ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದಕ್ಕೆ 2016–17ರ ಆರ್ಥಿಕ ಸಮೀಕ್ಷೆಯು ಸೂಚಿಸಿದ್ದಕ್ಕಿಂತ ಬಹಳಷ್ಟು ಹೆಚ್ಚಿನ ವೆಚ್ಚ ತಗಲುತ್ತದೆ. ಇದನ್ನು ಹೊಂದಿಸಿಕೊಳ್ಳುವುದು ಕಷ್ಟವೇನಲ್ಲ. ಆದರೆ ಇದಕ್ಕೆ ಬೂರ್ಜ್ವಾ ವ್ಯವಸ್ಥೆಯನ್ನು ಮೀರಿ ಹೋಗಬೇಕಾಗುತ್ತದೆ, ಅದರಿಂದಾಗಿ ಅದು ಉದಾರವಾದಿ ಅರ್ಥಶಾಸ್ತ್ರಜ್ಞರ ಪರಿಕಲ್ಪನೆಯನ್ನು ಮೀರಿದ ಸಂಗತಿಯೂ ಆಗುತ್ತದೆ. ಮೊಟ್ಟೆಗಳನ್ನು ಒಡೆಯದೆ ಆಮ್ಲೆಟ್ ಮಾಡಲು ಸಾಧ್ಯವಿಲ್ಲವಲ್ಲ.

ಪ್ರೊ. ಪ್ರಭಾತ್ ಪಟ್ನಾಯಕ್



ಉತ್ತಮವಾಗಿ ಕೆಲಸ ಮಾಡುತ್ತಾರೆ” ಎಂದು ಸೂಚಿಸುತ್ತಿದ್ದಾರೆಯೇ ಎನ್ನುತ್ತ ಇದನ್ನು ಉದಾರವಾದಿ ಅಮೇರಿಕನ್ ಅರ್ಥಶಾಸ್ತ್ರಜ್ಞ ಜೆ.ಕೆ. ಗಾಲ್‌ಬ್ರೇತ್ ಗೇಲಿ ಮಾಡಿದ್ದರು. ಇಂತಹ ಪ್ರತಿಪಾದನೆ ನೈತಿಕವಾಗಿ ನಿಂದನೀಯ ಮತ್ತು ವಿಶ್ಲೇಷಣಾತ್ಮಕವಾಗಿ ಸಂಪೂರ್ಣವಾಗಿ ಆಧಾರಹೀನ.

ಮೊಟ್ಟೆಗಳನ್ನು ಒಡೆಯದೆ ...

ಸಾರ್ವತ್ರಿಕ ಮೂಲ ಆದಾಯವನ್ನು ವಿರೋಧಿಸುವ ಈ ಬಲಪಂಥೀಯ ನಿಲುವಿಗೆ ವಿರುದ್ಧವಾಗಿ, ಈ ಪ್ರಸ್ತಾಪವನ್ನು ಮುಂದಿಡುವುದು ಒಂದು ಪ್ರಗತಿಪರ ಉದಾರವಾದಿ ಪ್ರತಿಪಾದನೆಯನ್ನು ತೋರಿಸುತ್ತದೆ. ಆದರೆ ಹೀಗೆ ಮುಂದಿಡುವುದರಲ್ಲಿನ ಸಮಸ್ಯೆಯೆಂದರೆ ನಿಖರವಾಗಿ ಉದಾರವಾದಿ ನಿಲುವುಗಳಲ್ಲಿ ಸಾಮಾನ್ಯವಾಗಿರುವ ಸಮಸ್ಯೆಯೇ. ಅಂದರೆ ಅದು ಮೊಟ್ಟೆಗಳನ್ನು ಒಡೆಯದೆ ಆಮ್ಲೆಟ್ ಮಾಡಲು ಬಯಸುತ್ತದೆ. ಇದು ಬಂಡವಾಳಶಾಹಿ ವ್ಯವಸ್ಥೆಯೊಳಗೇ ಕಾರ್ಯನಿರ್ವಹಿಸಲು ಬಯಸುತ್ತದೆ, ಬಂಡವಾಳಶಾಹಿಗಳನ್ನು ಹೆಚ್ಚು ಅಸಮಾಧಾನಗೊಳಿಸದೆ ಪರಿಸ್ತಿತಿಯನ್ನು ದುಡಿಯುವ ಜನರಿಗೆ ಹೆಚ್ಚು ಮಾನವೀಯವಾಗಿಸ ಬಯಸುತ್ತದೆ. ಇದರಿಂದಾಗಿ, ಇಂತಹ ಸಾರ್ವತ್ರಿಕ ಮೂಲ ಆದಾಯದ ಮೊತ್ತವು ಸಾಮಾನ್ಯವಾಗಿ ಅತ್ಯಲ್ಪವಾಗಿದ್ದರೆ, ಅದರಲ್ಲಿ ಆಶ್ಚರ್ಯವೇನಿಲ್ಲ.

ಉದಾಹರಣೆಗೆ, 2016–17 ರ ಆರ್ಥಿಕ ಸಮೀಕ್ಷೆಯು 2016–17 ರ ಬೆಲೆಗಳಲ್ಲಿ ಪ್ರತಿ ವ್ಯಕ್ತಿಗೆ ವಾರ್ಷಿಕ 7620 ರೂ.ಗಳ ವಾರ್ಷಿಕ ವರ್ಗಾವಣೆಯನ್ನು ಲೆಕ್ಕಹಾಕಿದೆ, ಇದರ ವೆಚ್ಚ ನಮ್ಮ ಜನಸಂಖ್ಯೆಯ ತುತ್ತತುದಿಯ 25ಶೇ.ವನ್ನು ಹೊರತುಪಡಿಸಿದರೆ, ದೇಶದ ಜಿಡಿಪಿಯ 4.9ಶೇ.ದಷ್ಟು ಆಗುತ್ತದೆ. 2011–12ರ ಬೆಲೆಯಲ್ಲಿ ಇದಕ್ಕೆ ಸಮನಾದ ಮೊತ್ತವನ್ನು, 2011–12ರಲ್ಲಿ ಕೆಳಗಿನ ಶೇಕಡಾ 75 ರಷ್ಟು ಜನರಿಗೆ ನೀಡಿದ್ದರೆ, ಆ ವರ್ಷದಲ್ಲಿ ಬಡತನವನ್ನು ಜನಸಂಖ್ಯೆಯ ಕೇವಲ 0.5 ಪ್ರತಿಶತಕ್ಕೆ ಇಳಿಸಬಹುದಿತ್ತು, ಅಂದರೆ, ಅದರಿಂದ ವಾಸ್ತವಿಕವಾಗಿ ಬಡತನ ನಿರ್ಮೂಲನೆಯಾಗಿಯೇ ಬಿಡುತ್ತಿತ್ತು. ಸರ್ಕಾರವು ಪ್ರಸ್ತುತ ನೀಡುವ ವಿವಿಧ ಸಬ್ಸಿಡಿಗಳನ್ನು ಕಡಿತಗೊಳಿಸುವ ಮೂಲಕ ಈ ಮೊತ್ತವನ್ನು ಒದಗಿಸಬಹುದು ಎಂದು ಸರಕಾರದ ಆರ್ಥಿಕ ಸಮೀಕ್ಷೆಯು ಸೂಚ್ಯವಾಗಿ ಶಿಫಾರಸು ಮಾಡಿತ್ತು.

ಈ ಲೆಕ್ಕಾಚಾರದಲ್ಲಿ ಮೇಲ್ನೋಟಕ್ಕೇ ಎರಡು ಸ್ಪಷ್ಟ ಸಮಸ್ಯೆಗಳು ಕಾಣುತ್ತವೆ. ಮೊದಲನೆಯದಾಗಿ, 2011–12ರ ನಿಜವಾದ ಬಡತನದ ರೇಖೆಯು, ಯೋಜನಾ ಆಯೋಗವು ಸ್ವತಃ ಪರಿಗಣಿಸಿದ ಕನಿಷ್ಠ ಅಗತ್ಯ ಕ್ಯಾಲೋರಿ ಸೇವನೆಯನ್ನು ಪರಿಗಣಿಸಿದರೆ, ಸುಮಾರು 50ಶೇ. ದಷ್ಟು ಹೆಚ್ಚಾಗಿತ್ತು. ಬಡತನವನ್ನು ನಿರ್ಮೂಲನೆ ಮಾಡುವ ಅದೇ ಉದ್ದೇಶವನ್ನು ಸಾಧಿಸಲು ಸರಳ ಲೆಕ್ಕಾಚಾರದ ಪ್ರಕಾರ ವರ್ಗಾವಣೆಯಲ್ಲಿ ಅದೇ ಪ್ರಮಾಣದಲ್ಲಿ ಹೆಚ್ಚಳವನ್ನು ಮಾಡಬೇಕೆಂದು ಇಟ್ಟುಕೊಂಡರೆ, 4.9ಶೇ. ಅಲ್ಲ, ಬದಲಿಗೆ ಜಿಡಿಪಿಯ 7.5ಶೇ.ದಷ್ಟು ವೆಚ್ಚ ಮಾಡಬೇಕಾಗುತ್ತದೆ. ಎರಡನೆಯದಾಗಿ, ಸಬ್ಸಿಡಿಗಳನ್ನು ಕಡಿತಗೊಳಿಸುವ ಮೂಲಕ ವರ್ಗಾವಣೆಗೆ ಹಣಕಾಸು ಒದಗಿಸಬೇಕಾದರೆ, ಈ ರೀತಿಯ ಹಣಕಾಸು ಒದಗಿಸುವ ವಿಧಾನದಿಂದಾಗಿಯೇ ವಸ್ತುಗಳು ಹೆಚ್ಚು ದುಬಾರಿಗೊಳ್ಳುವದರಿಂದಾಗಿ, ವರ್ಗಾವಣೆಯ ಮೊತ್ತವನ್ನು ಹೆಚ್ಚಿಸ ಬೇಕಾಗುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಆರ್ಥಿಕ ಸಮೀಕ್ಷೆಯಲ್ಲಿ ಉಲ್ಲೇಖಿಸಲಾದ ಅಂಕಿ–ಅಂಶವು ಸಂಪೂರ್ಣ ಅಸಮರ್ಪಕವಾಗುತ್ತಿತ್ತು.

ಸಾಮೂಹಿಕ ಮೂಲ ಆದಾಯವನ್ನು ಒದಗಿಸುವ ಇತರ ಸಲಹೆಗಳ ವ್ಯಾಪ್ತಿ ಸಹಜವಾಗಿ ಕಡಿಮೆ ಮಹತ್ವಾಕಾಂಕ್ಷೆಯದ್ದಾಗಿವೆ.

ಮೂಲ ಉದ್ದೇಶವೇ ಬುಡಮೇಲು

ಆದರೆ, ಇನ್ನೂ ಹೆಚ್ಚು ನಿರ್ಣಾಯಕವಾದ ಮತ್ತೊಂದು ಪರಿಗಣನೆಯಿದೆ. ಇದನ್ನು ಸಂಸತ್ತಿನ ನಿರ್ಣಯದ ಮೂಲಕ ಪರಿಚಯಿಸಲಾಗಿದೆ ಎಂದು ನಾವು ಭಾವಿಸಿದರೂ ಸಹ, ಅಂದರೆ, ಪ್ರತಿ ವರ್ಷ ನಿಗದಿತ ಬೆಲೆ–ಸೂಚ್ಯಂಕಕ್ಕೆ ಹೊಂದಿಸಿದ ನಗದು ವರ್ಗಾವಣೆಯನ್ನು ಮಾಡುತ್ತಲೇ ಇರಲು ಸರಕಾರ ಬಾಧ್ಯವಾಗಿದ್ದು, ತನ್ನ ಈ ಬಾಧ್ಯತೆಯಿಂದ ಅದು ಹಿಂದೆ ಸರಿಯುವುದಿಲ್ಲ(ಈಗ ಮನರೇಗದ ವಿಷಯದಲ್ಲಿ ಮಾಡುತ್ತಿರುವಂತೆ) ಎಂದಿಟ್ಟುಕೊಂಡರೂ ಕೂಡ, ಸಾಮಾನ್ಯವಾಗಿ ಶಿಕ್ಷಣ, ಆರೋಗ್ಯ ಮತ್ತು ಇತರ ಬಾಬ್ತುಗಳ ಮೇಲಿನ ವೆಚ್ಚವನ್ನು ಕಡಿತಗೊಳಿಸುವ ಮೂಲಕ ಈ ವರ್ಗಾವಣೆಯನ್ನು ಮಾಡುತ್ತದೆ. ಇದರರ್ಥ ಸರ್ಕಾರವು ಮಾಡಿದ ನಗದು ವರ್ಗಾವಣೆಯಿಂದ ಜನರ ಬಳಿ ಹಣ ಬಂದರೂ, ಅವರಿಗೆ ತಮ್ಮ ಮಕ್ಕಳನ್ನು ಕಳುಹಿಸಲು ಸರಿಯಾದ ಸರ್ಕಾರಿ ಶಾಲೆಗಳಿರುವದಿಲ್ಲ ಮತ್ತು ರೋಗಪೀಡಿತ ಸಂಬಂಧಿಕರನ್ನು ಸೇರಿಸಲು ಸರಿಯಾದ ಸರ್ಕಾರಿ ಆಸ್ಪತ್ರೆಗಳಿರುವದಿಲ್ಲ. ಅವರು ಹೆಚ್ಚು ಹಣ ತೆತ್ತು ಖಾಸಗಿ ಶಾಲೆಗಳು ಅಥವಾ ಖಾಸಗಿ ಆಸ್ಪತ್ರೆಗಳಿಗೆ ಹೋಗಬೇಕಾಗುತ್ತದೆ. ಆಗ ಮೂಲ ವರ್ಷದಲ್ಲಿನ ಸರಕು ಮತ್ತು ಸೇವೆಗಳ ವೆಚ್ಚಗಳ ಆಧಾರದಲ್ಲಿ ನಿಗದಿಯಾದ ನಗದು ವರ್ಗಾವಣೆ ಸಾಲದೇ ಹೋಗುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ನಿಜಬೆಲೆಗಳಲ್ಲಿ ಸಾರ್ವತ್ರಿಕ ಮೂಲ ಆದಾಯವನ್ನು ಒದಗಿಸುವ ಮೂಲ ಉದ್ದೇಶವು ಅದಕ್ಕೆ ಹಣಕಾಸು ಒದಗಿಸುವ ಪ್ರಕ್ರಿಯೆಯಲ್ಲಿಯೇ ಬುಡಮೇಲಾಗುತ್ತದೆ.

ಆದ್ದರಿಂದ, ಸಾರ್ವತ್ರಿಕ ಮೂಲ ಆದಾಯವನ್ನು ಎಲ್ಲರೂ ಪಡೆಯಬಹುದಾದ ಸಾರ್ವತ್ರಿಕ ಹಕ್ಕಾಗಿ ತೆಗೆದುಕೊಂಡರೂ, ಅದನ್ನು ಹಿಂತೆಗೆದುಕೊಳ್ಳಲು ಸರಕಾರಕ್ಕೆ ಯಾವುದೇ ಅವಕಾಶವಿಲ್ಲದಿದ್ದರೂ ಕೂಡ, ಅದನ್ನು ಸಾಧಿಸಲು ಸರ್ಕಾರವು ಮಾಡುವ ಹಣದ ವರ್ಗಾವಣೆಗಳು ವಾಸ್ತವವಾಗಿ ಅದನ್ನು ಸಾಧಿಸುವುದಿಲ್ಲ. ಆದ್ದರಿಂದ ಎಲ್ಲವನ್ನೂ ಬೆರೆಸಿದ ಒಂದು ಸಾರ್ವತ್ರಿಕ ಮೂಲ ಆದಾಯವೆಂಬ ನಗದು ವರ್ಗಾವಣೆಯ ಹಕ್ಕನ್ನು ಸ್ಥಾಪಿಸುವ ಬದಲು, ಉಚಿತವಾದ ಗುಣಮಟ್ಟದ ಶಿಕ್ಷಣದ ಹಕ್ಕು, ಉಚಿತವಾದ ಗುಣಮಟ್ಟದ ಆರೋಗ್ಯ ರಕ್ಷಣೆಯ ಹಕ್ಕು, ಆಹಾರದ ಹಕ್ಕು, ಉದ್ಯೋಗದ ಹಕ್ಕು, ವಂತಿಗೆರಹಿತವಾದ ಸಾಕಷ್ಟು ಪ್ರಮಾಣದ ವೃದ್ಧಾಪ್ಯ ಪಿಂಚಣಿ ಮತ್ತು ಅಂಗವಿಕಲತೆಯ ಸೌಲಭ್ಯ ಮಂತಾದ ವೈಯಕ್ತಿಕ ಹಕ್ಕುಗಳ ಒಂದು ಸಂಚಯವನ್ನು ಖಾತ್ರಿಪಡಿಸುವ ಶಾಸನವನ್ನು ಹೊಂದುವುದು ಉತ್ತಮ ಎಂದೇ ಹೇಳಬೇಕಾಗುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಸಾರ್ವತ್ರಿಕ ಮೂಲ ಆದಾಯದ ಹಕ್ಕು ಎಂದರೆ ಆರೋಗ್ಯದ ಹಕ್ಕು, ಶಿಕ್ಷಣದ ಹಕ್ಕು ಮತ್ತು ಇತರ ಹಕ್ಕುಗಳಂತಹ ನಿರ್ದಿಷ್ಟ ವೈಯಕ್ತಿಕ ಹಕ್ಕುಗಳ ಸಂಚಯವಲ್ಲದೆ, ಬೇರೇನೂ ಆಗಲು

ಪುಟ 15 ರಿಂದ

ಸಪ್ಟಂಬರ್ 1ರಿಂದ 7: ಬೆಲೆಯೇರಿಕೆ ವಿರುದ್ಧ ಮತ್ತು ಉದ್ಯೋಗ ಸೃಷ್ಟಿಗಾಗಿ

ಅಖಿಲ ಭಾರತ ವಾರಾಚರಣೆ: ಸಿಪಿಐ(ಎಂ) ಕೇಂದ್ರ ಸಮಿತಿ ಕರೆ

ಕಾರ್ಮಿಕ, ರೈತ, ಮಹಿಳೆಯರು ಮತ್ತು ಆದಿವಾಸಿಗಳ ಸಂಘಟನೆಗಳ ರ್‍ಯಾಲಿಗಳಿಗೆ ಬೆಂಬಲ

ಸಿಪಿಐ(ಎಂ) ಕೇಂದ್ರ ಸಮಿತಿಯು ಆಗಸ್ಟ್ 4–6, 2023 ರಂದು ನವದೆಹಲಿಯಲ್ಲಿ ಸಭೆ ಸೇರಿ ದೇಶದ ಆಗು–ಹೋಗುಗಳ ಬಗ್ಗೆ ವಿಸ್ತಾರವಾಗಿ ಚರ್ಚೆಯ ನಂತರ ಬೆಲೆ ಏರಿಕೆ ವಿರುದ್ಧ ಮತ್ತು ಉದ್ಯೋಗ ಸೃಷ್ಟಿಗಾಗಿ ಸಪ್ಟಂಬರ್ 1ರಿಂದ 7ರ ವರೆಗೆ ಅಖಿಲ ಭಾರತ ಪ್ರತಿಭಟನಾ ವಾರವನ್ನು ಆಚರಿಸಲು ಕರೆ ನೀಡಿದೆ.

ಅಲ್ಲದೆ ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಸಂಯುಕ್ತ ಕಿಸಾನ್ ಮೋರ್ಚಾದ ಜಂಟಿ ವೇದಿಕೆ ಘೋಷಿಸಿದ ಕಾರ್ಯಾಚರಣೆಯ ಯೋಜನೆಗೆ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಅಕ್ಟೋಬರ್ 5, 2023 ರ ಅಖಿಲ ಭಾರತ ದೆಹಲಿ ರ್‍ಯಾಲಿಗೆ ಹಾಗೂ ಅರಣ್ಯ ಸಂರಕ್ಷಣಾ (ತಿದ್ದುಪಡಿ) ಕಾಯ್ದೆ 2023 ಮತ್ತು ಏಕರೂಪ ನಾಗರಿಕ ಸಂಹಿತೆಯ ವಿರುದ್ಧ ಆಗಸ್ಟ್ 9 ರಂದು ರಾಷ್ಟ್ರವ್ಯಾಪಿ ಪ್ರತಿಭಟನೆಗಳಿಗೆ ಆದಿವಾಸಿ ಸಂಘಟನೆಗಳ ಕರೆಗೆ ಕೇಂದ್ರ ಸಮಿತಿಯು ತನ್ನ ಬೆಂಬಲವನ್ನು ವ್ಯಕ್ತಪಡಿಸಿದೆ.

ಸಭೆಯ ನಂತರ ಪ್ರಕಟಿಸಿರುವ ಕೇಂದ್ರ ಸಮಿತಿಯ ಹೇಳಿಕೆಯನ್ನು ಈ ಮುಂದೆ ಕೊಡಲಾಗಿದೆ:

ಮಣಿಪುರದಲ್ಲಿ ಅರಾಜಕ ಮತ್ತು ವಿಧ್ವಂಸಕ ಸನ್ನಿವೇಶ

ಮೂರು ತಿಂಗಳಿಗೂ ಹೆಚ್ಚು ಸಮಯದಿಂದ ಮಣಿಪುರದಲ್ಲಿ ಕೋಮುವಾದಿ ಆಯಾಮಗಳೊಂದಿಗೆ ಜನಾಂಗೀಯ ಘರ್ಷಣೆಯ ಬೆಂಕಿ ಹತ್ತು ಉರಿಯುತ್ತಿರುವುದರ ಬಗ್ಗೆ ಕೇಂದ್ರ ಸಮಿತಿಯು ತನ್ನ ಆಕ್ರೋಶವನ್ನು ವ್ಯಕ್ತಪಡಿಸಿದೆ. ಇದು ನೂರಾರು ಜನರನ್ನು ಸಾಯಿಸಿದೆ, ಹತ್ತಾರು ಸಾವಿರ ಮಂದಿ ಮನೆಮಾರು ಕಳಕೊಂಡು ಪರಿಹಾರ ಶಿಬಿರಗಳ ಅಮಾನವೀಯ ಪರಿಸ್ಥಿತಿಗಳಲ್ಲಿ ಬದುಕುಳಿದಿದ್ದಾರೆ. ರಾಜ್ಯ ಸರ್ಕಾರ ಇದಕ್ಕೆ ಹೊಣೆ ಎಂಬುದು ಸಾಕಷ್ಟು ಸ್ಪಷ್ಟವಾಗಿದೆ. ಪ್ರಧಾನ ಮಂತ್ರಿ ಮೋದಿಯವರ ಮೌನ ಮತ್ತು ಕೇಂದ್ರ ಸರ್ಕಾರದ ಏನೂ ಪರಿಣಾಮ ಬೀರದ ಮಧ್ಯಪ್ರವೇಶ ಸನ್ನಿವೇಶ ಹೆಚ್ಚಿನ ಅರಾಜಕತೆ ಮತ್ತು ವಿಧ್ವಂಸಕತೆಯತ್ತ ಜಾರಲು ಬಿಡುವಲ್ಲಿ ಶಾಮೀಲನ್ನು ಸೂಚಿಸುತ್ತದೆ. ಪ್ರಧಾನಿಗಳು ಸಂಸತ್ತಿಗೆ ಉತ್ತರದಾಯಿಯಾಗಬೇಕಾದ ಜವಾಬ್ದಾರಿಯನ್ನು ನಿಭಾಯಿಸಬಾರದು ಎಂಬುದನ್ನು ಆರಿಸಿಕೊಂಡಂತಿದೆ, ಇದರ ಫಲಿತಾಂಶವಾಗಿ ಸಂಸತ್ತಿನ ಕಲಾಪಗಳು ಸಂಪೂರ್ಣವಾಗಿ ಅಸ್ತವ್ಯಸ್ತಗೊಂಡಿವೆ. ಮಣಿಪುರ ಸಂಘರ್ಷವು ಈಶಾನ್ಯದ ಹತ್ತಿರದ ರಾಜ್ಯಗಳಿಗೆ ಹರಡುವುದು ಬಹಳ ಗಂಭೀರ ಪರಿಣಾಮಗಳನ್ನು ಉಂಟುಮಾಡಲಿದೆ.

ಸಾಮಾನ್ಯ ಪರಿಸ್ಥಿತಿ ಮತ್ತು ಶಾಂತಿಯನ್ನು ಮರುಸ್ಥಾಪಿಸುವ ದಿಕ್ಕಿನಲ್ಲಿ ಮೊದಲ ಹೆಜ್ಜೆಯಾಗಿ, ಮುಖ್ಯಮಂತ್ರಿ ಬಿರೇನ್ ಸಿಂಗ್ ಹೋಗಲೇಬೇಕು ಎಂದು ಕೇಂದ್ರ ಸಮಿತಿಯು ಆಗ್ರಹಪಡಿಸಿದೆ.

ಕೋಮು ಧ್ರುವೀಕರಣ ತೀಕ್ಷ್ಣಗೊಳ್ಳುತ್ತಿದೆ

ಹರ್ಯಾಣ ಕೋಮು ಹಿಂಸಾಚಾರ: ಮೇವಾತ್ ಪ್ರದೇಶದಲ್ಲಿ ನೂಹ್‌ನಿಂದ ಪ್ರಾರಂಭವಾಗಿ ಗುರುಗ್ರಾಮ್ ಮತ್ತು ಇತರ ಸ್ಥಳಗಳಿಗೆ ಹರಡಿದ ಕೋಮು ಹಿಂಸಾಚಾರದ ನಂತರ ಹರಿಯಾಣ ಬಿಜೆಪಿ ಸರ್ಕಾರವು ಕ್ರೂರ ಬುಲ್ಡೋಜರ್ ರಾಜಕೀಯವನ್ನು ಹರಿಯಬಿಟ್ಟಿರುವುದನ್ನು ಕೇಂದ್ರ ಸಮಿತಿಯು ತೀವ್ರವಾಗಿ ಖಂಡಿಸಿದೆ. ಈ ಹಿಂಸಾಚಾರವನ್ನು ಸೃಷ್ಟಿಸಿದ ಅಪರಾಧಿಗಳು ಮತ್ತು ಪ್ರಚೋದಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಬದಲು, ಹರಿಯಾಣ ಬಿಜೆಪಿ ರಾಜ್ಯ ಸರ್ಕಾರವು ಅಲ್ಪಸಂಖ್ಯಾತ ಸಮುದಾಯವನ್ನು ಗುರಿಯಾಗಿಸಿಕೊಂಡು, ಮುಸ್ಲಿಂ ಸಮುದಾಯದವರ ಅಂಗಡಿಗಳು ಮತ್ತು ನಿವಾಸಗಳನ್ನು ಧ್ವಂಸಗೊಳಿಸುವ ದೊಡ್ಡ ಕಸರತ್ತನ್ನು ಪ್ರಾರಂಭಿಸುತ್ತಿದೆ. ಇವುಗಳಲ್ಲಿ ಹಲವು ಕಾನೂನಾತ್ಮಕ ಮಾಲೀಕತ್ವದ ದಾಖಲೆಗಳನ್ನು ಹೊಂದಿವೆ ಮತ್ತು ಕೆಲವು ನ್ಯಾಯಾಲಯದ ತಡೆಯಾಜ್ಞೆಗಳನ್ನು ಹೊಂದಿವೆ. ಹೀಗಿದ್ದರೂ ಬಿಜೆಪಿ ರಾಜ್ಯ ಸರ್ಕಾರ ಈ ಆಸ್ತಿಗಳನ್ನು ನೆಲಸಮ ಮಾಡಲು ಮುಂದಾಗಿದೆ. ಆದರೆ, ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ನಾಲ್ಕು ದಿನಗಳ ಕಾಲ ನಡೆದ ನೆಲಸಮ ಕಾರ್ಯಾಚರಣೆಗೆ ತಡೆ ಹಾಕಿದೆ.



ದ್ವೇಷಾಪರಾಧಗಳು: ರೈಲ್ವೇ ಸಂರಕ್ಷಣಾ ಪಡೆಯ ಕಾನ್‌ಸ್ಟೆಬಲ್ ಒಬ್ಬ ಅಧಿಕಾರಿ ಮತ್ತು ಮೂವರು ಮುಸ್ಲಿಂ ಪ್ರಯಾಣಿಕರನ್ನು ಭೀಕರವಾಗಿ ಹತ್ಯೆಗೈದಿರುವುದು ಅಮಾನವೀಯಗೊಳಿಸುವ ದ್ವೇಷದ ಅಪರಾಧವಾಗಿದೆ. ಮುಸ್ಲಿಂ ಸಮುದಾಯವನ್ನು ರಾಕ್ಷಸರನ್ನಾಗಿಸುವ ಬಿಜೆಪಿ–ಆರ್‌ಎಸ್‌ಎಸ್‌ನ ದುಷ್ಟ ದ್ವೇಷದ ಭಾಷಣಗಳು ಮತ್ತು ಪ್ರಚಾರದ ಪರಿಣಾಮವಾಗಿ ಇಂತಹ ಅಪರಾಧಗಳು ಬೆಳೆಯುತ್ತಿವೆ. ಹಿಂದುತ್ವ ಶಕ್ತಿಗಳ ವಿಷಕಾರಿ ಕಾರ್ಯಸೂಚಿಯು ಭಾರತೀಯ ಗಣರಾಜ್ಯದ ಜಾತ್ಯತೀತ ಪ್ರಜಾಸತ್ತಾತ್ಮಕ ಸ್ವರೂಪವನ್ನು ನಾಶಪಡಿಸುತ್ತಿದೆ ಎಂಬುದಕ್ಕೆ ಈ ಖಂಡನೀಯ ಘಟನೆಯು ಭಾರತಕ್ಕೆ ಎಚ್ಚರಿಕೆಯ ಗಂಟೆಯಾಗಿದೆ.

ಜ್ಞಾನವಾಪಿ ಮಸೀದಿ ವಿವಾದ: ಸ್ವಾತಂತ್ರ್ಯದ ನಂತರ ದೇಶದ ಎಲ್ಲಾ ಪೂಜಾ ಸ್ಥಳಗಳಿಗೆ ಸಂಬಂಧಿಸಿದಂತೆ ಯಥಾಸ್ಥಿತಿಯನ್ನು ಒದಗಿಸುವ ಪೂಜಾ ಸ್ಥಳಗಳ ಕಾಯ್ದೆ 1991 ನ್ನು ಉನ್ನತ ನ್ಯಾಯಾಂಗವು ಏಕೆ ಕಟ್ಟುನಿಟ್ಟಾಗಿ ಜಾರಿಗೊಳಿಸುತ್ತಿಲ್ಲ ಎಂಬುದು ದಿಗ್ಭ್ರಮೆಗೊಳಿಸುವ ಮತ್ತು ನಿಗೂಢವಾದ ಸಂಗತಿ ಎಂದು ಕೇಂದ್ರ ಸಮಿತಿ ಹೇಳಿದೆ. ಈ ಶಾಸನವನ್ನು ರೂಪಿಸುವ ಸಮಯದಲ್ಲಿ ಕೊಡಮಾಡಿದ ಏಕೈಕ ಅಪವಾದವೆಂದರೆ ಅಯೋಧ್ಯೆ, ಅಲ್ಲಿ ವಿವಾದವು ನ್ಯಾಯಾಲಯದ ವಿಚಾರಣೆಯ ವಿಷಯವಾಗಿತ್ತು. ಆಗಸ್ಟ್ 3 ರ ಅಲಹಾಬಾದ್ ಹೈಕೋರ್ಟ್ ತೀರ್ಪು ಜ್ಞಾನವಾಪಿ ಮಸೀದಿ ಸಂಕೀರ್ಣದ ಸಮೀಕ್ಷೆಯನ್ನು ನಡೆಸಲು ಭಾರತದ ಪುರಾತತ್ವ ಸರ್ವೆ (ಎಎಸ್‌ಐ) ಗೆ ಅವಕಾಶ ನೀಡಿತು. ಕಾಯ್ದೆಯ ಸಿಂಧುತ್ವವನ್ನು ಪದೇ ಪದೇ ಎತ್ತಿ ಹಿಡಿದಿರುವ ಸುಪ್ರೀಂ ಕೋರ್ಟ್ ಕೂಡ ಸಮೀಕ್ಷೆಯನ್ನು ನಿಲ್ಲಿಸಿಲ್ಲ. ದೇಶದ ಕಾನೂನಾಗಿರುವ ಈ ಕಾಯಿದೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಎಂದು ಕೇಂದ್ರ ಸಮಿತಿ ಆಗ್ರಹಿಸಿದೆ.

ಒಕ್ಕೂಟ ತತ್ವದ ಮೇಲಿನ ದಾಳಿಗಳು

ಹಣಕಾಸು ಒಕ್ಕೂಟ ತತ್ವ: ಮೋದಿ ಸರ್ಕಾರವು ಇತ್ತೀಚೆಗೆ ಸಾರ್ವಜನಿಕ ಸಾಲಗಳ ವ್ಯಾಖ್ಯಾನವನ್ನು ಬದಲಾಯಿಸಿದೆ, ಇದು ರಾಜ್ಯ ಸರ್ಕಾರಗಳ ಹಣಕಾಸಿನ ಅವಕಾಶಗಳನ್ನು ಮತ್ತಷ್ಟು ಹಿಂಡಿ ಹಾಕಿದೆ. ರಾಜ್ಯ ಸರ್ಕಾರಗಳು ಬಜೆಟ್‌ಗೆ ಹೊರತಾದ ಮತ್ತು ಬಜೆಟೇತರ ಸಾಲಗಳನ್ನು ಈಗ ಸಾರ್ವಜನಿಕ ಸಾಲಗಳ ಭಾಗವೆಂದು ಪರಿಗಣಿಸಬೇಕಾಗಿದೆ. ಆದರೆ, ಇದು ಕೇಂದ್ರ ಸರ್ಕಾರದ ಸಾಲಗಳಿಗೆ ಅನ್ವಯಿಸುವುದಿಲ್ಲ! ಇದಲ್ಲದೆ, ಇದನ್ನು ಪೂರ್ವಾನ್ವಯಗೊಳಿಸಲಾಗುತ್ತಿದೆ. ಕೇರಳದಂತಹ ರಾಜ್ಯಕ್ಕೆ ಇದರರ್ಥ ರೂ. 2023–24 ರ ಹಣಕಾಸು ವರ್ಷಕ್ಕೆ 17,310 ಕೋಟಿ ರೂ. ಕಡಿತ. ಇದು ರಾಜ್ಯ ವಿಧಾನಸಭೆಯು ಅನುಮೋದಿಸಿದ ಬಜೆಟ್‌ನಲ್ಲಿ ಭಾರಿ ಕೊರತೆಯನ್ನು ಸೃಷ್ಟಿಸಿದೆ. ಇದು ರಾಜ್ಯದ ಹಕ್ಕುಗಳ ಮೇಲೆ ಗಂಭೀರವಾದ ಆಕ್ರಮಣವಾಗಿದೆ.

ದೆಹಲಿ ಸುಗ್ರೀವಾಜ್ಞೆ: ಅಧಿಕಾರಶಾಹಿಯ ನಿಯಂತ್ರಣ ಸೇರಿದಂತೆ ಆಡಳಿತದ ಪ್ರಮುಖ ಕ್ಷೇತ್ರಗಳ ಮೇಲೆ ದೆಹಲಿಯ ಚುನಾಯಿತ ಸರ್ಕಾರದ ಹಕ್ಕುಗಳನ್ನು ಎತ್ತಿಹಿಡಿಯುವ ಇತ್ತೀಚಿನ ಸುಪ್ರೀಂ ಕೋರ್ಟ್ ನ ಐವರು ಸದಸ್ಯರ ಸಂವಿಧಾನ ಪೀಠವು ನೀಡಿದ ತೀರ್ಪನ್ನು ನಿರರ್ಥಕಗೊಳಿಸಲು ಸುಗ್ರೀವಾಜ್ಞೆಯನ್ನು ಹೊರಡಿಸುವ ಲಜ್ಜೆಗೆಟ್ಟ ನಿರಂಕುಶ ಕ್ರಮವನ್ನು ಮೋದಿ ಸರ್ಕಾರವು ಕೈಗೊಂಡಿದೆ. ಇದು ನ್ಯಾಯಾಲಯದ ನಿಂದನೆಯನ್ನು ಮಾಡುವುದು ಮಾತ್ರವಲ್ಲದೆ, ಸಂವಿಧಾನದ ಒಕ್ಕೂಟ ಸ್ವರೂಪ ಮತ್ತು ಸುಪ್ರೀಂ ಕೋರ್ಟ್ ವ್ಯಾಖ್ಯಾನಿಸಿದಂತೆ ಹೊಣೆಗಾರಿಕೆ ಮತ್ತು ಪ್ರಜಾಸತ್ತಾತ್ಮಕ ಆಳ್ವಿಕೆಯ ಮಾನದಂಡಗಳ ಮೇಲೆ ನೇರ ಆಕ್ರಮಣವಾಗಿದೆ.

ಮೋದಿ ಸರ್ಕಾರ ಲೋಕಸಭೆಯಲ್ಲಿ ತನ್ನ ಕ್ರೂರ ಬಹುಮತವನ್ನು ಬಳಸಿಕೊಂಡು ಮತ್ತು ರಾಜ್ಯಸಭೆಯಲ್ಲಿ ಬಿಜೆಡಿ ಮತ್ತು ವೈಎಸ್‌ಆರ್‌ಸಿಪಿಯಂತಹ ಪ್ರಾದೇಶಿಕ ಪಕ್ಷಗಳ ಬೆಂಬಲದೊಂದಿಗೆ ಇದನ್ನು ಕಾನೂನಾಗಿ ಜಾರಿಗೊಳಿಸುತ್ತಿದೆ.

ರಾಷ್ಟ್ರೀಯ ಆಸ್ತಿಗಳ ಲೂಟಿ: ಈ ಕಾರ್ಪೊರೇಟ್–ಕೋಮುವಾದಿ ನಂಟಿನ ಅಡಿಯಲ್ಲಿ, ಹೊಸ ಕಾನೂನುಗಳನ್ನು ಮಾಡುವ ಮೂಲಕ ರಾಷ್ಟ್ರೀಯ ಆಸ್ತಿಗಳ ಲೂಟಿಯನ್ನು ಕಾನೂನುಬದ್ಧಗೊಳಿಸಲಾಗುತ್ತಿದೆ. ಸಂಸತ್ತಿನ ಅಡ್ಡಿ ಆತಂಕಗಳ ಮೂಲಕ, ರಾಷ್ಟ್ರೀಯ ಆಸ್ತಿಗಳ ಖಾಸಗೀಕರಣಕ್ಕೆ ಅನುಕೂಲವಾಗುವ ಪ್ರಮುಖ ಮಸೂದೆಗಳನ್ನು ಅಂಗೀಕರಿಸಲಾಗುತ್ತಿದೆ. ಇವುಗಳಲ್ಲಿ ಅರಣ್ಯ (ಸಂರಕ್ಷಣೆ) ತಿದ್ದುಪಡಿ ಮಸೂದೆ, 2023 ಸೇರಿದ್ದು, ಅಭಿವೃದ್ಧಿಯ ಹೆಸರಿನಲ್ಲಿ ನೈಸರ್ಗಿಕ ಸಂಪನ್ಮೂಲಗಳನ್ನು ಲೂಟಿ ಮಾಡಲು ಕಾರ್ಪೊರೇಟ್‌ಗಳಿಗೆ ಸಹಾಯ ಮಾಡುವ ಸಾರಾಸಗಟು ವಿನಾಯಿತಿ ನೀಡಲಿಕ್ಕಾಗಿ ಇದನ್ನು ತರಲಾಗಿದೆ. ಇದರಿಂದಾಗುವ ಅರಣ್ಯನಾಶವು ದೇಶದ ಹವಾಮಾನದ ಮೇಲೆ ಪ್ರತಿಕೂಲ ಪರಿಣಾಮವನ್ನು ಉಲ್ಬಣಗೊಳಿಸುತ್ತದೆ. ಲಿಥಿಯಂ ಸೇರಿದಂತೆ ನಿರ್ಣಾಯಕ ಮತ್ತು ಬೆಲೆಬಾಳುವ ಖನಿಜ ಸಂಪನ್ಮೂಲಗಳ ಖಾಸಗೀಕರಣಕ್ಕೆ ಅನುಕೂಲ ಕಲ್ಪಿಸುವ ಗಣಿಗಳು ಮತ್ತು ಖನಿಜಗಳು (ಅಭಿವೃದ್ಧಿ ಮತ್ತು ನಿಯಂತ್ರಣ) ತಿದ್ದುಪಡಿ ಮಸೂದೆ, 2023ನ್ನು ಪಾಸು ಮಾಡಿಸಲಾಗಿದೆ. ಕಚ್ಚಾತೈಲದ ತಟದಾಚೆಗಿನ ಖಾಸಗಿ ಗಣಿಗಾರಿಕೆಗೆ ಅನುಕೂಲ ಕಲ್ಪಿಸುವ ತಟದಾಚೆಗಿನ ಪ್ರದೇಶಗಳು(ಅಭಿವೃದ್ಧಿ ಮತ್ತು ನಿಯಂತ್ರಣ) ತಿದ್ದುಪಡಿ ಮಸೂದೆ, 2023ನ್ನು ಪಾಸು ಮಾಡಿಸಿಕೊಳ್ಳಲಾಗಿದೆ.

ಮಹಿಳೆಯರು ಮತ್ತು ಹೆಣ್ಣು ಮಕ್ಕಳ ವಿರುದ್ಧ ಬೆಳೆಯುತ್ತಿರುವ ಅಪರಾಧಗಳು: ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಮೇಲಿನ ದಾಳಿಗಳು ಮತ್ತು ಅಪರಾಧಗಳಲ್ಲಿ ಬೆಳೆಯುತ್ತಿರುವ ಮತ್ತು ಆತಂಕಕಾರಿ ಪ್ರವೃತ್ತಿ ಕಾಣುತ್ತಿದೆ.

ಎನ್‌ಸಿಆರ್‌ಬಿ ಅಂಕಿಅಂಶಗಳು ತೋರಿಸುವ ಪ್ರಕಾರ, ಪ್ರತಿದಿನ ಸರಾಸರಿ 86 ಅತ್ಯಾಚಾರ ಪ್ರಕರಣಗಳು ದಾಖಲಾಗಿವೆ, 2021 ರಲ್ಲಿ ಮಹಿಳೆಯರ ವಿರುದ್ಧ ಗಂಟೆಗೆ 49 ಅಪರಾಧಗಳು ದಾಖಲಾಗಿವೆ. ಅತ್ಯಾಚಾರ ಪ್ರಕರಣಗಳ ಸಂಖ್ಯೆ 2020 ರಲ್ಲಿ 28,046 ರಿಂದ 2021 ರಲ್ಲಿ 31,677 ಕ್ಕೆ ಏರಿದೆ. ಮಹಿಳೆಯರ ವಿರುದ್ಧದ ಅಪರಾಧಗಳ ಸಂಖ್ಯೆ 2020ರಲ್ಲಿ 3,71,503 ರಿಂದ 2021 ರಲ್ಲಿ 4,28,278 ಕ್ಕೆ ಏರಿಕೆಯಾಗಿದೆ. ಅನೇಕ ಪ್ರಕರಣಗಳಲ್ಲಿ ಆರೋಪಿಗಳಿಗೆ ಕೃಪಾಪೋಷಣೆಯನ್ನು ನೀಡುವ ಮೋದಿ ಸರ್ಕಾರದ ಧೋರಣೆ ಅಪರಾಧಿಗಳ ನಡುವೆ ಅಭಯದ ಸಂಸ್ಕೃತಿಗೆ ಅನುವುಮಾಡಿಕೊಟ್ಟಿದೆ.

ಪ್ರಮಾಣಿತ ಅಂಕಿ–ಅಂಶಗಳ ಭಯ

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ – 6 ರಲ್ಲಿ ರಕ್ತಹೀನತೆಯ ಇರುವಿಕೆ ಮತ್ತು ಅಂಗವೈಕಲ್ಯಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ತೆಗೆದುಹಾಕುವ ಬಗ್ಗೆ ಕೇಂದ್ರ ಸಮಿತಿಯು ತನ್ನ ಆಳವಾದ ಕಳವಳವನ್ನು ವ್ಯಕ್ತಪಡಿಸಿತು.

ಹಿಂದಿನ ಸಮೀಕ್ಷೆಯು ಭಾರತದಲ್ಲಿ ಶೇಕಡಾ 57 ರಷ್ಟು ಮಹಿಳೆಯರು ಮತ್ತು ಶೇಕಡಾ 67 ಕ್ಕಿಂತ ಹೆಚ್ಚು ಮಕ್ಕಳು ರಕ್ತಹೀನತೆಯಿಂದ ಬಳಲುತ್ತಿದ್ದಾರೆ ಎಂದು ಬಹಿರಂಗಪಡಿಸಿದೆ. ತಾಯಿ ಮತ್ತು ಮಗುವಿನ ಮರಣಕ್ಕೆ ಕಾರಣವಾಗುವ ಸಂಗತಿಗಳಲ್ಲಿ ರಕ್ತಹೀನತೆ ಒಂದು ಪ್ರಮುಖ ಅಂಶವಾಗಿದೆ. ಅಂಗವೈಕಲ್ಯಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ತೆಗೆದುಹಾಕುವುದು ಒಂದು ಹಿಮ್ಮುಖ ಹೆಜ್ಜೆಯಾಗಿದೆ.

ಮೋದಿ ಸರ್ಕಾರವು ಯಾವುದೇ ನಾಚಿಕೆಯಿಲ್ಲದೆ, ನಿಖರವಾದ ದತ್ತಾಂಶಗಳ ಬಗ್ಗೆ ತಿರಸ್ಕಾರ ಮತ್ತು ಭಯವನ್ನು ಪ್ರದರ್ಶಿಸಿಕೊಂಡೇ ಬಂದಿದೆ. ಜನಗಣತಿ ಕಾರ್ಯಾಚರಣೆಯ ಮೂಲಕ ದತ್ತಾಂಶ ಸಂಗ್ರಹಣೆಯು ➚

"ಸಾರ್ವತ್ರಿಕ ಮೂಲ ಆದಾಯ"ದ ಪ್ರಶ್ನೆ......... ಪುಟ 13 ರಿಂದ

ಸಾಧ್ಯವಿಲ್ಲ.

ಹೆಚ್ಚಿನ ವೆಚ್ಚ – ಆದರೆ ಕಷ್ಟವೇನಲ್ಲ

ಹೀಗೆ, ಸಾರ್ವತ್ರಿಕ ಮೂಲ ಆದಾಯದ ವಿಚಾರವು ಉತ್ತಮ ಆಶಯ ಹೊಂದಿದ್ದರೂ ಮತ್ತು ಶ್ಲಾಘನೀಯವಾಗಿದ್ದರೂ, ಅದು ಈಗ ಪ್ರತಿಪಾದಿಸುತ್ತಿರುವಂತೆ ಅರ್ಥಹೀನವೇ ಆಗಿದೆ. ಇದು ಯಾವುದೇ ರೂಪದಲ್ಲಿ ಕೇವಲ ನಗದು ವರ್ಗಾವಣೆಗಳ ಒಂದು ಸಂಚಯ ಎಂದು ಅರ್ಥೈಸಿದರೆ, ಆಗ ಅದು ನಿಜವಾದ ಸಾರ್ವತ್ರಿಕ ಮೂಲ ಆದಾಯವನ್ನು ಒದಗಿಸುವ ಗುರಿಯನ್ನು ಈಡೇರಿಸಲಾರದು. ಮತ್ತೊಂದೆಡೆ, ನಿಜವಾದ ಅರ್ಥದಲ್ಲಿ ಒಂದು ಸಾರ್ವತ್ರಿಕ ಮೂಲ ಆದಾಯವನ್ನು ಒದಗಿಸಬೇಕಾದರೆ, ಅದು ನಿರ್ದಿಷ್ಟ ಹಕ್ಕುಗಳ – ಆರೋಗ್ಯದ ಹಕ್ಕು, ಶಿಕ್ಷಣದ ಹಕ್ಕು ಮತ್ತು ಅಂತಹ ಇತರ ಹಕ್ಕುಗಳ ಸಂಚಯವಾಗಿಯಲ್ಲದೆ ಬೇರಾವ ರೀತಿಯಲ್ಲೂ ಸಾಧ್ಯವಾಗದು. ಸರ್ಕಾರ ಇವನ್ನು ಒದಗಿಸುವ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಭಾರತವು ಒಂದು ನೈಜ ಕಲ್ಯಾಣ ಪ್ರಭುತ್ವವನ್ನು ಕಟ್ಟಬೇಕಾದರೆ, ಅದು ಪ್ರತಿಯೊಬ್ಬ ವ್ಯಕ್ತಿಗೂ ಈ ನಿರ್ದಿಷ್ಟ ಹಕ್ಕುಗಳನ್ನು ಖಾತರಿಪಡಿಸಬೇಕು; ಆದರೆ ಇದಕ್ಕೆ ಆರ್ಥಿಕ ಸಮೀಕ್ಷೆಯು ಸೂಚಿಸಿದ್ದಕ್ಕಿಂತ ಬಹಳಷ್ಟು ಹೆಚ್ಚಿನ ವೆಚ್ಚ ತಗಲುತ್ತದೆ.

ಉದಾಹರಣೆಗೆ, ಐದು ಸಾರ್ವತ್ರಿಕ ಹಕ್ಕುಗಳನ್ನು, ಅಂದರೆ. ಆಹಾರದ ಹಕ್ಕು (ಈ ಮೂಲಕ ಬಿಪಿಎಲ್ ಜನಸಂಖ್ಯೆಯು ಪಡೆಯಲು ಅರ್ಹರಾಗಿರುವ ಪ್ರಮಾಣದ ಆಹಾರವನ್ನು ಪ್ರತಿಯೊಬ್ಬರೂ ಪಡೆಯುತ್ತಾರೆ), ಉದ್ಯೋಗದ ಹಕ್ಕು (ಉದ್ಯೋಗವನ್ನು ಒದಗಿಸಲಾಗದಿದ್ದರೆ ಶಾಸನಬದ್ಧವಾಗಿ ನಿಗದಿತ ವೇತನದ ಪಾವತಿ), ರಾಷ್ಟ್ರೀಯ ಆರೋಗ್ಯ ಸೇವೆಯ ಮೂಲಕ ಉಚಿತವಾದ ಗುಣಮಟ್ಟದ ಆರೋಗ್ಯ ಪಾಲನೆಯ ಹಕ್ಕು, ಉಚಿತವಾದ ಗುಣಮಟ್ಟದ ಶಿಕ್ಷಣದ ಹಕ್ಕು (ಕನಿಷ್ಠ ಶಾಲಾ ಹಂತದ ವರೆಗೆ), ಮತ್ತು ಸಾರ್ವತ್ರಿಕ, ವಂತಿಗೆರಹಿತ ವೃದ್ಧಾಪ್ಯ ವೇತನದ ಮತ್ತು ವಿಕಲಾಂಗ ಸೌಲಭ್ಯಗಳ ಹಕ್ಕು ಇವನ್ನು ಸ್ಥಾಪಿಸಲು ಈಗಾಗಲೇ ಬಜೆಟಿನಲ್ಲಿ ಇವಕ್ಕೆ ಖರ್ಚು ಮಾಡುತ್ತಿರುವುದಕ್ಕಿಂತ ಹೆಚ್ಚುವರಿಯಾಗಿ ಜಿಡಿಪಿಯ 10ಶೇ.ದಷ್ಟು ವೆಚ್ಚವಾಗುತ್ತದೆ ಎಂದು ಅಂದಾಜು ಮಾಡಲಾಗಿದೆ. ಈ ಹೆಚ್ಚುವರಿ ಮೊತ್ತವನ್ನು ಖರ್ಚು ಮಾಡಲು, ಸರ್ಕಾರವು ಜಿಡಿಪಿಯ ಸುಮಾರು 7ಶೇ.ದಷ್ಟು ಹೆಚ್ಚುವರಿ ತೆರಿಗೆ ಆದಾಯವನ್ನು ಸಂಗ್ರಹಿಸಬೇಕು (ಇತರ 3 ಶೇ. ಈ 7% ಹೆಚ್ಚುವರಿ ವೆಚ್ಚದಿಂದ ಉಂಟಾಗುವ ಜಿಡಿಪಿ ಹೆಚ್ಚಳದಿಂದ ತಂತಾನೇ ತೆರಿಗೆ ಆದಾಯವಾಗಿ ಬರುತ್ತದೆ).

ಈ 7 ಶೇ.ವನ್ನು ಎತ್ತುವುದು, ಸರಕಾರ ಶ್ರೀಮಂತರ ಮೇಲೆ ತೆರಿಗೆ ವಿಧಿಸಲು ಸಿದ್ಧವಿದ್ದರೆ, ಕಷ್ಟವೇನಲ್ಲ. ವಾಸ್ತವವಾಗಿ ಜನಸಂಖ್ಯೆಯ ತುತ್ತ ತುದಿಯಲ್ಲಿರುವ 1 ಶೇ. ಮಂದಿಯ ಮೇಲೆ ಕೇವಲ ಎರಡು ತೆರಿಗೆಗಳನ್ನು, 2 ಶೇ. ಸಂಪತ್ತು ತೆರಿಗೆ ಮತ್ತು 33 1/3 ಶೇಕಡಾ ವಾರಸುದಾರಿಕೆ ತೆರಿಗೆ ವಿಧಿಸಿದರೆ, ಈ ಐದು ಮೂಲಭೂತ ಆರ್ಥಿಕ ಹಕ್ಕುಗಳನ್ನು ಖಾತರಿಪಡಿಸುವ ಮೂಲಕ ದೇಶದಲ್ಲಿ ಕಲ್ಯಾಣ ಪ್ರಭುತ್ವವನ್ನು ಕಟ್ಟಲು ಅಗತ್ಯವಾದ ಸಂಪನ್ಮೂಲಗಳನ್ನು ಸಂಗ್ರಹಿಸಲು ಸಾಕಾಗುತ್ತದೆ. ಆದರೆ ಇದು ಭಾರತದಲ್ಲಿ ಕಲ್ಯಾಣ ಪ್ರಭುತ್ವವನ್ನು ಕಟ್ಟುವುದನ್ನು ಬೂರ್ಜ್ವಾ ವ್ಯವಸ್ಥೆಯ ಸಾಮರ್ಥ್ಯವನ್ನು ಮೀರಿದ ವಿಷಯವಾಗಿ ಮಾಡುತ್ತದೆ, ಅದರಿಂದಾಗಿ ಉದಾರವಾದಿ ಅರ್ಥಶಾಸ್ತ್ರಜ್ಞರ ಪರಿಕಲ್ಪನೆಯನ್ನು ಮೀರಿದ ಸಂಗತಿಯೂ ಆಗುತ್ತದೆ.

ನರೇಗಾ ಯೋಜನೆಯ..... ಪುಟ 11 ರಿಂದ

ಕೆಲಸ ಬಯಸುವವರಿಗೆ ಆರ್ಥಿಕ ವರ್ಷದಲ್ಲಿ 200 ಮಾನವ ದಿನಗಳ ಕೆಲಸ ಕೊಡಬೇಕು. ದಿನಗೂಲಿಯನ್ನು 600 ರೂ.ಗೆ ಹೆಚ್ಚಿಬೇಕು. ಕೆಲಸ ಕೊಡಲಾಗದ ದಿನಗಳಿಗೆ ನಿರುದ್ಯೋಗ ಭತ್ಯೆಯನ್ನು ತಪ್ಪದೆ ಕೊಡಬೇಕು. ಎಂಬ ಬೇಡಿಕೆಗಳನ್ನು ರೈತ ಮತ್ತು ಕೃಷಿ ಕೂಲಿಕಾರರ ಸಂಘಟನೆಗಳು ಇಟ್ಟಿವೆ. ಈ ಬೇಡಿಕೆಗಳಿಗಾಗಿ ಹಲವು ಹೋರಾಟಗಳನ್ನೂ ಮಾಡಿವೆ. ಇವರ ಬೇಡಿಕೆಗಳಿಗೆ ಕಿವಿಗೊಡದ ಸರಕಾರ ಅನುಧಾನ ಕಡಿತ ಮಾಡುತ್ತಾ ಕಡೆಗೊಂದು ದಿನ ಯೋಜನೆಯನ್ನೇ ನಾಶ ಮಾಡುವ ಗುರಿ ಹೊಂದಿದಂತ್ತಿದೆ. ಉದ್ಯಮಿಗಳಿಗೆ ಕಾರ್ಮಿಕರ ದೊಡ್ಡ ಮೀಸಲು ಪಡೆಯನ್ನು ಮೀಸಲಿರಿಸುವ, ಆ ಮೂಲಕ ನಿಕೃಷ್ಟ ವೇತನಕ್ಕೆ ತಮಗೆ ಇಷ್ಟಬಂದಂತೆ ಕಾರ್ಮಿಕರನ್ನು ದುಡಿಸಿಕೊಳ್ಳಲು ಅನುವು ಮಾಡಿಕೊಡುವ ಸರಕಾರದ ತಂತ್ರ ಇದರಲ್ಲಿ ಅಡಗಿದೆ ಎಂಬುದು ಸ್ಪಷ್ಟ. ಬಂಡವಾಳಗಾರರ ಪರವಾದ ಮುಕ್ತ ಆರ್ಥಿಕ ನೀತಿಗಳ ಜಾರಿಯ ಭಾಗವಾಗಿ ಇವೆಲ್ಲವೂ ನಡೆಯುತ್ತಿದೆ.

–ಸಿ.ಸಿದ್ದಯ್ಯ

ಪ್ರಪಂಚದ ಬೇರೆಡೆ ನಡೆಯುತ್ತಿದ್ದರೆ, ಭಾರತದಲ್ಲಿ ಇದನ್ನು ಅನಿರ್ದಿಷ್ಟವಾಗಿ ವಿಳಂಬಗೊಳಿಸಲಾಗಿದೆ.

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (ಎನ್‌ಎಫ್‌ಹೆಚ್‌ಎಸ್)ಯನ್ನು ನಡೆಸುವ ಅಂತರ್‍ರಾಷ್ಟ್ರೀಯ ಜನಸಂಖ್ಯಾ ವೈಜ್ಞಾನಗಳ ಸಂಸ್ಥೆ (ಐಐಪಿಎಸ್) ನಿರ್ದೇಶಕ ಕೆ.ಎಸ್. ಜೇಮ್ಸ್ ರವರ ಅಮಾನತು ಕ್ರಮವನ್ನು ಕೇಂದ್ರ ಸಮಿತಿ ಖಂಡಿಸಿದೆ. ಎನ್‌ಎಫ್‌ಹೆಚ್‌ಎಸ್–5 ವಿಶೇಷವಾಗಿ ಭಾರತವು "ಬಯಲು ಶೌಚ ಮುಕ್ತ" ದೇಶವಾಗಿದೆ ಎಂಬ ಮೋದಿ ಸರ್ಕಾರದ ದಾವೆಗೆ ಸರಿಹೊಂದದ ದತ್ತಾಂಶವನ್ನು ನೀಡಿತ್ತು.

ಬುಡಕಟ್ಟು ಜನರ ಪ್ರತಿಭಟನಾ ರ್‍ಯಾಲಿ: ಅರಣ್ಯ ಸಂರಕ್ಷಣಾ (ತಿದ್ದುಪಡಿ) ಕಾಯ್ದೆ 2023 ಮತ್ತು ಏಕರೂಪ ನಾಗರಿಕ ಸಂಹಿತೆಯ ವಿರುದ್ಧ ಆಗಸ್ಟ್ 9 ರಂದು ರಾಷ್ಟ್ರವ್ಯಾಪಿ ಪ್ರತಿಭಟನೆಗಳಿಗೆ ಆದಿವಾಸಿ ಸಂಘಟನೆಗಳ ಕರೆಗೆ ಕೇಂದ್ರ ಸಮಿತಿಯು ತನ್ನ ಬೆಂಬಲವನ್ನು ನೀಡಿದೆ. ಈ ಕಾಯಿದೆಯು ಅರಣ್ಯ ಹಕ್ಕುಗಳ ಕಾಯಿದೆ ಮತ್ತು ಇತರ ಕಾನೂನುಗಳು ಖಾತರಿಪಡಿಸುವ ಹಕ್ಕುಗಳನ್ನು ನಿರಾಕರಿಸುತ್ತದೆ ಮತ್ತು ಸಾಂಪ್ರದಾಯಕ ಕಾನೂನುಗಳ ರಕ್ಷಣೆಯ ಸಾಂವಿಧಾನಿಕ ಖಾತರಿಗಳ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ.

ಕೇಂದ್ರ ಸಮಿತಿಯ ಕರೆಗಳು:

1. ಪಕ್ಷದ ಎಲ್ಲಾ ಘಟಕಗಳು ಬೆಲೆ ಏರಿಕೆ ವಿರುದ್ಧ ಮತ್ತು ಉದ್ಯೋಗ ಸೃಷ್ಟಿಗಾಗಿ ಅಖಿಲ ಭಾರತ ಪ್ರತಿಭಟನಾ ವಾರವನ್ನು ಸಪ್ಟಂಬರ್ 1ರಿಂದ 7, 2023 ರಂದು ಆಚರಿಸುತ್ತವೆ.
2. ಎಡಪಕ್ಷಗಳ ಸಮಾವೇಶವನ್ನು ಆದಷ್ಟು ಬೇಗ ನಡೆಸಲು ಮತ್ತು ಪರಸ್ಪರ ಒಪ್ಪಿಗೆಯ ಬೇಡಿಕೆಗಳ ಮೇಲೆ ಅಖಿಲ ಭಾರತ ಪ್ರಚಾರಕ್ಕೆ ಕರೆ ನೀಡಲು ಪ್ರಯತ್ನಿಸುವುದು.
3. ಕೇಂದ್ರ ಕಾರ್ಮಿಕ ಸಂಘಟನೆಗಳು ಮತ್ತು ಸಂಯುಕ್ತ ಕಿಸಾನ್ ಮೋರ್ಚಾದ ಜಂಟಿ ವೇದಿಕೆ ಘೋಷಿಸಿದ ಕಾರ್ಯಾಚರಣೆಯ ಯೋಜನೆಗೆ ಬೆಂಬಲ.
4. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಅಕ್ಟೋಬರ್ 5, 2023 ರ ಅಖಿಲ ಭಾರತ ದೆಹಲಿ ರ್‍ಯಾಲಿಗೆ ಬೆಂಬಲ.

ಕಾರ್ಪೊರೇಟ್ ಲೂಟಿಕೋರರು ಭಾರತ ಬಿಟ್ಟು ತೊಲಗಲಿ, ಕೃಷಿಯಿಂದ ತೊಲಗಲಿ –ರಾಷ್ಟ್ರಾಧ್ಯಕ್ಷರಿಗೆ ಸಂಯುಕ್ತ ಕಿಸಾನ್ ಮೋರ್ಚಾ ಮನವಿ

‘ಕ್ವಿಟ್ ಇಂಡಿಯಾ’ ದಿನಾಚರಣೆಯಲ್ಲಿ ದೇಶಾದ್ಯಂತ ರೈತರು ಮತ್ತು ಕೃಷಿ ಕೂಲಿಕಾರರೂ ಭಾಗವಹಿಸಿದ್ದಾರೆ. ಸಂಯುಕ್ತ ಕಿಸಾನ್ ಮೋರ್ಚಾ ಈ ಸಂದರ್ಭದಲ್ಲಿ ರಾಷ್ಟ್ರಾಧ್ಯಕ್ಷರಾಗಿರುವ ದ್ರೌಪದಿ ಮುರ್ಮು ಅವರಿಗೆ ಮನವಿ ಸಲ್ಲಿಸಿದ್ದು ಅದರಲ್ಲಿ ಕಾರ್ಪೊರೇಟ್ ಲೂಟಿಕೋರರು ಭಾರತ ಬಿಟ್ಟು ತೊಲಗಲಿ, ಕೃಷಿಯಿಂದ ತೊಲಗಲಿ ಎಂದು ಆಗ್ರಹಿಸಲಾಗಿದೆ. ಇದರಲ್ಲಿ ಈ ಕೆಳಗಿನ ಹಕ್ಕೊತ್ತಾಯಗಳನ್ನು ಮುಂದಿಡಲಾಗಿದೆ:

- ಒಕ್ಕೂಟ ಸರಕಾರಕ್ಕೆ ಸಿ2+ 50% ಸೂತ್ರದ ಪ್ರಕಾರ ಎಲ್ಲ ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆ ಮತ್ತು ಖಾತರಿ ಖರೀದಿಯ ಕಾನೂನನ್ನು ತರುವಂತೆ ಹೇಳಬೇಕು.
- ಎಲ್ಲ ಕೃಷಿಕುಟುಂಬಗಳನ್ನು ಕಿರುಹಣಕಾಸು ಸಂಸ್ಥೆಗಳು ಮತ್ತು ಖಾಸಗಿ ಲೇವಾದೇವಿಗಾರರ ಸಾಲಗಳು ಸೇರಿದಂತೆ ಎಲ್ಲ ಸಾಲಭಾರದಿಂದ ಮುಕ್ತಗೊಳಿಸುವ ಸಮಗ್ರ ಸಾಲಮನ್ನಾ ಯೋಜನೆಯನ್ನು ಘೋಷಿಸಬೇಕು.
- ವಿದ್ಯುಚ್ಛಕ್ತಿ ಮಸೂದೆ, 2022ನ್ನು ಹಿಂದಕ್ಕೆ ಪಡೆಯಬೇಕು.
- ರೈತರ ಮತ್ತು ಒಬ್ಬ ಪತ್ರಕರ್ತರ ಹತ್ಯಾಕಾಂಡದ ಪ್ರಧಾನ ಪಿತೂರಿಗಾರ ಕೇಂದ್ರ ಗೃಹ ಖಾತೆಯ ರಾಜ್ಯಮಂತ್ರಿ ಅಜಯ್ ಮಿಶ್ರ ಟೇನಿಯನ್ನು ವಜಾ ಮಾಡಿ ವಿಚಾರಣೆಗೆ ಗುರಿಪಡಿಸಬೇಕು.
- ರೈತರ ಹೋರಾಟದಲ್ಲಿ ಹುತಾತ್ಮರಾದ ಎಲ್ಲ ರೈತರ ಕುಟುಂಬಗಳಿಗೆ ಪರಿಹಾರ ಮತ್ತು ಮರುವಸತಿ ಕಲ್ಪಿಸಬೇಕು.
- ಕಾರ್ಪೊರೇಟ್–ಪರವಾದ ‘ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನಾ’ವನ್ನು ಹಿಂತೆಗೆದುಕೊಂಡು, ಎಲ್ಲ ಬೆಳೆಗಳಿಗೆ ಸಮಗ್ರವಾದ ಸಾರ್ವಜನಿಕ ವಲಯ ಬೆಳೆ ವಿಮಾ ಯೋಜನೆಯನ್ನು ಸ್ಥಾಪಿಸಬೇಕು.
- ಎಲ್ಲ ಮಧ್ಯಮ, ಸಣ್ಣ ಮತ್ತು ಅಂಚಿನ ಪುರುಷ ಮತ್ತು ಮಹಿಳಾ ರೈತರಿಗೆ, ಮತ್ತು ಕೃಷಿ ಕೂಲಿಕಾರರಿಗೆ ರೂ. 10,000 ರೈತ ಪಿಂಚಣಿ ಯೋಜನೆಯನ್ನು ಘೋಷಿಸಬೇಕು.



"ನಮ್ಮ ಮಳೆಕಾಡುಗಳಿಗಾಗಿ ಒಗ್ಗೂಡಿದ್ದೇವೆ’ ಒಪ್ಪಂದ ಬ್ರೆಜಿಲ್ ನಲ್ಲಿ ಚಾರಿತ್ರಿಕ ಅಮೆಜಾನ್ ಶೃಂಗಸಭೆ... ಪುಟ 16 ರಿಂದ


ಮೂಲಕ (ಅ) 2025 ರ ವೇಳೆಗೆ ಎಲ್ಲಾ ಅಕ್ರಮ ಅರಣ್ಯನಾಶವನ್ನು ನಿಲ್ಲಿಸುವುದು, (ಆ) ಶೂನ್ಯ ಕಾನೂನು ಅರಣ್ಯನಾಶದ ಸಾಧನೆ 2027 ರ ವೇಳೆಗೆ, (ಇ) ಅಮೆಜಾನ್ ನಾಶವನ್ನು ಉತ್ತೇಜಿಸುವ ಕಾನೂನುಗಳು ಮತ್ತು ನಿಬಂಧನೆಗಳ ರದ್ದತಿ, ಮತ್ತು (ಈ) ಅರಣ್ಯನಾಶ ಮತ್ತು ಕ್ಷೀಣಿಸಿದ ಪ್ರದೇಶಗಳ ಪುನರ್ವಸತಿ, ಚೇತರಿಕೆ ಮತ್ತು ಮರುಸ್ಥಾಪನೆ.

2. ಸ್ಥಳೀಯ ಜನರು, ಆಫ್ರೋ–ವಂಶಸ್ಥರು, ಕ್ವಿಲೋಂಬೋಲಾಗಳು ಮತ್ತು ಸಾಂಪ್ರದಾಯಿಕ ಸಮುದಾಯಗಳ 100% ಪ್ರಾದೇಶಿಕ ಹಕ್ಕುಗಳಿಗೆ ಹಕ್ಕುಪತ್ರ ನೀಡುವುದು; ಸ್ಥಳೀಯ ಪ್ರದೇಶಗಳ ಸಾಮೂಹಿಕ ಮಾಲೀಕತ್ವದ ಒಟ್ಟಾರೆ ಭದ್ರತೆ (ಕಾನೂನು ಮತ್ತು ಭೌತಿಕ) ಖಾತ್ರಿಪಡಿಸುವುದು; ಪ್ರತ್ಯೇಕವಾದ ಸ್ಥಳೀಯ ಜನರ ಘನತೆ ಮತ್ತು ಪ್ರಾದೇಶಿಕ ರಕ್ಷಣೆ ಮತ್ತು ಜಮೀನುಗಳ ವಿತರಣೆ ಮತ್ತು ಶೀರ್ಷಿಕೆಯಲ್ಲಿ ಲಿಂಗ ದೃಷ್ಟಿಕೋನ.
3. ಅಮೆಜಾನ್‌ನಲ್ಲಿ ತೈಲ ಸಂಶೋಧನೆ ಮತ್ತು ಪರಿಶೋಧನೆಯ ಪರಿಸರ ಮತ್ತು ಸಾಮಾಜಿಕ ವೆಚ್ಚಗಳು ಉತ್ಪತ್ತಿಯಾಗುವ ಆರ್ಥಿಕ ಪ್ರಯೋಜನಗಳಿಗಿಂತ ಹೆಚ್ಚಿವೆ ಎಂದು ಪರಿಗಣಿಸಿ, ಶಕ್ತಿಮೂಲದ ಪರಿವರ್ತನೆಯನ್ನು ವೇಗಗೊಳಿಸುವುದು, ಅಮೆಜಾನ್‌ನಲ್ಲಿ ಹೊಸ ಸಂಶೋಧನೆ ಮತ್ತು ಅನ್ವೇಷಣೆಯನ್ನು ಉತ್ತೇಜಿಸುವುದನ್ನು ನಿಲ್ಲಿಸುವುದು ಮತ್ತು ನ್ಯಾಯಯುತ, ಜನಪ್ರಿಯ ಮತ್ತು ಪೀಡಿತ ಜನರು ಮತ್ತು ಪ್ರಾಂತ್ಯಗಳಿಗೆ ಪರಿಹಾರದೊಂದಿಗೆ ಅಂತರ್ಗತ ಶಕ್ತಿ ಪರಿವರ್ತನೆ ಯೋಜನೆ.
4. ಹವಾಮಾನ ಬದಲಾವಣೆಗೆ ಐತಿಹಾಸಿಕವಾಗಿ ಹೆಚ್ಚಿನ ಕೊಡುಗೆ ನೀಡಿದ ದೇಶಗಳ ಸರ್ಕಾರಗಳು ತಮ್ಮ ಬದ್ಧತೆಯನ್ನು ಪೂರೈಸಬೇಕೆಂದು ಒತ್ತಾಯಿಸಿ, ಒಂದು ದಶಕದ ಹಿಂದೆ, ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ವರ್ಷಕ್ಕೆ 100 ಶತಕೋಟಿ ಡಾಲರ್‌ಗಳನ್ನು ಇಂಧನ ಪರಿವರ್ತನೆಗಾಗಿ ಮತ್ತು ಸಾಮಾಜಿಕ–ಪರಿಸರ ಪರಿವರ್ತನೆಗಾಗಿ ಒದಗಿಸಲು, ನಾವು ಪ್ರತಿಪಾದಿಸುತ್ತೇವೆ.
5. ಅಮೆಜೋನಿಯನ್ ದೇಶಗಳ ಒಂಬತ್ತು ಸರ್ಕಾರಗಳು, ಅರಣ್ಯನಾಶದ ನಿರ್ಮೂಲನೆ ಮತ್ತು ತೈಲ ಪರಿಶೋಧನೆಯಿಂದ ನಿರ್ಗಮಿಸಲು ಈ ದಾಖಲೆಯಲ್ಲಿ ನಿಗದಿಪಡಿಸಿದ ಗುರಿಗಳಿಗೆ ಅನುಗುಣವಾಗಿ, ತಮ್ಮ ಅತ್ಯುತ್ತಮ ಹವಾಮಾನ ಬದ್ಧತೆಗಳನ್ನು ಪೂರೈಸಬೇಕು ಮತ್ತು ಹಸಿರುಮನೆ ಅನಿಲ ಹೊರಸೂಸುವಿಕೆಯನ್ನು ಕಡಿಮೆ ಮಾಡಲು ರಾಷ್ಟ್ರೀಯವಾಗಿ ನಿರ್ಧರಿಸಿದ ಕೊಡುಗೆಗಳನ್ನು ಗಣನೀಯವಾಗಿ ಹೆಚ್ಚಿಸಬೇಕು.

ಆದರೂ, 2030 ರ ವೇಳೆಗೆ ಅಕ್ರಮ ಅರಣ್ಯನಾಶವನ್ನು ಕೊನೆಗೊಳಿಸುವ ಬ್ರೆಜಿಲ್‌ನ ಪ್ರತಿಜ್ಞೆಯನ್ನು ಎಲ್ಲಾ ಸದಸ್ಯ ರಾಷ್ಟ್ರಗಳು ಅಳವಡಿಸಿಕೊಳ್ಳುವುದು ಸೇರಿದಂತೆ ಜನಾಂದೋಲನಗಳ ಶೃಂಗಸಭೆಯ ಅತ್ಯಂತ ವ್ಯಾಪಕವಾದ ಬೇಡಿಕೆಗಳನ್ನು ಪೂರೈಸಲು ಶೃಂಗಸಭೆಯು ವಿಫಲವಾಗಿದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE August 14-20, 2023 Price: Rs. 10/- Date of Publication: 11 August 2023 RNI No. KARKAN /2006/17926 Posted on 14-08-2023
Posted at BG PSO, BG - 560026 **Posted at Periodical Rate -** Rs. 2

ಬ್ರೆಜಿಲ್ ನಲ್ಲಿ ಅಗಸ್ಟ್ 9 ರಂದು ಕೊನೆಗಂಡ 'ಅಮೆಜಾನ್ ಶೃಂಗಸಭೆ'ಯಲ್ಲಿ ಅಮೆಜಾನ್, ಕಾಂಗೋ ಜಲಾನಯನ ಪ್ರದೇಶ ಮತ್ತು ಆಗ್ನೇಯ ಏಷ್ಯಾದ ಒಟ್ಟು 12 ದೇಶಗಳ ನಾಯಕರು "ನಮ್ಮ ಮಳೆಕಾಡುಗಳಿಗಾಗಿ ಒಗ್ಗೂಡಿದ್ದೇವೆ" ಎಂಬ ಚಾರಿತ್ರಿಕ ಒಪ್ಪಂದವನ್ನು ಅಂಗೀಕರಿಸಿದವು. ಇವು ವಿಶ್ವದ ಅತ್ಯಂತ ವ್ಯಾಪಕವಾದ ಮಳೆಕಾಡುಗಳನ್ನು ಹೊಂದಿರುವ ಮೂರು ಪ್ರದೇಶಗಳು. ಇದಕ್ಕೆ ಒಂದು ದಿನ ಮುಂಚೆ, ಅಮೆಜಾನ್ ಸಹಕಾರ ಒಪ್ಪಂದ ಸಂಸ್ಥೆಯ (ACTO) ಎಂಟು ದೇಶಗಳು – ಬೆಲೆಮ್ ಘೋಷಣೆಯನ್ನು ಅಂಗೀಕರಿಸಿದವು. ಈ ಶೃಂಗಸಭೆಗಳಿಗೆ ಪೂರ್ವಭಾವಿಯಾಗಿ ಅಮೆಜಾನ್ ಪ್ರದೇಶದ ದೇಶಗಳ ಜನಾಂದೋಲನಗಳು ಮತ್ತು ಸ್ಥಳೀಯ ಬುಡಕಟ್ಟು ಜನಸಂಘಟನೆಗಳು ಸಮಾನಾಂತರ ಶೃಂಗಸಭೆಯಲ್ಲಿ 29 ಹಕ್ಕೊತ್ತಾಯಗಳ ಸಾಮೂಹಿಕ ಪತ್ರವನ್ನು ಅಂಗೀಕರಿಸಿ ಶೃಂಗಸಭೆಯಲ್ಲಿ ಭಾಗವಹಿಸಿದ ದೇಶದ ಮುಖ್ಯಸ್ಥರಿಗೆ ಅದನ್ನು ತಲುಪಿಸಿದವು.



'ನಮ್ಮ ಮಳೆಕಾಡುಗಳಿಗಾಗಿ ಒಗ್ಗೂಡಿದ್ದೇವೆ' ಒಪ್ಪಂದ ಬ್ರೆಜಿಲ್ ನಲ್ಲಿ ಚಾರಿತ್ರಿಕ ಅಮೆಜಾನ್ ಶೃಂಗಸಭೆ

ವಸಂತರಾಜ ಎನ್.ಕೆ.

ಬ್ರೆಜಿಲ್‌ನ ಬೆಲೆಮ್‌ನಲ್ಲಿ ನಡೆದ ಅಮೆಜಾನ್ ಶೃಂಗಸಭೆಯ ಅಂತಿಮ ದಿನದಂದು (ಅಗಸ್ಟ್ 9) ಹನ್ನೆರಡು ದೇಶಗಳು ತಮ್ಮ ಹವಾಮಾನ ನಿಧಿಯ ಜವಾಬ್ದಾರಿಗಳನ್ನು ಪೂರೈಸಲು ಶ್ರೀಮಂತ ರಾಷ್ಟ್ರಗಳಿಗೆ ಕರೆ ನೀಡಿವೆ.

"ನಮ್ಮ ಮಳೆಕಾಡುಗಳಿಗಾಗಿ ಒಗ್ಗೂಡಿದ್ದೇವೆ" ಎಂಬ ಅಗಸ್ಟ್ 9ರ ಒಪ್ಪಂದವು ಅಮೆಜಾನ್, ಕಾಂಗೋ ಜಲಾನಯನ ಪ್ರದೇಶ ಮತ್ತು ಆಗ್ನೇಯ ಏಷ್ಯಾದ ಒಟ್ಟು 12 ದೇಶಗಳ ನಾಯಕರನ್ನು ಒಟ್ಟುಗೂಡಿಸಿತ್ತು. ಇವು ವಿಶ್ವದ ಅತ್ಯಂತ ವ್ಯಾಪಕವಾದ ಮಳೆಕಾಡುಗಳನ್ನು ಹೊಂದಿರುವ ಮೂರು ಪ್ರದೇಶಗಳು. ಈ ದೇಶಗಳಲ್ಲಿನ ಮಳೆಕಾಡುಗಳು ಹವಾಮಾನ ಬದಲಾವಣೆಯ ವಿರುದ್ಧದ ಹೋರಾಟದಲ್ಲಿ ನಿರ್ಣಾಯಕ ಪರಿಸರ ವ್ಯವಸ್ಥೆಗಳಾಗಿವೆ, ದೊಡ್ಡ ಪ್ರಮಾಣದ ಇಂಗಾಲದ ಡೈಆಕ್ಸೈಡ್ ಅನ್ನು ಹೀರಿಕೊಳ್ಳುವ ಸಾಮರ್ಥ್ಯ ಹೊಂದಿವೆ, ಜೊತೆಗೆ ವೈವಿಧ್ಯಮಯ ಪ್ರಭೇದಗಳಿಗೆ ವಾಸಸ್ಥಾನಗಳಾಗಿವೆ.

ಬ್ರೆಜಿಲ್, ಕೊಲಂಬಿಯಾ ಮತ್ತು ಪೆರು ಸೇರಿದಂತೆ ಅಮೆಜಾನ್ ರಾಷ್ಟ್ರಗಳ ನಾಯಕರು ಬ್ರೆಜಿಲ್ ನಗರವಾದ ಬೆಲೆಮ್‌ನಲ್ಲಿ ಜಾಗತಿಕ ಹವಾಮಾನ ತುರ್ತುಸ್ಥಿತಿಯ ಬಗ್ಗೆ ಹೆಚ್ಚುತ್ತಿರುವ ಕಾಳಜಿಯ ಮಧ್ಯೆ ವಿಶ್ವದ ಅತಿದೊಡ್ಡ ಮಳೆಕಾಡಿನ ಭವಿಷ್ಯದ ಕುರಿತು ಅಪರೂಪದ ಸಮಾವೇಶಕ್ಕಾಗಿ ಸೇರಿದ್ದರು.

"ಶ್ರೀಮಂತ ದೇಶಗಳು 200 ಶತಕೋಟಿ ಡಾಲರು ಒದಗಿಸುವ ಭರವಸೆಗೆ ಬದ್ಧರಾಗಿರಬೇಕು"

ಈ ಶೃಂಗಸಭೆಯನ್ನು ಬ್ರೆಜಿಲ್‌ನ ಎಡಪಂಥೀಯ ಅಧ್ಯಕ್ಷ ಲುಲಾ ಡ ಸಿಲ್ವಾ ಅವರು ಆಯೋಜಿಸಿದ್ದರು. ದೇಶದ ಹಿಂದಿನ ನಾಯಕ ಜೈರ್ ಬೋಲ್ಸನಾರೊ ಅವರ ಆಳ್ವಿಕೆಯಲ್ಲಿ ನಾಲ್ಕು ವರ್ಷಗಳ ಅಮೆಜಾನ್ ವಿನಾಶ ಮತ್ತು ಅಂತರರಾಷ್ಟ್ರೀಯ ಪ್ರತ್ಯೇಕತೆಯ ನಂತರ ಬ್ರೆಜಿಲಿಯನ್ ಸರ್ಕಾರದ ನೀತಿಯಲ್ಲಿ ಇದು ಜಾಗತಿಕ ಮಹತ್ವದ ತಿರುವನ್ನು ಪ್ರತಿನಿಧಿಸುತ್ತದೆ.

ಏಕೆಂದರೆ ಅಮೆಜಾನ್ ಮಳೆಕಾಡಿನ ಸುಮಾರು 60 ಪ್ರತಿಶತ ಬ್ರೆಜಿಲ್‌ನಲ್ಲಿದೆ. 20 ರಿಂದ 25 ಪ್ರತಿಶತದಷ್ಟು ಅರಣ್ಯ ನಾಶವಾದಾಗ, ಮಳೆಯು ಗಮನಾರ್ಹವಾಗಿ ಕ್ಷೀಣಿಸುತ್ತದೆ, ಅರ್ಧಕ್ಕಿಂತ ಹೆಚ್ಚು ಪ್ರದೇಶವನ್ನು ಉಷ್ಣವಲಯದ ಸವನ್ನಾವಾಗಿ ಪರಿವರ್ತಿಸುತ್ತದೆ ಮತ್ತು ಅಪಾರ ಜೀವವೈವಿಧ್ಯದ ನಷ್ಟವನ್ನು ಉಂಟುಮಾಡುತ್ತದೆ ಎಂದು ಕೆಲವು ವಿಜ್ಞಾನಿಗಳು ಎಚ್ಚರಿಸಿದ್ದಾರೆ

ಅಂತರರಾಷ್ಟ್ರೀಯ ಸಮುದಾಯವು ಅರಣ್ಯಗಳು ಒದಗಿಸುವ ನಿರ್ಣಾಯಕ ಸೇವೆಗಳಿಗೆ ಪಾವತಿಸಬಹುದಾದ ಹಣಕಾಸು ಕಾರ್ಯವಿಧಾನವನ್ನು ಅಭಿವೃದ್ಧಿಪಡಿಸಲು ಜಂಟಿ ಹೇಳಿಕೆಯು ಕರೆ ನೀಡಿದೆ.

"ಜೀವ–ವೈವಿಧ್ಯದ ಸಂರಕ್ಷಣೆ ಮತ್ತು ಸುಸ್ಥಿರ ಬಳಕೆಗೆ ನಿಯೋಜಿಸಲಾದ ಸಂಪನ್ಮೂಲಗಳ ನಿರ್ವಹಣೆಯ ಮೇಲೆ ನಮ್ಮ ದೇಶಗಳು ಹೆಚ್ಚಿನ ಪ್ರಭಾವವನ್ನು ಬೀರಬೇಕು" ಎಂದು ಒಪ್ಪಂದವು ಅಭಿವೃದ್ಧಿಶೀಲ ರಾಷ್ಟ್ರಗಳ ಬಗ್ಗೆ ಹೇಳಿದೆ.

ಜೀವ–ವೈವಿಧ್ಯ ಸಂರಕ್ಷಣೆಗಾಗಿ ವರ್ಷಕ್ಕೆ 200 ಶತಕೋಟಿ ಡಾಲರು ಒದಗಿಸುವ ಈಗಾಗಲೇ ಕೊಟ್ಟಿರುವ ಭರವಸೆಗೆ ಬದ್ಧರಾಗಿರಬೇಕು ಎಂದು ಅಭಿವೃದ್ಧಿ ಹೊಂದಿದ ರಾಷ್ಟ್ರಗಳನ್ನು ಶೃಂಗಸಭೆ ಒತ್ತಾಯಿಸಿತು ಮತ್ತು ವಾರ್ಷಿಕವಾಗಿ 100 ಶತಕೋಟಿ ಡಾಲರು ಹವಾಮಾನ ಹಣಕಾಸು ಒದಗಿಸುವ ಹಿಂದಿನ ಭರವಸೆಯನ್ನು ಪೂರೈಸಲಾಗಿಲ್ಲ ಎಂದು ಕಳವಳ ವ್ಯಕ್ತಪಡಿಸಿತು.

ಶೃಂಗಸಭೆಯಲ್ಲಿ ಮಾತನಾಡಿದ ಬ್ರೆಜಿಲ್ ಅಧ್ಯಕ್ಷ ಲುಲಾ ಡ ಸಿಲ್ವಾ, ಅಬುಧಾಬಿಯಲ್ಲಿ ಇದೇ ಅಕ್ಟೋಬರ್‌ನ ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ಸಮ್ಮೇಳನದ ಶೃಂಗಸಭೆ ಅಥವಾ COP28 ಗಿಂತ ಮುಂಚಿತವಾಗಿ ಮಳೆಕಾಡು ರಾಷ್ಟ್ರಗಳನ್ನು ಏಕೀಕರಿಸಲು ಅಮೆಜಾನ್ ಶೃಂಗಸಭೆಯು ಅವಕಾಶವನ್ನು ನೀಡಿದೆ ಎಂದು ಹೇಳಿದರು.

ಜಾಗತಿಕ ಹವಾಮಾನ ಮೇಲಾವರಣ ಮಾತ್ರವಲ್ಲ, ಅದರಡಿಯ ಜನರನ್ನೂ ರಕ್ಷಿಸಬೇಕು: ಲೂಲಾ

"ಶ್ರೀಮಂತ ಜಗತ್ತು ಅಸ್ತಿತ್ವದಲ್ಲಿರುವ ಅರಣ್ಯವನ್ನು ಪರಿಣಾಮಕಾರಿಯಾಗಿ ಸಂರಕ್ಷಿಸಲು ಬಯಸಿದರೆ, ಅವರು ಮೇಲಾವರಣವನ್ನು ನೋಡಿಕೊಳ್ಳಲು ಮಾತ್ರವಲ್ಲದೆ ಅಡಿಯಲ್ಲಿ ವಾಸಿಸುವ ಜನರನ್ನು ನೋಡಿಕೊಳ್ಳಲು ಹಣವನ್ನು ಪಾವತಿಸಬೇಕಾಗುತ್ತದೆ. ಇದನ್ನು ಶ್ರೀಮಂತ ಜಗತ್ತಿಗೆ ಹೇಳುವ ಉದ್ದೇಶದಿಂದ COP28 ಗೆ ಹೋಗುತ್ತಿದ್ದೇವೆ.," ಎಂದು ಅವರು ಹೇಳಿದರು.

ಹೇಳಿಕೆಯು ಪರಿಸರ ಕ್ರಮಗಳ ವೇಷದಲ್ಲಿ ವ್ಯಾಪಾರ ನಿರ್ಬಂಧಗಳನ್ನು ಹೇರುವುದನ್ನು ಟೀಕಿಸಿದೆ. ಅರಣ್ಯನಾಶಕ್ಕೆ ಸಂಬಂಧಿಸಿದ ಸರಕುಗಳನ್ನು ಆಮದು ಮಾಡಿಕೊಳ್ಳುವುದನ್ನು ನಿಷೇಧಿಸುವ ಯುರೋಪಿಯನ್ ಒಕ್ಕೂಟದ ಕಾನೂನಿನ ಪರೋಕ್ಷ ಟೀಕೆಯಿದು.



ಅಮೆಜಾನ್ ಶೃಂಗಸಭೆಯಲ್ಲಿ ಬೊಲಿವಿಯಾ, ಬ್ರೆಜಿಲ್, ಕೊಲಂಬಿಯಾ, ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯ, ಈಕ್ವೆಡಾರ್, ಗಯಾನಾ, ಇಂಡೋನೇಷಿಯಾ, ಪೆರು, ಕಾಂಗೋ ಗಣರಾಜ್ಯ, ಸುರಿನಾಮ್, ವೆನೆಜುವೆಲಾ ಮತ್ತು ಸೇಂಟ್ ವಿನ್ಸೆಂಟ್ ಮತ್ತು ಗ್ರೆನಡೈನ್ಸ್ ನಾಯಕರು ಈ ಹೇಳಿಕೆಗೆ ಸಹಿ ಹಾಕಿದ್ದಾರೆ.

ಶೃಂಗಸಭೆಯಲ್ಲಿ ಬೊಲಿವಿಯಾದ ಅಧ್ಯಕ್ಷ ಲೂಯಿಸ್ ಆರ್ಸ್, ಕೊಲಂಬಿಯಾದ ಅಧ್ಯಕ್ಷ, ಗುಸ್ಟಾವೊ ಪೆಟ್ರೋ, ಗಯಾನಾದ ಪ್ರಧಾನ ಮಂತ್ರಿ, ಮಾರ್ಕ್ ಫಿಲಿಪ್ಸ್ ಮತ್ತು ಪೆರುವಿನ ದಿನಾ ಬೊಲುವಾರ್ಟೆ ಭಾಗವಹಿಸಿದ್ದರು. ಎಂಟು ದೇಶಗಳ ಅಮೆಜಾನ್ ಸಹಕಾರ ಒಪ್ಪಂದ ಸಂಸ್ಥೆ (ACTO), ಈಕ್ವೆಡಾರ್ ಮತ್ತು ಸುರಿನಾಮ್ನ ಇತರ ಸದಸ್ಯರು ಹಿರಿಯ ಪ್ರತಿನಿಧಿಗಳನ್ನು ಕಳುಹಿಸಿದ್ದರು.

"ಇದು ಒಂದು ಮಹತ್ವದ ಕ್ಷಣ.. ..ಅಮೆಜಾನ್ ಮತ್ತು ಅದರ ಜನತೆಯ ರಕ್ಷಣೆಯಲ್ಲಿ ನಾವು ಏನು ಮಾಡುತ್ತಿದ್ದೇವೆ ಎಂಬುದು ಐತಿಹಾಸಿಕವಾಗಿದೆ." ಲುಲಾ ಟ್ವೀಟ್ ಮಾಡಿದ್ದರು.

ಇದಕ್ಕೆ ಒಂದು ದಿನ ಮುಂಚೆ, ಅಮೆಜಾನ್ ಸಹಕಾರ ಒಪ್ಪಂದ ಸಂಸ್ಥೆಯ (ACTO) ಎಂಟು ದೇಶಗಳು – ಬೊಲಿವಿಯಾ, ಬ್ರೆಜಿಲ್, ಕೊಲಂಬಿಯಾ, ಈಕ್ವೆಡಾರ್, ಗಯಾನಾ, ಪೆರು, ಸುರಿನಾಮ್ ಮತ್ತು ವೆನೆಜುವೆಲಾ – ವಿಸ್ತಾರವಾದ ದಕ್ಷಿಣ ಅಮೆರಿಕಾದ ಮಳೆಕಾಡುಗಳನ್ನು ಉಳಿಸಲು "ಹೊಸ ಮತ್ತು ಮಹತ್ವಾಕಾಂಕ್ಷೆಯ ಹಂಚಿಕೆಯ ಕಾರ್ಯಸೂಚಿಯನ್ನು" ಅಳವಡಿಸಿಕೊಂಡ ಬೆಲೆಮ್ ಘೋಷಣೆಯನ್ನು ಅಂಗೀಕರಿಸಿದವು.

2030 ರ ವೇಳೆಗೆ ಅರಣ್ಯನಾಶವನ್ನು ನಿಲ್ಲಿಸುವ ಸಂಭವನೀಯ ಒಪ್ಪಂದ, ಅತಿರೇಕದ ಅಕ್ರಮ ಗಣಿಗಾರಿಕೆ ಮತ್ತು ಮಳೆಕಾಡು ಪ್ರದೇಶದ ಮೇಲೆ ತಮ್ಮ ಹಿಡಿತವನ್ನು ಬಿಗಿಗೊಳಿಸುತ್ತಿರುವ ಸಂಘಟಿತ ಅಪರಾಧ ಗುಂಪುಗಳ ವಿರುದ್ಧ ಹೋರಾಡಲು ಜಂಟಿ ಪ್ರಯತ್ನಗಳು, ಅಮೆಜಾನ್‌ನಲ್ಲಿ ತೈಲ ಮತ್ತು ಅನಿಲ ಪರಿಶೋಧನೆಯನ್ನು ಕೊನೆಗೊಳಿಸುವುದು – ಇವು 14 ವರ್ಷಗಳಲ್ಲಿ ACTO ನ ಮೊದಲ ಸಭೆಯಲ್ಲಿ ಚರ್ಚಿತವಾದ ವಿಷಯಗಳು.

ಆದಾಗ್ಯೂ, ಒಪ್ಪಂದವು 2030 ರ ವೇಳೆಗೆ ಶೂನ್ಯ ಅರಣ್ಯನಾಶಕ್ಕೆ ಘೋಷಣೆ ಬದ್ಧವಾಗಲಿಲ್ಲ. ಬದಲಿಗೆ, ಸ್ಥಳೀಯ ಹಕ್ಕುಗಳ ರಕ್ಷಣೆ ಮತ್ತು ನೀರಿನ ನಿರ್ವಹಣೆ, ಆರೋಗ್ಯ ಮತ್ತು ಸುಸ್ಥಿರ ಅಭಿವೃದ್ಧಿಯ ಮೇಲೆ ಸಹಕಾರದ ಮೂಲಕ ವೈಯಕ್ತಿಕ ಅರಣ್ಯನಾಶದ ಗುರಿಗಳನ್ನು ಅನುಸರಿಸಲು ಅಮೆಜಾನ್ ದೇಶಗಳ ನಡುವೆ ಮೈತ್ರಿಯನ್ನು ರಚಿಸಿತು.

ಈ ಘೋಷಣೆಯು ವಾರ್ಷಿಕವಾಗಿ ಭೇಟಿಯಾಗಲು ಮತ್ತು ಅಮೆಜಾನ್ ಮಳೆಕಾಡಿಗೆ ಸಂಬಂಧಿಸಿದ ವಿಜ್ಞಾನದ ಬಗ್ಗೆ ಅಧಿಕೃತ ವರದಿಗಳನ್ನು ತಯಾರಿಸಲು ವಿಜ್ಞಾನ ಸಂಸ್ಥೆಯನ್ನು ಸ್ಥಾಪಿಸಿತು, ಇದು ಹವಾಮಾನ ಬದಲಾವಣೆಯ ವಿಶ್ವಸಂಸ್ಥೆಯ IPCCಯನ್ನು ಹೋಲುತ್ತದೆ. ಅಧಿಕಾರಿಗಳು ಮುಂಬರುವ ತಿಂಗಳುಗಳಲ್ಲಿ ಹೆಚ್ಚು ವಿವರವಾದ ಒಪ್ಪಂದಕ್ಕೆ ಬರಲಿದ್ದಾರೆ.

ಜನಾಂದೋಲನಗಳ ಸಮಾನಾಂತರ ಶೃಂಗಸಭೆಯ ಹಕ್ಕೊತ್ತಾಯಗಳು

ಈ ಶೃಂಗಸಭೆಗಳಿಗೆ ಪೂರ್ವಭಾವಿಯಾಗಿ ಅಮೆಜಾನ್ ಪ್ರದೇಶದ ದೇಶಗಳ ಜನಾಂದೋಲನಗಳು ಮತ್ತು ಸ್ಥಳೀಯ ಬುಡಕಟ್ಟು ಜನಸಂಘಟನೆಗಳು ಆಗಸ್ಟ್ 4ರಿಂದ 8 ರ ವರೆಗೆ ಬೆಲೆಮ್‌ನಲ್ಲಿ ಸಮಾನಾಂತರ ಶೃಂಗಸಭೆಯಲ್ಲಿ ನೆರೆದಿದ್ದವು. ಪರಿಸರ, ಜೀವವೈವಿಧ್ಯ ಮತ್ತು ಮನುಕುಲಧ ರಕ್ಷಣೆಗಾಗಿ 29 ಹಕ್ಕೊತ್ತಾಯಗಳ ಸಾಮೂಹಿಕ ಪತ್ರವನ್ನು ರಚಿಸಿದವು. ಅಮೆಜಾನ್ ಶೃಂಗಸಭೆಯಲ್ಲಿ ದೇಶದ ಮುಖ್ಯಸ್ಥರಿಗೆ ಅದನ್ನು ತಲುಪಿಸಲಾಯಿತು.

ಜನಾಂದೋಲನಗಳು ಸಮಾನಾಂತರ ಶೃಂಗಸಭೆಯಲ್ಲಿ ಅಂಗೀಕರಿಸಿದ ಪ್ರಮುಖ ಹಕ್ಕೊತ್ತಾಯಗಳು ಹೀಗಿವೆ:

1. ಅಮೆಜಾನ್ ರಕ್ಷಿಸಲು ಹಿಂತಿರುಗಲಾದ ಹಂತವನ್ನು ಮುಟ್ಟುವುದನ್ನು ತಪ್ಪಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಿ, 2025 ರ ವೇಳೆಗೆ ಅಮೇಜಾನ್ ಪ್ರದೇಶದ 80 ಪ್ರತಿಶತವನ್ನು ರಕ್ಷಿಸುವ ಯೋಜನೆಯ **ಪುಟ 15 ಕ್ಕೆ**

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**